ಸಂಪುಟ: 14 Volume | ಸಂಚಿಕೆ: 109 Issue | ಪುಟಗಳು 08 Pages | ಮಂಗಳವಾರ 04 ಆಗಸ್ಟ್ 2026 | ₹4 | PRGINO.120927 (RNINO: KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450, 9845028349

ಬೆಂಗಳೂರು | ಹುಬ್ಬಳ್ಳಿ | ಬೀದರ ಆವೃತ್ತಿ: ಕಲ್ಬುರ್ಗಿ, ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ, ಬಾಗಲಕೋಟೆ, ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ


**ಬೆಳಗು**

ಅನ್ಯರನ್ನು ಆಳು ಮಾಡದೆ,
ತನ್ನ ತಾನಾಳಿದರೆ ಅದೇ
ಬಿಡುಗಡೆ.

–ದ.ರಾ.ಬೇಂದ್ರೆ



ಬೆಂಗಳೂರು: ಮಾಜಿ ಮುಖ್ಯ ಮಂತ್ರಿ ಸಿದ್ದರಾಮಯ್ಯರವರ ಹುಟ್ಟು ಹಬ್ಬದ ನಿಮಿತ್ಯ ಸೂಮೂವಾರ. ಮಾಜಿ ಸಚಿವ ರಾಜಶೇಖರ ಪಾಟೀಲ, ಹಾಗೂ ವಿಧಾನ ಪರಿಷತ್ ಸದಸ್ಯ ಡಾ. ಚಂದ್ರಶೇಖರ ಪಾಟೀಲರವರು ಅವರನ್ನು ಬೆಂಗಳೂರಿನಲ್ಲಿ ಭೇಟಿ ಮಾಡಿ ಶುಭಹಾರೈಸಿದರು.



ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಸಚಿವರಾದ ಎಂ.ಬಿ.ಪಾಟೀಲ್, ಕೆ.ಜೆ. ಜಾರ್ಜ್, ರಾಮಲಿಂಗ ರೆಡ್ಡಿ, ಸಂಸದ ತುಕಾರಾಂ, ರಾಜೇಗೌಡ, ಶಾಸಕರಾದ ಕೋನರೆಡ್ಡಿ, ಡಾ.ಶ್ರೀನಿವಾಸ್, ಐವಾನ್ ಡಿಸೋಜಾ, ಎಂ.ವೈ. ಪಾಟೀಲ್, ಅಶೋಕ್ ಪಟ್ಟಣ, ತಿಪ್ಪಣ್ಣಪ್ಪ ಕಮಕನೂರು, ಮಾಜಿ ಶಾಸಕ ಭೀಮಾ ನಾಯಕ್ ಅವರು ಸಿದ್ದರಾಮಯ್ಯ ಅವರಿಗೆ ಹುಟ್ಟು ಹಬ್ಬದ ಶುಭಾಶಯ ಕೋರಿದರು.

## ಆಸ್ತಿ ಮುಟೇಶನ್‌ಗೆ ಲಂಚ: ಲೋಕಾ ಬಲೆಗೆ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ವೃದ್ಧ ಮಹಿಳೆಯೊಬ್ಬರ ಹೆಸರಿನಲ್ಲಿ ಮೃತ ಪತಿಯ ಆಸ್ತಿಯನ್ನು ಮುಟೇಶನ್ ಮಾಡಲು 9950ರೂ.ಗಳ ಲಂಚ ಪಡೆಯುತ್ತಿದ್ದ ಹಾಗರಗಾ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ವೇಆಂಗನಿಗೆ ಲೋಕಾಯುಕ್ತರು ಕಾರ್ಯಾಚರಣೆ ಕೈಗೊಂಡು ಬಂಧಿಸಿದ ಘಟನೆ ಸೋಮವಾರ ವರದಿಯಾಗಿದೆ.



ಕರ್ನಾಟಕಲೋಕಾಯುಕ್ತಪೋಲಿಸ್ಅಧೀಕ್ಷಕ ಸಿದ್ಧರಾಜು ಸಿ., ಅವರ ಮಾರ್ಗದರ್ಶನದಲ್ಲಿ ಸಂಜೀವ್ಅವರುನೀಡಿದದೂರಿನಮೇಲೆಕಾರ್ಯಾಚರಣೆ ನಡೆಯಿತು. ಅತ್ತೆ ಯ ಗಂಡ ಕಿಶನ್ ಪವಾರ್ ಅವರು ಮೃತಪಟ್ಟಿದ್ದುಅವರುಸದ್ಯಮುಂಬೈಯಲ್ಲಿವಾಸವಾಗಿದ್ದು ಮತ್ತು ಅವರಿಗೆ ಸುಮಾರು 65 ವಯಸ್ಸಾಗಿದ್ದರಿಂದ ಓಡಾಡಿ ತನ್ನ ಗಂಡನ ಆಸ್ತಿಯನ್ನು ತನ್ನ ಹೆಸರಿಗೆ ವರ್ಗಾವಣೆಮಾಡಿಕೊಳ್ಳಲುಕಷ್ಟಕರವಾಗಿದ್ದರಿಂದ,ಮೃತ ನನ್ನ ಮಾವನಾದ ಕಿಶನ್ ಪವಾರ್ ಅವರ ಹೆಸರಿನಲ್ಲಿ ಹಾಗರಗಾ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಆಜಾದಪೂರ್ ಗ್ರಾಮದ ಖುಲ್ಲಾ ನಿವೇಶನ ಸಂ. 12 ಸರ್ವೆ ನಂ. 111/1ನೇದ್ದನ್ನು ತನ್ನ ಹೆಸರಿಗೆ ವರ್ಗಾವಣೆ ಮಾಡಿಕೊಡುವಂತೆ ನನ್ನ ಅತ್ತೆ ಯಾದ ದಸ್ಮಾಬಾಯಿ ಕೀಶನ ಪವಾರ್ ಅವರು ನನಗೆ ತಿಳಿಸಿದ್ದು, ಅದರಂತೆ ನನ್ನ ಮಾವನ ಹೆಸರಿಗೆ ಇರುವ ಸದರಿನಿವೇಶನದದಾಖಲಾತಿಗಳುಸುಮಾರು ವರ್ಷಗಳಿಂದ ನನ್ನ ಮನೆಯಲ್ಲಿಯೇ ಇದ್ದು, ಅದರಂತೆನಾನುಸದರಿನಿವೇಶನಕ್ಕೆಸಂಬಂಧಪಟ್ಟ ದಾಖಲಾತಿಗಳನ್ನು, ನನ್ನ ಮಾವನ ಮರಣ ಪ್ರಮಾಣ ಪತ್ರ, ಅತ್ತೆಯವರು ನೀಡಿದ ಸ್ಟ್ಯಾಂಪ್ ಹಾಗೂ ಇತರೆ ದಾಖಲಾತಿಗಳನ್ನು ಕೇಳಿದಾಗ, ಅದನ್ನು ಒಪ್ಪಿಸಿದ್ದರೂ ಸಹ ಮುಟೇಶನ್ ಮಾಡಿರಲಿಲ್ಲ. ಹಣಕ್ಕಾಗಿ ಬೇಡಿಕೆ ಇಟ್ಟಿದ್ದರಿಂದ 9950ರೂ.ಗಳ ಲಂಚ ಸ್ವೀಕರಿಸುವಾಗ ಕಾರ್ಯದರ್ಶಿ ಲೋಕಾಯುಕ್ತರಬಲೆಗೆಸಿಕ್ಕಿಬಿದ್ದಎಂದು ತನಿಖಾಧಿಕಾರಿ ಪಿಐ ರವಿ ಪವಾರ್ ಅವರು ತಿಳಿಸಿದ್ದಾರೆ.

## 150ಕ್ಕೂ ಹೆಚ್ಚುಮಕ್ಕಳಿಗೆ ಪ್ರತಿಭಾ ಪುರಸ್ಕಾರ

• ಮಲ್ಲಮ್ಮ ನುಡಿ ವಾರ್ತೆ ಪೀಣ್ಯ, ದಾಸರಹಳ್ಳಿ

ಸಹಾಯ ಹಸ್ತ ಸೇವಾ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷರಾದ ಡಾ.ರುದ್ರೇಗೌಡ ಅವರ ಹಾಗೂ ಜಿಬಿಎ ಆಕಾಂಕ್ಷಿ ಭಾಗ್ಯಲಕ್ಷ್ಮಿ ರುದ್ರೇಗೌಡ ಅವರ ನೇತೃತ್ವದಲ್ಲಿ ಡಾ. ರುದ್ರೇಗೌಡ ಅವರ ಹುಟ್ಟುಹಬ್ಬದ ಪ್ರಯುಕ್ತ ಪ್ರತಿವರ್ಷದಂತೆ ಈ ವರ್ಷವೂ ಕೂಡ ಎಸ್ ಎಸ್ ಎಲ್ ಸಿ ಮತ್ತು ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದ 150ಕ್ಕೂ ಹೆಚ್ಚುಮಕ್ಕಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನುರಾಜಗೋಪಾಲನಗರದಸಮುದಾಯ ಭವನದಲ್ಲಿ ಆಯೋಜಿಸಲಾಗಿತ್ತು. ಈ ಹುಟ್ಟುಹಬ್ಬ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮಕ್ಕೆ ಶ್ರೀ ಶ್ರೀ ನಿರ್ಮಲಾನಂದ ಸ್ವಾಮೀಜಿಗಳು ಆಗಮಿಸಿ ಹುಟ್ಟುಹಬ್ಬಕ್ಕೆ ಶುಭ ಕೋರಿ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನುನೆರವೇರಿಸಿ ಆಶೀರ್ವಚನ ನೀಡಿ ಆಶೀರ್ವದಿಸಿದರು. ಇದೆ ವೇಳೆ ಕುಟುಂಬಸ್ಥರಿಂದ



ಪಾದಪೂಜೆ ನೆರವೇರಿಸಲಾಯಿತು. ಈ ಸಂದರ್ಭದಲ್ಲಿ ಮಾಜಿ ಶಾಸಕ ಆರ್.ಮಂಜುನಾಥ್, ಜೆಡಿಎಸ್ ರಾಜ್ಯ ಉಪಾಧ್ಯಕ್ಷ ಡಾ.ಅಂದನಪ್ಪ, ಜೆಡಿಎಸ್ ರಾಜ್ಯ ಕಾರ್ಯದರ್ಶಿ ಹಾಗೂ ಮಾಜಿ ನಗರಸಭಾ ಸದಸ್ಯ ಎಂ.ಶಿವಣ್ಣ, ನರಸಿಂಹಮೂರ್ತಿ, ಎಚ್ ಜಿ.ಸುರೇಶ್, ಲಕ್ಷ್ಮಿ ಸಾಗರ್, ಶಿವೇಗೌಡ, ತಿಮ್ಮರಾಜು, ಬಿ ಆರ್. ಪ್ರಸಾದ್ (ರೇಣು), ವೆಂಕಟೇಶ್, ಶ್ರೀಧರ್, ಜಗದೀಶ್, ಸೌಮ್ಯ, ಹಾಗೂ ಮುಂತಾದವರು ಪಕ್ಷಾತೀತವಾಗಿ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಹುಟ್ಟುಹಬ್ಬಕ್ಕೆ ಶುಭ ಕೋರಿದರು.

# ಶಿವ ನೂತನ ಸಚಿವ ಸೈನ್ಯ

## ಕೊನೆಗೂ ಡಿಕೆ ಶಿವಕುಮಾರ್ ನೇತೃತ್ವದ ಕರ್ನಾಟಕ ಸಚಿವ ಸಂಪುಟ ವಿಸ್ತರಣೆ | ಹಲವರ ಅಸಮಾಧಾನ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಕೊನೆಗೂ ಡಿಕೆ ಶಿವಕುಮಾರ್ ನೇತೃತ್ವದ ಕರ್ನಾಟಕ ಸಚಿವ ಸಂಪುಟ ವಿಸ್ತರಣೆಯಾಗಿದೆ. ಇದು ಅಹಿಂದ (ಅಲ್ಪಸಂಖ್ಯಾತರು, ಹಿಂದುಳಿದವರು ಮತ್ತು ದಲಿತರು), ಸಿದ್ಧಾಂತ ಹಾಗೂ ಸಮಾನ ಪ್ರಾತಿನಿಧ್ಯದ ಕುರಿತು ಕಾಂಗ್ರೆಸ್ ಪಕ್ಷಕ್ಕಿರುವ ಧೃಡ ಬದ್ಧತೆಗೆ ಹಿಡಿದ ಕೈಗನ್ನಡಿಯಾಗಿದೆ ಎಂದು ಕಾಂಗ್ರೆಸ್ ವಕ್ತಾರರು ಹೇಳಿದ್ದಾರೆ.

**ಅಹಿಂದಕ್ಕೆ ಆದ್ಯತೆ:** ಮೊದಲ ಬಾರಿಗೆ, ಸಚಿವರು, ವಿಧಾನಸಭೆಯ ಅಧ್ಯಕ್ಷರು (ಸ್ಪೀಕರ್), ವಿಧಾನಸಭೆಯ ಉಪಾಧ್ಯಕ್ಷ, ಸಭಾಪತಿ ಸೇರಿ ಒಟ್ಟು 37 ಶಾಸನಸಭಾ ಹುದ್ದೆಗಳಲ್ಲಿ 23 ಸ್ಥಾನ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತ ಸಮುದಾಯಗಳ ನಾಯಕರಿಗೆ ನೀಡಲಾಗಿದೆ ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಬಿಆರ್ ನಾಯ್ಡು ತಿಳಿಸಿದ್ದಾರೆ.

ಇದು ರಾಜ್ಯದ ಇತಿಹಾಸದಲ್ಲೇ ಅಹಿಂದ ಸಮುದಾಯಗಳಿಗೆ ಸಿಕ್ಕಿರುವ ಅತ್ಯಂತ ದೊಡ್ಡ ಮಟ್ಟದ ಪ್ರಾತಿನಿಧ್ಯವಾಗಿದೆ ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಮತ್ತು ವಕ್ತಾರರೂ ಆಗಿರುವ ಬಿಆರ್ ನಾಯ್ಡು ಹೇಳಿದ್ದಾರೆ.

**ಹಿರಿಯರಿಗೂ ಮಣೆ:** ಯುವ ಹಾಗೂ ಹೊಸ ಮುಖಗಳಿಗೆ ಹೆಚ್ಚಿನ ಆದ್ಯತೆ ನೀಡುವುದಾಗಿ ಹೇಳುತ್ತಿದ್ದ ಕಾಂಗ್ರೆಸ್ ಹೈಕಮಾಂಡ್ ಮತ್ತೆ ಹಳೆಯಮುಖಗಳಿಗೆಮಣೆಹಾಕಿದ್ದು,ಮೂವರನ್ನುಹೊರತುಪಡಿಸಿದರೆ ಬಹುತೇಕ ಉಳಿದ ಎಲ್ಲರೂ 50 ವರ್ಷ ದಾಟಿದವರಾಗಿದ್ದಾರೆ. ಕೆ.ಎಚ್.ಮುನಿಯಪ್ಪ 78ವರ್ಷ ದಾಟಿದ್ದು, ಸಂಪುಟದಲ್ಲೇ ಅತ್ಯಂತ ಹಿರಿಯರಾಗಿದ್ದಾರೆ. ಕೆ.ಜೆ.ಜಾರ್ಜ್ ಬಳಿಕ ಹಿರಿಯರಾಗಿದ್ದಾರೆ.




**ಸಂಪುಟದ ಸಚಿವರು**

ಐದನೇಅವಧಿಗೆಶಾಸಕರಾಗಿರುವಎಚ್.ಸಿ.ಬಾಲಕೃಷ್ಣ, ಯು.ಟಿ.ಖಾದರ್, ಜಮೀರ್ ಅಹಮದ್ ಖಾನ್, ನಾಲ್ಕನೇ ಬಾರಿ ಶಾಸಕರಾಗಿರುವ ಚೆಲುವರಾಯ ಸ್ವಾಮಿ, ಈಶ್ವರ್ ಖಂಡ್ರೆ, ಲಕ್ಷ್ಮಣ ಸವದಿ, ಎಸ್.ಎಸ್.ಮಲ್ಲಿಕಾರ್ಜುನ್, ಬಿ.ನಾಗೇಂದ್ರ, ಪುಟ್ಟಣ್ಣ ಶೆಟ್ಟಿ, ಸಂತೋಷ್ ಲಾಡ್, ಸತೀಶ್ ಜಾರಕಿಹೊಳಿ, ಕೆ.ಎಂ.ಶಿವಲಿಂಗೇಗೌಡ, ಶರಣ ಪ್ರಕಾಶ್ ಪಾಟೀಲ್ ಸಂಪುಟದಲ್ಲಿದ್ದಾರೆ.

**2ಬಾರಿ ಆಯ್ಕೆಆದವರೂ..!**

3ನೇಬಾರಿಶಾಸಕರಾಗಿರುವಅಜಯ್‌ಧರ್ಮಸಿಂಗ್, ಪಿ.ಎಂ.ನರೇಂದ್ರಸ್ವಾಮಿ, ಪ್ರಿಯಾಂಕ ಖರ್ಗೆ, ರಘುಮೂರ್ತಿ, ಶಿವರಾಜ್ ತಂಗಡಗಿ, 2ನೇ ಬಾರಿ ಶಾಸಕರಾಗಿರುವ ಕಾಶಪ್ಪನವರ್, ಮಧುಬಂಗಾರಪ್ಪ, ರಿಜ್ವಾನ್ ಅರ್ಷದ್, ಬಿ.ಎಸ್.ಬೈರತಿ ಸುರೇಶ್, ಮೊದಲ ಬಾರಿ ಶಾಸಕರಾಗಿರುವ ಕೆ.ಎಸ್.ಬಸವಂತಪ್ಪ, ಕೆ.ಎಚ್.ಮುನಿಯಪ್ಪ, ಇತರರು ಸಚಿವರಾಗಿದ್ದಾರೆ.

**ಬ್ಲಾಕ್‌ಮೇಲ್‌ಗೆಮಣಿ..?**

ಸಚಿವ ಸ್ಥಾನ ನೀಡದೇ ಇದ್ದರೆ ಕುಟುಂಬ ಸಮೇತ ರಾಜೀನಾಮೆ ನೀಡುವುದಾಗಿ ಎಸ್.ಎಸ್.ಮಲ್ಲಿಕಾರ್ಜುನ ಅವರ ಬ್ಲಾಕ್‌ಮೇಲ್‌ಗೆ ಕಾಂಗ್ರೆಸ್ ಹೈಕಮಾಂಡ್ ಮಣಿದಿದೆ ಎಂದು ತಿಳಿದು ಬಂದಿದೆ. ಮೊದಲ ಪಟ್ಟಿಯಲ್ಲಿ ಹೆಸರು ಪ್ರಕಟಗೊಂಡಿದ್ದ ಉತ್ತರ ಕನ್ನಡ ಜಿಲ್ಲೆಯ ಮಂಕಾಳಸುಬ್ಬವೈದ್ಯಕೊನೆಕ್ಷಣದಲ್ಲಾದಬದಲಾವಣೆಯಿಂದಅವಕಾಶಕಳೆದುಕೊಂಡಿದ್ದಾರೆ.

**ಸಿದ್ದು ಮೇಲುಗೈ..!**

ಮಾಜಿ ಸಿಎಂ ಸಿದ್ದರಾಮಯ್ಯ ಅವರ ಕೈಮೇಲಾಗಿದ್ದು, ಸಂಪುಟದಲ್ಲಿ ಅವರ ಆಪ್ತರ ಸಂಖ್ಯೆಯೇ ಹೆಚ್ಚಾಗಿದೆ. ಡಾ. ಜಿ. ಪರಮೇಶ್ವರ್, ಕೆ.ಜೆ. ಜಾರ್ಜ್, ಎಂ.ಬಿ. ಪಾಟೀಲ್, ಕೃಷ್ಣ ಬೈರೇಗೌಡ, ರುದ್ರಪ್ಪ ಲಮ್ಹಾಣಿ, ಬೈರತಿ, ಯತೀಂದ್ರ, ಈಶ್ವರ್ ಖಂಡ್ರೆ, ಕಾಶಪ್ಪನವರ್, ತಂಗಡಗಿ, ಪುಟ್ಟರಂಗಶೆಟ್ಟಿ, ಸಂತೋಷ್ ಲಾಡ್, ಅಜಯ್ ಸಿಂಗ್, ಗಾಯತ್ರಿಶಾಂತೇಗೌಡ, ಜಮೀರ್ ಸಚಿವರಾಗಿದ್ದಾರೆ.

## ಹಳಿಯಾಳ ಅರಣ್ಯ ವಲಯದಲ್ಲಿ ಅಧಿಕಾರ ಹಸ್ತಾಂತರ..!



**ಹಳಿಯಾಳ:** ಹಳಿಯಾಳ ಅರಣ್ಯ ವಿಭಾಗ, ಹಳಿಯಾಳ ವಲಯದ ನೂತನ ವಲಯ ಅರಣ್ಯ ಅಧಿಕಾರಿಯಾಗಿ ಶ್ರೀ ಎನ್.ಎಲ್. ನದಾಫ್ ಅವರು ಇಂದು ಅಧಿಕಾರ ಸ್ವೀಕರಿಸಿದರು. ದಾಂಡೇಲಿ ವಲಯದಿಂದ ವರ್ಗಾವಣೆಯಾಗಿ ಬಂದಿರುವ ನದಾಫ್ ಅವರಿಗೆ ನಿರ್ಗಮಿತ ವಲಯ ಅರಣ್ಯ ಅಧಿಕಾರಿ ಶ್ರೀ ಬಸವರಾಜ ಎಂ ಅವರು ಅಧಿಕಾರ ಹಸ್ತಾಂತರಿಸಿದರು. ಕಳೆದ 2 ವರ್ಷಗಳಿಂದ ಹಳಿಯಾಳ ವಲಯದಲ್ಲಿ ಸೇವೆ ಸಲ್ಲಿಸಿದ ಬಸವರಾಜ್ ಅವರು ಅಚ್ಚುಕಟ್ಟಾದ ಕೆಲಸ, ಸಿಬ್ಬಂದಿಯೊಂದಿಗೆ ಸ್ನೇಹಪರ ವರ್ತನೆ ಮತ್ತು ಸಾರ್ವಜನಿಕರ ದೂರಿಗೆ ತಕ್ಷಣ ಸ್ಪಂದಿಸುವ ಮೂಲಕ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದರು. ಈಗ ಅವರು ವನ್ಯಜೀವಿ ವಿಭಾಗದ ಪಣಸೋಲಿ ವಲಯಕ್ಕೆ ವರ್ಗಾವಣೆಗೊಂಡಿದ್ದಾರೆ. ಈ ಸಂದರ್ಭದಲ್ಲಿ ವಲಯದ ಎಲ್ಲಾ ಅರಣ್ಯ ಸಿಬ್ಬಂದಿಗಳು ಉಪಸ್ಥಿತರಿದ್ದರು. ನೂತನ ಖಈಔ ಎನ್.ಎಲ್. ನದಾಫ್ ಅವರು ಅರಣ್ಯ ಸಂರಕ್ಷಣೆ ಮತ್ತು ಸಾರ್ವಜನಿಕರ ಸಮಸ್ಯೆಗಳ ಪರಿಹಾರಕ್ಕೆ ಆದ್ಯತೆ ನೀಡುವುದಾಗಿ ತಿಳಿಸಿದರು.

## ಪತ್ರಿಕೆಯ ಬೆಂಗಳೂರು ಆವೃತ್ತಿಗೆ ಶುಭಾಶಯ

• ಮಲ್ಲಮ್ಮ ನುಡಿ ವಾರ್ತೆ ಬಸವಕಲ್ಯಾಣ

ಸುಮಾರು 14 ವರ್ಷಗಳಿಂದ ಮಲ್ಲಮ್ಮ ನುಡಿ ಪ್ರಾದೇಶಿಕಕನ್ನಡದಿನಪತ್ರಿಕೆಯಇವಾಗಬೆಂಗಳೂರು ಆವೃತ್ತಿಆರಂಭವಾಗುತ್ತಿರುವುದುಸಂತಸತಂದಿದೆ ಕನ್ನಡ ಭಾಷೆ ಸಂಸ್ಕೃತಿ ಹಾಗೂ ಸಮಾಜದ ಸಮಸ್ಯೆಗಳನ್ನುಜನರಮುಂದಿಡುವಮಾಧ್ಯಮಗಳ ಅಗತ್ಯ ಇಂದು ಹೆಚ್ಚಾಗಿದೆ ಇಂತಹ ಸಂದರ್ಭದಲ್ಲಿ ಮಲ್ಲಮ್ಮ ನುಡಿ ಕನ್ನಡ ದಿನಪತ್ರಿಕೆ ಬೆಂಗಳೂರುನಲಿ ತನ್ನ ಹೂಸ ಆವೃತ್ತಿ ಆರಂಭಿಸುತ್ತಿರುವ ಶ್ಲಾಘನೀಯ ಕಾರ್ಯವಾಗಿದೆ ಎಂದು ತಾಲೂಕಿನ ಗದಲೇಗಾಂವ



ಗ್ರಾಮದಶಿಕ್ಷಣಮತ್ತುಸಾಮಾಜಿಕಚಿಂತಕರಾದ ಡಾ.ಶರಣಪ್ಪಗದಲೇಗಾಂವಅಭಿನಂದಿಸಿದ್ದಾರೆ. ಪತ್ರಿಕೆಯು ಸದಾ ಸತ್ಯ. ನಿಷ್ಪಕ್ಷಪಾತ ಹಾಗೂ ಜನ ಪರ ಪತ್ರಿ ಕೋದ್ಯಮದ ಮೂಲಕ ಸಮಾಜದ ಧ್ವನಿಯಾಗಿಕಾರ್ಯನಿರ್ವಾಹಿಲಿ.ರಾಜ್ಯದಜನರ ವಿಶ್ವಾಸಗಳಿಸಿ ಇನ್ನಷ್ಟು ಯಶಸ್ಸು ಪ್ರಗತಿ ಹಾಗೂ ಕೀರ್ತಿ ಹೊಂದಲ್ಲಿ ಹಾಗೂ ಮಾನ್ಯ ಸಂಪಾದಕರು ಹಾಗೂ ನಿಮ್ಮ ಬಳಗಕ್ಕೆ ಅಭಿನಂದನೆಗಳು.

## ಗಂಗಾಧರಯ್ಯ ಬಿ ಆರ್‌ಗೆ ಡಾಕ್ಟರೇಟ್ ಪ್ರದಾನ

• ಮಲ್ಲಮ್ಮ ನುಡಿ ವಾರ್ತೆ ಪೀಣ್ಯ, ದಾಸರಹಳ್ಳಿ

ಏಷ್ಯಾ ಇಂಟರ್ನ್ಯಾಷನಲ್ ಕಲ್ಚರಲ್ ರಿಸರ್ಚ್ ವಿಶ್ವವಿದ್ಯಾಲಯ ವತಿಯಿಂದ ಹೊಸೂರಿನಲ್ಲಿ ನಡೆದ ವಿವಿಧ ವಿಭಾಗಗಳಲ್ಲಿ ಸೇವೆ ಸಲ್ಲಿಸಿದ ಗಣ್ಯರಿಗೆ ಗೌರವ ಡಾಕ್ಟರೇಟ್ ಪದವಿ ಸಮಾರಂಭದಲ್ಲಿ ಬಾಗೂರು ಗುಬ್ಬಿ ತಾಲೂಕು ತುಮಕೂರು ಜಿಲ್ಲೆಗ್ರಾಮ ಬಗ್ಗ ವಾಸವಾಗಿರುವ ನಿವಾಸಿ ಸಮಾಜ ಸೇವಕ ಗಂಗಾಧರಯ್ಯ ಬಿ ಆರ್ ಅವರಿಗೆ ಸಮಾಜ ಸೇವಾ ಕ್ಷೇತ್ರದಲ್ಲಿ ಹಾಗೂ ಮುಖಂಡರು ಇವರ ಸೇವೆ ಸಲ್ಲಿಸಿದ ಸೇವೆಯನ್ನು ಗುರುತಿಸಿ ಗೌರವ ಡಾಕ್ಟರೇಟ್




ನೀಡಿ ಗೌರವಿಸಲಾಯಿತು. ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಡಾ.ಕೆ.ಎ. ಮನೋಕರನ್ ಮಾಜಿ ಶಾಸಕರು ತಮಿಳುನಾಡು, ಪ್ರಣವ ಸ್ವರೂಪ ಮುನಿ ನಿರಂಜನಪೂಜ್ಯ ಶ್ರೀ ಶ್ರೀ ಡಾ. ಕೃಷ್ಣಮೂರ್ತಿ ಮಹಾಸ್ವಾಮಿಗಳು, ಶ್ರೀ ಕ್ಷೇತ್ರ ಧರ್ಮ ಧ್ವಜ ಪ್ರತಿಷ್ಠಾನ ಮುಂತಾದವರು ಉಪಸ್ಥಿತರಿದ್ದರು.

# ರಸ ಗುರುಗಂಗಾ ನದಿಗೆ ಕೆಮಿಕಲ್ ರಸಾಯನ ವಿಷ..!

• ಮಲ್ಲಮ್ಮ ನುಡಿ ವಾರ್ತೆ ಮಾಣಿಕನಗರ

ಗುರುಗಂಗಾ ನದಿಗೆ ಕೆಮಿಕಲ್ ಮಿಶ್ರಿತ ನೀರು ಸೇರುತ್ತಿರುವುದರಿಂದ ಪರಿಸರ ಹಾಗೂ ಜನಜೀವನಕ್ಕೆ ಗಂಭೀರ ಅಪಾಯ ಎದುರಾಗಿದೆ ಎಂದು ಆರೋಪಿಸಿ, ಚುನಾಯಿತ ಜನಪ್ರತಿನಿಧಿಗಳು ಮತ್ತು ಸಂಬಂಧಿತ ಅಧಿಕಾರಿಗಳ ವಿರುದ್ಧ ಶ್ರೀ ಆನಂದರಾಜ ಪ್ರಭುಗಳು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

**ತುರ್ತುಕ್ರಮಕ್ಕೆ ಆಗ್ರಹ:** ಗುರುಗಂಗಾ ನದಿಯ ನೀರಿನ ಗುಣಮಟ್ಟವನ್ನು ತಕ್ಷಣ ವೈಜ್ಞಾನಿಕವಾಗಿ ಪರೀಕ್ಷಿಸಿ, ಮಾಲಿನ್ಯಕ್ಕೆ ಕಾರಣರಾದವರ ವಿರುದ್ಧ ಕಟ್ಟುನಿಟ್ಟಿನ ಕಾನೂನು ಕ್ರಮ ಕೈಗೊಳ್ಳಬೇಕು. ಜೊತೆಗೆ ನದಿಯನ್ನು ಮಾಲಿನ್ಯದಿಂದ ಮುಕ್ತಗೊಳಿಸಿ, ಸಾರ್ವಜನಿಕರ ಆರೋಗ್ಯ ಹಾಗೂ ಜಲಚರಗಳ ರಕ್ಷಣೆಗೆ ಸರ್ಕಾರ ತುರ್ತು ಕ್ರಮ ಕೈಗೊಳ್ಳಬೇಕು ಎಂದು ಅವರು ಆಗ್ರಹಿಸಿದ್ದಾರೆ.

**ಕಠಿಣ ಕ್ರಮಕ್ಕೆ ಒತ್ತಾಯ:** ನದಿಗೆ ಮಾಲಿನ್ಯ ಉಂಟುಮಾಡಿದವರನ್ನು ತಕ್ಷಣ ಗುರುತಿಸಿ, ಅವರ ವಿರುದ್ಧ ಕಾನೂನು ಪ್ರಕಾರ ಕಠಿಣ ಕ್ರಮ ಕೈಗೊಳ್ಳಬೇಕು. ಸಂಬಂಧಿತ ಇಲಾಖೆಗಳು ಸ್ಥಳಕ್ಕೆ ಭೇಟಿ ನೀಡಿ ನೀರಿನ ಮಾದರಿಗಳನ್ನು ಸಂಗ್ರಹಿಸಿ ವೈಜ್ಞಾನಿಕ ಪರೀಕ್ಷೆ ನಡೆಸಬೇಕು. ಮಾಲಿನ್ಯ ದೃಢಪಟ್ಟಲ್ಲಿ ಪರಿಸರ ಸಂರಕ್ಷಣಾ ಕಾನೂನುಗಳಡಿ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ವಿಧಿಸಬೇಕು ಎಂದು ಅವರು ಒತ್ತಾಯಿಸಿದ್ದಾರೆ.

**ಮಾಲಿನ್ಯದಿಂದ ರಕ್ಷಿಸಿ:** ಗುರುಗಂಗಾ ನದಿಯ ಪಾವಿತ್ರ್ಯವನ್ನು ಕಾಪಾಡುವುದು ಸರ್ಕಾರ, ಅಧಿಕಾರಿಗಳು ಮತ್ತು ಸಾರ್ವಜನಿಕರ ಜವಾಬ್ದಾರಿಯಾಗಿದೆ. ನದಿಯನ್ನು ಮಾಲಿನ್ಯದಿಂದ ರಕ್ಷಿಸಲು ಸರ್ಕಾರ ತುರ್ತು ಹಾಗೂ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಬೇಕು ಎಂದು ರಾಜಶೇಖರ ಪಾಟೀಲ ಆಗ್ರಹಿಸಿದ್ದಾರೆ.

ಗುರುಗಂಗಾ ನದಿ ಸಾವಿರಾರು ಜನರ ಜೀವನಾಡಿಯಾಗಿದೆ. ಇಂತಹ ನದಿಗೆ ಮಾಲಿನ್ಯಕಾರಕ ನೀರು ಸೇರುತ್ತಿದ್ದರೂ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳು ಮೌನ ವಹಿಸಿರುವುದು ಅತ್ಯಂತ ವಿಷಾದನೀಯ. ಪರಿಸರವನ್ನು ಕಾಪಾಡುವಲ್ಲಿ ಸಂಬಂಧಪಟ್ಟ ಇಲಾಖೆಗಳು ಸಂಪೂರ್ಣ ವಿಫಲವಾಗಿವೆ.

–ಶ್ರೀ ಆನಂದರಾಜ ಪ್ರಭುಗಳು, ಮಾಣಿಕ್‌ನಗರ


**ಅಧಿಕಾರಿಗಳು, ರಾಜಕಾರಣಿಗಳ ವಿರುದ್ಧ ಆನಂದರಾಜ್ ಪ್ರಭು ಆಕ್ರೋಶ..!**

### ಐತಿಹಾಸಿಕ ಮಹತ್ವಕ್ಕೆ ಅಪಮಾನ: ಪಾಟೀಲ



ಗುರುಗಂಗಾ ನದಿಗೆ ಅಪಾರ ಧಾರ್ಮಿಕ, ಸಾಂಸ್ಕೃತಿಕ ಹಾಗೂ ಐತಿಹಾಸಿಕ ಮಹತ್ವವಿದೆ. ಸಾವಿರಾರು ಭಕ್ತರ ನಂಬಿಕೆಯ ಪ್ರತೀಕವಾಗಿರುವ ಈ ಪುಣ್ಯ ಕ್ಷೇತ್ರದ ನದಿಗೆ ಕೆಮಿಕಲ್ ಮಿಶ್ರಿತ ನೀರು ಹರಿಸಿರುವುದು ಅತ್ಯಂತ ಖಂಡನೀಯ. ಇಂತಹ ಕೃತ್ಯವನ್ನು ಯಾವುದೇ ಕಾರಣಕ್ಕೂ ಸಹಿಸಲಾಗದು ಎಂದು ಮಾಜಿ ಸಚಿವ ರಾಜಶೇಖರ ಪಾಟೀಲ ಹೇಳಿದ್ದಾರೆ.







## ಕಾಂಗ್ರೆಸ್ ಲೆಟರ್‌ಹೆಡ್‌ನಲ್ಲಿ ಸ್ಪೀಕರ್ ಹೆಸರು; ಮತ್ತೊಂದು ಕೆಟ್ಟ ಸಂಪ್ರದಾಯಕ್ಕೆ ನಾಂದಿ: ಸುರೇಶ್ ಕುಮಾರ್ ಕಿಡಿ

## ಮಾಣಿಕನಗರ ಗುರುಗಂಗಾ ನದಿಗೆ ಕೆಮಿಕಲ್ ವಿಷ: ತಕ್ಷಣ ತಡೆಯಬೇಕು

ಗುರುಗಂಗಾ ನದಿ ಕೇವಲ ಒಂದು ಜಲಮೂಲವಲ್ಲ; ಲಕ್ಷಾಂತರ ಭಕ್ತರ ನಂಬಿಕೆ, ರೈತರ ಜೀವನಾಡಿ ಮತ್ತು ಪರಿಸರದ ಅಮೂಲ್ಯ ಸಂಪತ್ತು. ಇಂತಹ ಪವಿತ್ರ ನದಿಗೆ ಕೆಮಿಕಲ್ ಮಿಶ್ರಿತ ವಿಷಕಾರಿ ನೀರು ಸೇರುತ್ತಿರುವ ಆರೋಪಗಳು ಅತ್ಯಂತ ಆತಂಕಕಾರಿ. ಈ ಸಮಸ್ಯೆಯನ್ನು ಸಂಬಂಧಿಸಿದ ಇಲಾಖೆಗಳು ತುರ್ತು ಗಂಭೀರತೆಯಿಂದ ಪರಿಗಣಿಸಿ ತಕ್ಷಣ ಕ್ರಮ ಕೈಗೊಳ್ಳಬೇಕು.

## ಸಂಪಾದಕೀಯ



**ಮಾಣಿಕರೆಡ್ಡಿ ಕೌಡಾಳೆ**
**ಪ್ರಧಾನ ಸಂಪಾದಕರು**
**ಮೊ: 9845028349**

ನದಿಗೆ ಕೈಗಾರಿಕಾ ತ್ಯಾಜ್ಯ ಅಥವಾ ವಿಷಕಾರಿ ರಾಸಾಯನಿಕ ನೀರು ಸೇರುತ್ತಿದ್ದರೆ ಅದು ಜಲಚರಗಳು, ಪಶು–ಪಕ್ಷಿಗಳು, ರೈತರ ಬೆಳೆಗಳು ಮತ್ತು ಜನರ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಇಂತಹ ಮಾಲಿನ್ಯವನ್ನು ನಿರ್ಲಕ್ಷಿಸುವುದು ಮುಂದಿನ ಪೀಳಿಗೆಗೆ ಅಪಾಯವನ್ನು ಆಹ್ವಾನಿಸಿದಂತಾಗುತ್ತದೆ.

ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಜಿಲ್ಲಾಡಳಿತ ಹಾಗೂ ಸಂಬಂಧಿತ ಅಧಿಕಾರಿಗಳು ತಕ್ಷಣ ಸ್ಥಳ ಪರಿಶೀಲನೆ ನಡೆಸಿ ನೀರಿನ ಮಾದರಿಗಳನ್ನು ಪರೀಕ್ಷಿಸಬೇಕು. ತಪ್ಪಿತಸ್ಥರು ಯಾರೇ ಆಗಿರಲಿ, ಅವರ ವಿರುದ್ಧ ಕಾನೂನುಬದ್ಧವಾಗಿ ಕಠಿಣ ಕ್ರಮ ಜರುಗಿಸಬೇಕು. ಪರಿಸರ ಸಂರಕ್ಷಣೆಯ ವಿಷಯದಲ್ಲಿ ಯಾವುದೇ ರಾಜಿ ಇರಬಾರದು. ಗುರುಗಂಗಾ ನದಿಯ ಪಾವಿತ್ರ್ಯವನ್ನು ಕಾಪಾಡುವುದು ಸರ್ಕಾರದಷ್ಟೇ ಅಲ್ಲ, ಪ್ರತಿಯೊಬ್ಬ ನಾಗರಿಕನ ಜವಾಬ್ದಾರಿಯೂ ಆಗಿದೆ. ಪರಿಸರವನ್ನು ಉಳಿಸಿದರೆ ಮಾತ್ರ ಆರೋಗ್ಯಕರ ಸಮಾಜ ಮತ್ತು ಸುಸ್ಥಿರ ಭವಿಷ್ಯ ನಿರ್ಮಾಣ ಸಾಧ್ಯ. ಗುರುಗಂಗಾ ನದಿ ಉಳಿದರೆ ಪ್ರಕೃತಿ ಉಳಿಯುತ್ತದೆ; ಪ್ರಕೃತಿ ಉಳಿದರೆ ಬದುಕು ಉಳಿಯುತ್ತದೆ. ಆದ್ದರಿಂದ ಗುರುಗಂಗಾ ನದಿಗೆ ಕೆಮಿಕಲ್ ವಿಷ ಸೇರುವುದನ್ನು ತಕ್ಷಣವೇ ಶಾಶ್ವತವಾಗಿ ತಡೆಯಬೇಕು.

## ಕಾಕ್‌ಟೇಲ್ ಪ್ರತಿಭೆಯನ್ನು ಮುನ್ನೆಲೆಗೆ ತಂದ ABD..!



**ಬೆಂಗಳೂರು:** ಭಾರತದ ಅತ್ಯಂತ ಭರವಸೆಯ ಮಿಕ್ಸಾಲಜಿಸ್ಟ್‌ಗಳನ್ನು ಒಂದುಗೂಡಿಸಿದ ಅತ್ಯಂತ ಯಶಸ್ವೀ ಪ್ರಾರಂಭದ ನಂತರ, ಬಾರ್ ಮಾಸ್ಟ್ರೋ ಈಗ 2ನೆ ಸುತ್ತಿಗೆ ಮುಂದುವರಿದಿದೆ. ಏಳು–ನಗರ ಬಾರ್ಟೆಂಡಿಂಗ್ ಸವಾಲನ್ನು, ಅಲೈಡ್ ಬ್ಲೆಂಡರ್ಸ್ ಅಂಡ್ ಡಿಸ್ಟಿಲರೀಸ್ ಲಿಮಿಟೆಡ್‌ನ ಐಶಾರಾಮೀ ಸೂಪರ್–ಪ್ರೀಮಿಯಮ್ ಸ್ಪಿರಿಟ್ಸ್ ವಿಭಾಗದವಾದ ABD ಮಾಸ್ಟ್ರೋ ಪ್ರೈ ಲಿ., ಟ್ಯುಲ್ಲೀಹೊ ಬೆವರೇಜ್ ಅಕಾಡೆಮಿಯ(Tulleeho BeverageAcademy)ಸಹಭಾಗಿತ್ವದಲ್ಲಿ ನಡೆಸಿಕೊಡುತ್ತಿದೆ. ಪ್ರಾರಂಭಿಕ ಸುತ್ತು, ದೇಶಾದ್ಯಂತ 350 ಕ್ಕಿಂತ ಹೆಚ್ಚಿನ ಎಂಟ್ರಿಗಳನ್ನು ಆಕರ್ಷಿಸಿದ್ದರೆ, ಸ್ಪರ್ಧೆಯ ಸುತ್ತಲಿನ ಸಂವಾದಗಳ ಸುತ್ತು, ಸಮೂಹ ಮಾಧ್ಯಮದಲ್ಲಿ ವ್ಯಾಪಕವಾಗಿ ಪ್ರತಿಧ್ವನಿಸಿ, 7.6 ದಶಲಕ್ಷಕ್ಕಿಂತ ಹೆಚ್ಚಿನ ವೀಕ್ಷಣೆಗಳು ಇನ್ಸ್‌ಟಾಗ್ರಾಮ್‌ನಲ್ಲಿ ವೀಕ್ಷಿಸಲ್ಪಟ್ಟು ಭಾರತದ ಬೆಳೆಯುತ್ತಿರುವ ಕಾಕ್‌ಟೇಲ್ ಪ್ರತಿಭೆಯ ಸುತ್ತ ಇರುವ ಕೌತುಕತೆಯನ್ನು ಎತ್ತಿಹಿಡಿದಿದ್ದವು.

ಪ್ರಾರಂಭಿಕ ಸುತ್ತಿನ ಕೇಂದ್ರಭಾಗವು ಸೃಜನಶೀಲತೆಯಲ್ಲಿ ಆಧಾರಿತಗೊಂಡ ಸವಾಲಾಗಿತ್ತ್; ಅಂದರೆ, ವುಡ್‌ಬರ್ನ್ಸ್ ಕಾಂಟೆಂಪರರಿ ಇಂಡಿಯನ್ ವ್ಹಿಸ್ಕಿ ಉಪಯೋಗಿಸಿ ಮೂಲ ಹೈಬಾಲ್ ಕಾಕ್‌ಟೇಲ್ ತಯಾರಿಸುವುದು. ಇದರ ಪರಿಣಾಮವಾಗಿ, ಬಾರ್ಟೆಂಡರ್ಗಳು, ತಮ್ಮನ್ನು ರೂಪಿಸಿದ ಸಂಪ್ರದಾಯಗಳು ಹಾಗೂ ಪ್ರದೇಶಗಳ ಅಂತರಂಗವನ್ನು ನೋಡಿದ ಭಾರತದ ವೈವಿಧ್ಯಮಯ ಪರಂಪರೆಗೆ ಒಂದು ಸುಂದರ ನಮನ ಏರ್ಪಟ್ಟಿತು. ರಾಷ್ಟ್ರವ್ಯಾಪಿ ಆಯ್ಕೆಯ ನಂತರ, 160 ಮಿಕ್ಸಾಲಜಿಸ್ಟ್‌ಗಳು 2ನೆ ಸುತ್ತಿಗೆ ಪ್ರಗತಿ ಹೊಂದಿದ್ದರ್. ಪ್ರತಿಯೊಂದು ಆಯ್ಕೆ ಮಾಡಲ್ಪಟ್ಟ ಕಾಕ್‌ಟೇಲ್, ತನ್ನ ತಾಂತ್ರಿಕ ಪ್ರಾಧಾನ್ಯತೆ, ದೇಶೀಯತೆ ಮತ್ತು ಸಾಂಸ್ಕೃತಿಕ ಕಥಾನಕಕ್ಕೆ ಪ್ರಧಾನವಾಗಿತ್ತು.

## ರಹೀಮ್ ಖಾನ್ ವಿರುದ್ಧ ಬಿಜೆಪಿ ವತಿಯಿಂದ ಬೃಹತ್ ಪ್ರತಿಭಟನೆ

• ಮಲ್ಲಮ್ಮ ನುಡಿ ವಾರ್ತೆ ಬೀದರ್



ಮಳೆಗಾಲ ಆರಂಭವಾದ ಬಳಿಕ ಬೀದರ್ ಮಹಾನಗರದ ಪ್ರಮುಖ ರಸ್ತೆಗಳು ಹಾಗೂ ಬಡಾವಣೆಗಳ ಒಳರಸ್ತೆಗಳು ಆಳವಾದ ಗುಂಡಿಗಳು ಮತ್ತು ತಗ್ಗುಗಳಿಂದ ಸಂಚಾರಕ್ಕೆ ಅಪಾಯಕಾರಿಯಾಗಿವೆ ಎಂದು ಆರೋಪಿಸಿ, ಭಾರತೀಯ ಜನತಾ ಪಕ್ಷ ಬೀದರ ನಗರ ಮಂಡಲ ವತಿಯಿಂದ ಮಹಾನಗರ ಪಾಲಿಕೆ ಆಯುಕ್ತರಿಗೆ ಮನವಿ ಸಲ್ಲಿಸಿ, ತಕ್ಷಣ ರಸ್ತೆ ದುರಸ್ತಿ ಹಾಗೂ ಶಾಶ್ವತ ಪರಿಹಾರ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ ಬೀದರ್ ದಕ್ಷಿಣ ಕ್ಷೇತ್ರದ ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ, ನಗರದ ಅಭಿವೃದ್ಧಿಗಾಗಿ ಕಳೆದ ಮಾರ್ಚ್ ಅಧಿವೇಶನದಲ್ಲಿ ನಗರ ಪಾಲಿಕೆಗೆ ₹200 ಕೋಟಿ ಅನುದಾನ ಮಂಜೂರಾಗಿದರು, ಬಿಡುಗಡೆಯಾಗಿ ಐದು–ಆರು ತಿಂಗಳು ಕಳೆದರೂ ಕಾಮಗಾರಿಗಳ ಅಂದಾಜು (ಎಸ್ಟಿಮೇಟ್) ಸಿದ್ಧವಾಗಿಲ್ಲ ಹಾಗೂ ಅನುದಾನ ಹಂಚಿಕೆ ಪ್ರಕ್ರಿಯೆಯೂ ಆರಂಭವಾಗಿಲ್ಲ ಎಂದು ಆರೋಪಿಸಿದರು. ಇದು ಸರ್ಕಾರ ಹಾಗೂ ಜಿಲ್ಲಾಡಳಿತದ ಆಡಳಿತ ವೈಫಲ್ಯಕ್ಕೆ ಸ್ಪಷ್ಟ ಉದಾಹರಣೆಯಾಗಿದ್ದು, ಇದರ ನೇರ ಪರಿಣಾಮವನ್ನು ಬೀದರ್ ನಗರದ ಜನರು ಅನುಭವಿಸುತ್ತಿದ್ದಾರೆ. ಅನುದಾನ ಯಾವ ಕಾಮಗಾರಿಗಳಿಗೆ ಹಂಚಿಕೆಯಾಗಿದೆ ಎಂಬ ಬಗ್ಗೆ ಸಾರ್ವಜನಿಕರಿಗೆ ಯಾವುದೇ ಸ್ಪಷ್ಟ ಮಾಹಿತಿ ಇಲ್ಲ. ಅಭಿವೃದ್ಧಿ ಯೋಜನೆಗಳಲ್ಲಿ ಆಗಿರುವ ವಿಳಂಬದಿಂದ ನಗರದ ಮೂಲಸೌಕರ್ಯ ಅಭಿವೃದ್ಧಿ ಕುಂಠಿತಗೊಂಡಿದೆ ಎಂದು ಅವರು ಹೇಳಿದರು.

ನಂತರ ಮಾತನಾಡಿದ ಬಿಜೆಪಿ ಜಿಲ್ಲಾ ಅಧ್ಯಕ್ಷ ಸೋಮನಾಥ ಪಾಟೀಲ್, ಅನುದಾನ ಬಿಡುಗಡೆ–ಯಾಗಿದ್ದರೂ ಕಳಪೆ ಕಾಮಗಾರಿಗಳು ನಡೆದಿವೆ ಎಂದು ಆರೋಪಿಸಿದರು. ಏರ್‌ಫೋರ್ಸ್ ದಿಂದ ಚಿದ್ರಿವರೆಗೆ ಡಿವೈಡರ್, ವಿದ್ಯುತ್ ಕಂಬ ಹಾಗೂ ಬೀದಿ ದೀಪ ಅಳವಡಿಸಿರುವುದನ್ನೇ ಅಭಿವೃದ್ಧಿ ಎಂದು ತೋರಿಸಲಾಗುತ್ತಿದೆ. ಆದರೆ ನಗರದ ಪ್ರಮುಖ ರಸ್ತೆಗಳ ಅಭಿವೃದ್ಧಿಗೆ ಆದ್ಯತೆ ನೀಡಿಲ್ಲ ಎಂದು ಟೀಕಿಸಿದರು.

"ಒಂದು ಕಡೆ ಕಾಮಗಾರಿ ಮಾಡಿ ಮತ್ತೊಂದು ಕಡೆ ಅಭಿವೃದ್ಧಿ ತೋರಿಸುವ ಕೆಲಸ ನಡೆಯುತ್ತಿದೆ. ರಸ್ತೆಗಳಲ್ಲಿ ಗುಂಡಿಗಳು ಕಾಣಿಸುವ ಬದಲು ಗುಂಡಿಗಳ ಮಧ್ಯೆ ರಸ್ತೆ ಕಾಣುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇದರಿಂದ ಸಾರ್ವಜನಿಕರು ಹಾಗೂ ವಾಹನ ಸವಾರರು ಪ್ರತಿದಿನ ಸಂಕಷ್ಟ ಅನುಭವಿಸುತ್ತಿದ್ದಾರೆ," ಎಂದು ಅವರು ತಿಳಿಸಿದರು

ಹದಗೆಟ್ಟ ರಸ್ತೆಗಳನ್ನು ತಕ್ಷಣ ದುರಸ್ತಿಗೊಳಿಸಿ, ಕಾಮಗಾರಿಗಳ ಗುಣಮಟ್ಟ ಪರಿಶೀಲಿಸಿ, ಜವಾಬ್ದಾರರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಅವರು ಒತ್ತಾಯಿಸಿದರು. ಈ ಹಿಂದೆ ನಡೆದ ಹೋರಾಟಗಳ ಚಿತ್ರಗಳು ಹಾಗೂ ರಸ್ತೆಗಳ ದುಸ್ಥಿತಿಯ ದಾಖಲೆಗಳನ್ನು ಮುಖ್ಯಮಂತ್ರಿ ಅವರಿಗೆ ಸಲ್ಲಿಸಿ, ನಗರದ ಅಭಿವೃದ್ಧಿಗೆ ಮತ್ತಷ್ಟು ₹200 ಕೋಟಿ ಅನುದಾನ ತರಲು ಪ್ರಯತ್ನಿಸಲಾಗುವುದು. ಆದರೆ ಹೊಸ ಅನುದಾನದಲ್ಲೂ ಪಾರದರ್ಶಕತೆ ಕಾಪಾಡಿ ಪ್ರತಿಯೊಂದು ರೂಪಾಯಿಯನ್ನೂ ಅಭಿವೃದ್ಧಿಗೆ ಬಳಸಬೇಕು ಎಂದು ಅವರು ಹೇಳಿದರು.

ಬಳಿಕ ಮಾತನಾಡಿದ ಬಿಜೆಪಿ ಬೀದರ್ ನಗರ ಮಂಡಲ ಅಧ್ಯಕ್ಷ ಶಶಿಧರ್ ಹೊಸಳ್ಳಿ, ಮಳೆಗಾಲ ಆರಂಭವಾದ ಬಳಿಕ ನಗರದ ಪ್ರಮುಖ ರಸ್ತೆಗಳಿಂದ ಹಿಡಿದು ಬಡಾವಣೆಗಳ ಒಳರಸ್ತೆಗಳವರೆಗೆ ಗುಂಡಿಗಳ ಹಾವಳಿ ಹೆಚ್ಚಾಗಿದ್ದು, ಇದರಿಂದ ವಾಹನ ಸವಾರರು ಹಾಗೂ ಪಾದಚಾರಿಗಳು ಪ್ರತಿನಿತ್ಯ ಜೀವಭಯದಲ್ಲೇ ಸಂಚರಿಸುವಂತಾಗಿದೆ ಎಂದು ಆರೋಪಿಸಿದರು.

ಇತ್ತೀಚೆಗೆ ಸುರಿದ ಮಳೆಯ ಹಿನ್ನೆಲೆಯಲ್ಲಿ ಬಿಜೆಪಿ ತಂಡ ನಗರದ ವಿವಿಧ ಭಾಗಗಳಲ್ಲಿ "ರಿಯಾಲಿಟಿ ಚೆಕ್" ನಡೆಸಿದ್ದು, ಹಲವು ರಸ್ತೆಗಳಲ್ಲಿ ಆಳವಾದ ಗುಂಡಿಗಳು, ತಗ್ಗುಗಳು ಹಾಗೂ ನೀರು ನಿಂತಿರುವ ದೃಶ್ಯಗಳು ಕಂಡುಬಂದಿವೆ. ಇದು ನಗರದಲ್ಲಿ ಸಮರ್ಪಕ ಒಳಚರಂಡಿ ವ್ಯವಸ್ಥೆ ಹಾಗೂ ಮಳೆನೀರು ನಿರ್ವಹಣೆಯ ವೈಫಲ್ಯವನ್ನು ಬಿಜೆಪಿ ಬಯಲಿಗೆಳೆದಿದೆ ಎಂದು ಅವರು ಹೇಳಿದರು.

ಈ ಸಂರ್ಭದಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಪಿರಪ್ಪ ಏರ್ನಳ್ಳಿ, ಹಾಗು ಕಿರಣ್ ಪಾಟೀಲ್, ರಾಕುಮಾರ್ ಚಿದ್ರಿ, ಅಶೋಕ ಹೋಕರಣೆ, ಅಶೋಕ ಕುಮಾರ ಕರಂಜಿ, ದೀಪಕ್ ಗಾದ್ಗೆ, ಸುಭಾಷ್ ಮಡಿವಾಳ, ಮಹೇಶ್ವರ್ ಸ್ವಾಮಿ, ಪ್ರಭು ಪಾಟೀಲ್, ನಗರ ಪ್ರದಾನ ಕಾರ್ಯದರ್ಶಿ ಗಣೇಶ್ ಭೋಸ್ಲೆ, ಹಾಗು ಸುನಿಲ್ ಗೌಳಿ, ನಿತಿನ್ ನವಲಕೆರೆ, ಸಂಗಮೇಶ್ ಗುಮ್ಮೆ, ವೀರೇಸ್ವಾಮಿ, ನರೇಶ್ ಗೌಳಿ ಸೇರಿದಂತೆ ಬಿಜೆಪಿ ಕಾರ್ಯಕರ್ತರು ಭಾಗಿಯಾಗಿದರು.

## ರೈಲ್ವೆ ಹಳಿ ಅತಿಕ್ರಮಣ, ಕಲ್ಲು ತೂರಾಟಕ್ಕೆ ಕಠಿಣ ಎಚ್ಚರಿಕೆ: ನಿಯಮ ಉಲ್ಲಂಘಿಸಿದರೆ ಜೈಲು





• ಮಲ್ಲಮ್ಮ ನುಡಿ ವಾರ್ತೆ ಬೀದರ್

ರೈಲ್ವೆ ಹಳಿಗಳನ್ನು ಅಕ್ರಮವಾಗಿ ದಾಟುವುದು, ಚಲಿಸುವ ರೈಲುಗಳ ಮೇಲೆ ಕಲ್ಲು ತೂರುವುದು ಹಾಗೂ ರೈಲ್ವೆ ಹಳಿಗಳ ಮೇಲೆ ಕಲ್ಲು ಅಥವಾ ಇತರ ವಿದೇಶಿ ವಸ್ತುಗಳನ್ನು ಇಡುವಂತಹ ಅಪಾಯಕಾರಿ ಕೃತ್ಯಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ರೈಲ್ವೆ ಪೊಲೀಸ್ ಇಲಾಖೆ ಸಾರ್ವಜನಿಕರಿಗೆ ಕಟ್ಟುನಿಟ್ಟಿನ ಎಚ್ಚರಿಕೆ ನೀಡಿದೆ. ಇತ್ತೀಚಿನ ದಿನಗಳಲ್ಲಿ ಕೆಲವರು ಹಾಗೂ ವಿದ್ಯಾರ್ಥಿಗಳು ಮೋಟಾರ್ ಸೈಕಲ್‌ಗಳೊಂದಿಗೆ ರೈಲ್ವೆ ಹಳಿಗಳನ್ನು ಅತಿಕ್ರಮಿಸಿ ಅಪಘಾತಗಳಿಗೆ ಒಳಗಾಗುತ್ತಿರುವ ಪ್ರಕರಣಗಳು ವರದಿಯಾಗುತ್ತಿವೆ. ಈ ರೀತಿಯ ಕೃತ್ಯವು ರೈಲ್ವೆ ಕಾಯ್ದೆಯ ಸೆಕ್ಷನ್ 147 ಮತ್ತು 153ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವಾಗಿದ್ದು, ತಪ್ಪಿತಸ್ಥರಿಗೆ ಜೈಲು ಶಿಕ್ಷೆ, ದಂಡ ಅಥವಾ ಎರಡನ್ನೂ ವಿಧಿಸುವ ಅವಕಾಶವಿದೆ ಎಂದು ಇಲಾಖೆ ತಿಳಿಸಿದೆ.

ಅದೇ ರೀತಿ, ಚಲಿಸುವ ರೈಲುಗಳ ಮೇಲೆ ಕಲ್ಲು ತೂರುವುದು ಹಾಗೂ ರೈಲು ಹಳಿಗಳ ಮೇಲೆ ಕಲ್ಲು ಅಥವಾ ಇತರ ವಸ್ತುಗಳನ್ನು ಇಟ್ಟು ಪ್ರಯಾಣಿಕರ ಸುರಕ್ಷತೆಗೆ ಧಕ್ಕೆ ಉಂಟುಮಾಡುವುದು ಕೂಡ ಗಂಭೀರ ಅಪರಾಧವಾಗಿದೆ. ಇಂತಹ ಕೃತ್ಯಗಳಿಗೆ ರೈಲ್ವೆ ಕಾಯ್ದೆಯ ಸೆಕ್ಷನ್ 150, 151, 152 ಮತ್ತು 153ರ ಅಡಿಯಲ್ಲಿ ಕಠಿಣ ಕಾನೂನು ಕ್ರಮ ಜರುಗಿಸಲಾಗುತ್ತದೆ. ಸಾರ್ವಜನಿಕರು ರೈಲ್ವೆ ಹಳಿಗಳನ್ನು ಅತಿಕ್ರಮಿಸದೆ, ರಸ್ತೆ ಮೇಲ್ಸೇತುವೆ (ROB), ರಸ್ತೆ ಕೆಳಸೇತುವೆ (RUB) ಹಾಗೂ ಲೇವೆಲ್ ಕ್ರಾಸಿಂಗ್ ಗೇಟ್‌ಗಳನ್ನು ಮಾತ್ರ ಬಳಸುವಂತೆ ಇಲಾಖೆ ಮನವಿ ಮಾಡಿದೆ. ಜೊತೆಗೆ, ಚಲಿಸುವ ರೈಲುಗಳ ಮೇಲೆ ಕಲ್ಲು ಎಸೆಯದಂತೆ ಹಾಗೂ ರೈಲು ಹಳಿಗಳ ಮೇಲೆ ಯಾವುದೇ ವಿದೇಶಿ ವಸ್ತುಗಳನ್ನು ಇರಿಸದಂತೆ ಸೂಚಿಸಿದೆ.

ಪ್ರಸಕ್ತ ವರ್ಷದ ಜುಲೈ ಅಂತ್ಯದವರೆಗೆ ರೈಲ್ವೆ ಹಳಿಗಳನ್ನು ಅತಿಕ್ರಮಿಸಿದ 657 ಜನರ ವಿರುದ್ಧ ರೈಲ್ವೆ ಕಾಯ್ದೆಯ ಸೆಕ್ಷನ್ 147ರ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದ್ದು, ಒಟ್ಟು ₹3,28,500 ದಂಡ ವಿಧಿಸಲಾಗಿದೆ ಎಂದು ರೈಲ್ವೆ ಪೊಲೀಸ್ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ.

## ಜಗತ್ತಿಗೆ ಜ್ಞಾನದ ಬೆಳಕು ನೀಡಿದ ಮಹಾನ್ ಚಿಂತಕ ಅಂಬೇಡ್ಕರ್

• ಮಲ್ಲಮ್ಮ ನುಡಿ ವಾರ್ತೆ ಬೀದರ್



ಡಾ. ಬಿ.ಆರ್. ಅಂಬೇಡ್ಕರ್ ಅವರು ಜಗತ್ತಿಗೆ ಸೂರ್ಯ ಚಂದ್ರರಂತೆ ಜ್ಞಾನದ ಬೆಳಕನ್ನು ನೀಡಿದ ಮಹಾನ್ ಚಿಂತಕರಾಗಿದ್ದಾರೆ. ಇಂದು ವಿಶ್ವವೇ ಭಾರತದತ್ತ ಗೌರವದಿಂದ ನೋಡುವುದಕ್ಕೆ ಅಂಬೇಡ್ಕರ್ ಅವರ ವಿಚಾರಧಾರೆಗಳು ಪ್ರಮುಖ ಕಾರಣವಾಗಿವೆ. ಜಗತ್ತಿನ ಅನೇಕ ಪ್ರತಿಷ್ಠಿತ ವಿಶ್ವವಿದ್ಯಾಲಯಗಳಲ್ಲಿ ಅವರ ಮೂರ್ತಿ ಮಾಡಿ ಗೌರವದಿಂದ ಸ್ಮರಿಸಲಾಗುತ್ತಿದ್ದು, ಇದು ಪ್ರತಿಯೊಬ್ಬ ಭಾರತೀಯನಿಗೂ ಹೆಮ್ಮೆಯ ವಿಷಯವಾಗಿದೆ, ಶಾಲೆಯಲ್ಲಿ ಇಂತಹ ಕಾರ್ಯಕ್ರಮ ಆಯೋಜಿಸಿದರಿಂದ ಮಕ್ಕಳಿಗೆ ತುಂಬಾನೇ ಅನುಕೂಲವಾಗಲಿದೆ ಎಂದು ಹಿರಿಯ ಕಲಾವಿದ ಶಂಭುಲಿಂಗ್ ವಾಲ್ದೊಡ್ಡಿ ಹೇಳಿದರು.

ಬೀದರ ನಗರದ ಜಿಜಾಮಾತಾ ಕನ್ಯಾ ಪ್ರೌಢ ಶಾಲೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೀದರ ಹಾಗೂ ಜಿಜಾಮಾತಾ ಕನ್ಯಾ ಪ್ರೌಢ ಶಾಲೆಯ ಸಂಯುಕ್ತಾಶ್ರಯದಲ್ಲಿ 2026–27ನೇ ಸಾಲಿನ ವಿಶೇಷ ಘಟಕ ಯೋಜನೆಯಡಿ ಆಯೋಜಿಸಿದ್ದ "ಭಾರತ ರತ್ನ ಡಾ. ಬಿ.ಆರ್. ಅಂಬೇಡ್ಕರ್ ಓದು ಕಾರ್ಯಕ್ರಮ" ಹಾಗೂ ಪ್ರಬಂಧ ಸ್ಪರ್ಧೆಯಲ್ಲಿ ಅವರು ಡಾ. ಬಿ.ಆರ್. ಅಂಬೇಡ್ಕರ ಅವರ ಬದುಕು, ಸಾಧನೆ ಮತ್ತು ಬರಹ ವಿಷಯದ ಕುರಿತು ವಿಶೇಷ ಉಪನ್ಯಾಸ ನೀಡುವುದರ ಜೊತೆಗೆ ಸಸಿಗೆ ನೀರು ಉಣಿಸುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಅಂದಿನ ಕಾಲದಲ್ಲಿ ಸಮಾಜದಲ್ಲಿ ಜಾತಿ ವ್ಯವಸ್ಥೆ, ಲಿಂಗ ತಾರತಮ್ಯ, ಮೇಲು–ಕೀಳು ಎಂಬ ಭಾವನೆಗಳು ತೀವ್ರವಾಗಿದ್ದವು. ಆ ಅನ್ಯಾಯ ಮತ್ತು ಅವಮಾನಗಳನ್ನು ಡಾ. ಅಂಬೇಡ್ಕರ್ ಸ್ವತಃ ಅನುಭವಿಸಿದ್ದರು. ಈ ಸಾಮಾಜಿಕ ಅಸಮಾನತೆಯನ್ನು ಕಣ್ಣಾರೆ ಕಂಡ ಅವರು ಜಾತಿ ನಿರ್ಮೂಲನೆ ಹಾಗೂ ಸಮಾನತೆಯ ಸಮಾಜ ನಿರ್ಮಾಣಕ್ಕಾಗಿ ಹೋರಾಟ ನಡೆಸಿದರು. ದೇಶದ ಪ್ರತಿಯೊಬ್ಬ ನಾಗರಿಕನಿಗೂ ಸಮಾನ ಹಕ್ಕುಗಳು ದೊರೆಯಬೇಕು ಎಂಬ ದೃಢ ಸಂಕಲ್ಪದಿಂದ ಉನ್ನತ ಶಿಕ್ಷಣ ಪಡೆದು ಅಪಾರ ಜ್ಞಾನ ಸಂಪಾದಿಸಿದರು ಸಂವಿಧಾನದ ಮೂಲಕ ನ್ಯಾಯ ಒದಗಿಸಿಕೊಟ್ಟಿದ್ದಾರೆ ಎಂದು ತಿಳಿಸಿದರು.

ಕರ್ನಾಟಕ ಜಾನಪದ ಅಕಾಡೆಮಿ ಸದಸ್ಯ ವಿಜಯಕುಮಾರ ಸೋನಾರೆ ಅವರು ಮಾತನಾಡಿ, ಭಾರತದ ಸಂವಿಧಾನವನ್ನು ರಚಿಸುವ ಮೂಲಕ ದೇಶದ ಕಟ್ಟಕಡೆಯ ವ್ಯಕ್ತಿಗೂ ನ್ಯಾಯ, ಸಮಾನತೆ ಮತ್ತು ಸ್ವಾತಂತ್ರ್ಯದ ಹಕ್ಕುಗಳನ್ನು ಒದಗಿಸುವ ಐತಿಹಾಸಿಕ ಕಾರ್ಯವನ್ನು ಡಾ. ಅಂಬೇಡ್ಕರ್ ಮಾಡಿದ್ದಾರೆ. ಅವರ ಆದರ್ಶಗಳು ಮತ್ತು ವಿಚಾರಧಾರೆಗಳು ಇಂದಿನ ಯುವಜನತೆಗೆ ದಾರಿದೀಪವಾಗಿದ್ದು, ವಿದ್ಯಾರ್ಥಿಗಳು ಅವರ ಜೀವನ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಮುಖ್ಯ ಅತಿಥಿಗಳಾಗಿ ಸಮತಾ ಪ್ರೌಢ ಶಾಲೆಯ ಮುಖ್ಯಗುರು ಬಳಿರಾಮ ಕುರ್ನಾಳೆ, ಜಿಜಾಮಾತಾ ಕನ್ಯಾ ಪ್ರೌಢ ಶಾಲೆಯ ಮುಖ್ಯಗುರು ಪರಮೇಶ್ವರ ಬಿರಾದಾರ, ಶಾಂತಿನಿಕೇತನ ಪ್ರಾಥಮಿಕ ಶಾಲೆಯ ಮುಖ್ಯಗುರು ಶ್ರೀಮತಿ ಮೀನಾಕ್ಷಿ ಹಾಗೂ ಮುಕ್ತಾರ ಮಿಯಾ ಮಾತನಾಡಿದರು, ಇತರರು ವೇದಿಕೆ ಮೇಲಿದ್ದರು.

ಕಾರ್ಯಕ್ರಮದ ಅಂಗವಾಗಿ ಆಯೋಜಿಸಿದ್ದ ಡಾ. ಬಿ.ಆರ್. ಅಂಬೇಡ್ಕರ್ ಓದು ಕಾರ್ಯಕ್ರಮದ ಪ್ರಬಂಧ ಸ್ಪರ್ಧೆಯಲ್ಲಿ ಒಟ್ಟು 50 ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಗಂಗನಪಳ್ಳಿ ಸಹೋದರರ ಸಾಹಿತ್ಯ ಪರಂಪರೆ ಯುವಪೀಳಿಗೆಗೆ ಪ್ರೇರಣೆ

• ಮಲ್ಲಮ್ಮ ನುಡಿ ವಾರ್ತೆ ಬೀದರ್



ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು ಎನ್ನುವಂತೆ ಎಂ.ಜಿ. ಗಂಗನಪಳ್ಳಿ ಅವರು ಸಾಹಿತ್ಯ ಲೋಕದಲ್ಲಿ ಅಜರಾಮರ ಸ್ಥಾನ ಗಳಿಸಿದ್ದರು. ತಮ್ಮ ಇಡೀ ಜೀವನವನ್ನು ಸಾಹಿತ್ಯ ಸೇವೆಗೆ ಮೀಸಲಿಟ್ಟ ಅವರು ಜೀವನಪೂರ್ತಿ ಬ್ರಹ್ಮಚಾರಿಯಾಗಿ ಸಾಹಿತ್ಯ ರಚನೆ, ಚಿಂತನೆ ಹಾಗೂ ಕನ್ನಡದ ಬೆಳವಣಿಗೆಗೆ ಅನನ್ಯ ಕೊಡುಗೆ ನೀಡಿದರು. ಅವರು ನಿಜಕ್ಕೂ ಸಾಹಿತ್ಯ ಧ್ರುವತಾರೆಯಾಗಿದ್ದರು. ಅವರ ಗೌರವಾರ್ಥ ಪ್ರಕಟಗೊಂಡ 'ಭಾವಗಂಗೆ' ಅಭಿನಂದನ ಗ್ರಂಥವೇ ಅವರ ಸಾಹಿತ್ಯ ಸಾಧನೆಗೆ ಸಾಕ್ಷಿಯಾಗಿದೆ ಎಂದು ಹಿರಿಯ ಸಾಹಿತಿ ಎಂ.ಜಿ ದೇಶಪಾಂಡೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಅವರು ಭಾನುವಾರ ಸಾಯಂಕಾಲ ಜನಪರ ಸಾಂಸ್ಕೃತಿಕ ಪ್ರತಿಷ್ಠಾನ, ಬೀದರ ಹಾಗೂ ಗಂಗನಪಳ್ಳಿ ಪರಿವಾರ, ಸಿಕ್ಕಿಂದ್ರಾಪೂರ ಇವರ ಸಂಯುಕ್ತಾಶ್ರಯದಲ್ಲಿ ಹೆಸರಾಂತ ಆಶುಕವಿ ದಿವಂಗತ ಎಂ.ಜಿ. ಗಂಗನಪಳ್ಳಿ ಹಾಗೂ ಸಾಹಿತಿ ದಿವಂಗತ ರಾಮರಾವ ಗಂಗನಪಳ್ಳಿ ಅವರ ಸ್ಮರಣಾರ್ಥ ಪ್ರಶಸ್ತಿ ಪ್ರದಾನ, ಉಪನ್ಯಾಸ ಮತ್ತು ಕವಿಗೋಷ್ಠಿ ಕಾರ್ಯಕ್ರಮವು ನಗರದ ಶ್ರೀ ಕೃಷ್ಣ ದರ್ಶಿನಿ ಉಡುಪಿ ಹೋಟೆಲ್‌ನ ಮಹಾಲಕ್ಷ್ಮಿ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ದಿವಂಗತ ಎಂ.ಜಿ ಗಂಗನಪಳ್ಳಿ, ಹಾಗೂ ರಾಮರಾವ ಗಂಗನಪಳ್ಳಿ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ನಂತರ ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ಅವರ ಸಹೋದರರಾದ ರಾಮರಾವ ಗಂಗನಪಳ್ಳಿ ಅವರೂ ಶ್ರೇಷ್ಠ ಸಾಹಿತಿ, ನ್ಯಾಯವಾದಿ ಹಾಗೂ ಬ್ಯಾಂಕ್ ಉದ್ಯೋಗಿಯಾಗಿದ್ದು, ಸಾಹಿತ್ಯ ಕ್ಷೇತ್ರದಲ್ಲಿ ಗಮನಾರ್ಹ ಸೇವೆ ಸಲ್ಲಿಸಿದ್ದಾರೆ. ಸಾಹಿತ್ಯ ಮತ್ತು ಸಮಾಜಮುಖಿ ಚಟುವಟಿಕೆಗಳ ಮೂಲಕ ಇಬ್ಬರೂ ಸಹೋದರರು ಕನ್ನಡ ನಾಡಿಗೆ ಅಪಾರ ಕೊಡುಗೆ ನೀಡಿದ್ದಾರೆ. ಇಂದು ಅವರು ನಮ್ಮೊಂದಿಗಿಲ್ಲದಿರುವುದು ಸಾಹಿತ್ಯ ಲೋಕಕ್ಕೆ ತುಂಬಲಾರದ ನಷ್ಟವಾಗಿದೆ. ಆದರೆ ಅವರ ಆದರ್ಶಗಳು, ಆಚಾರ ವಿಚಾರಗಳು ಮತ್ತು ಸಾಹಿತ್ಯ ಕೃತಿಗಳು ಜನಮಾನಸದಲ್ಲಿ ಸದಾ ಜೀವಂತವಾಗಿದ್ದು, ಅವರು ಚಿರಸ್ಮರಣೀಯರಾಗಿರುತ್ತಾರೆ ಎಂದು ಅವರು ಹೇಳಿದ್ದಾರೆ.

ಜನಪರ ಸಾಂಸ್ಕೃತಿಕ ಪ್ರತಿಷ್ಠಾನದ ಸಂಚಾಲಕ ಡಾ. ಸಂಜೀವಕುಮಾರ ಅತಿವಾಳೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಎಂ.ಜಿ. ಗಂಗನಪಳ್ಳಿ ಅವರ ಸ್ಮರಣಾರ್ಥ 'ಭಾವಗಂಗೆ' ಅಭಿನಂದನ ಗ್ರಂಥವನ್ನು ಕೇವಲ ಆರು ತಿಂಗಳ ಅವಧಿಯಲ್ಲಿ ಸಮಗ್ರ ಮಾಹಿತಿ ಸಂಗ್ರಹಿಸಿ ಸಿದ್ಧಪಡಿಸಿ ಪ್ರಕಟಿಸಲಾಗಿದೆ. ಸುಮಾರು 360 ಪುಟಗಳ ಈ ಗ್ರಂಥದಲ್ಲಿ ರಾಜ್ಯದ ವಿವಿಧ ಭಾಗಗಳ ಕವಿಗಳು, ಸಾಹಿತಿಗಳು ಹಾಗೂ ಸಾಹಿತ್ಯಾಸಕ್ತರ ಲೇಖನಗಳು ಮತ್ತು ಗಂಗನಪಳ್ಳಿ ಅವರ ಸಾಹಿತ್ಯ ವ್ಯಕ್ತಿತ್ವದ ವಿವಿಧ ಆಯಾಮಗಳನ್ನು ದಾಖಲಿಸುವ ಪ್ರಯತ್ನ ಮಾಡಲಾಗಿದೆ ಎಂದು ಹೇಳಿದರು.

ಮುಂದಿನ ದಿನಗಳಲ್ಲಿಯೂ ಗಂಗನಪಳ್ಳಿ ಕುಟುಂಬದೊಂದಿಗೆ ಕೈಜೋಡಿಸಿ ಅವರ ಹೆಸರಿನಲ್ಲಿ ಇನ್ನಷ್ಟು ಪ್ರಶಸ್ತಿಗಳು, ಸಾಹಿತ್ಯ ಸಂಕಿರಣಗಳು, ವಿಚಾರಗೋಷ್ಠಿಗಳು ಹಾಗೂ ವಿವಿಧ ಸಾಹಿತ್ಯ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು. ಅವರ ಆದರ್ಶಗಳು ಮತ್ತು ಸಾಹಿತ್ಯ ಸೇವೆ ಯುವಪೀಳಿಗೆಗೆ ತಲುಪುವಂತೆ ಕಾರ್ಯನಿರ್ವಹಿಸುವುದರ ಜೊತೆಗೆ ಹೊಸ ಪ್ರತಿಭೆಗಳಿಗೆ ವೇದಿಕೆ ಕಲ್ಪಿಸುವ ಕಾರ್ಯವನ್ನು ಜನಪರ ಸಾಂಸ್ಕೃತಿಕ ಪ್ರತಿಷ್ಠಾನ ನಿರಂತರವಾಗಿ ಮಾಡಲಿದೆ ಎಂದು ತಿಳಿಸಿದರು.

ನಿವೃತ್ತ ಅಧಿಕಾರಿ ಎಂ.ಎಸ್.ಕಟಗಿ ಮಾತನಾಡಿ, ಜೀವನ ಎನ್ನುವುದು ಒಂದು ಪುಸ್ತಕದ ಪುಟದಂತಿದೆ. ಹುಟ್ಟು ಸಹಜ, ಸಾವು ಖಚಿತ. ಈ ಎರಡರ ನಡುವಿನ ಅವಧಿಯಲ್ಲೇ ಮನುಷ್ಯ ತನ್ನ ಬದುಕಿನ ಅರ್ಥವನ್ನು ಕಂಡುಕೊಳ್ಳಬೇಕು. ಆಶುಕವಿ ಎಂ.ಜಿ. ಗಂಗನಪಳ್ಳಿ ಅವರು 'ಸಾಲವಿಲ್ಲದ ಬದುಕು, ರೋಗವಿಲ್ಲದ ಶರೀರ' ಎಂಬ ಆದರ್ಶವನ್ನು ಪಾಲಿಸಿಕೊಂಡು ಸರಳ, ಶಿಸ್ತುಬದ್ಧ ಹಾಗೂ ಮೌಲ್ಯಯುತ ಜೀವನ ನಡೆಸಿದರು.

ಎಂ.ಜಿ. ಗಂಗನಪಳ್ಳಿ ಹಾಗೂ ರಾಮರಾವ ಗಂಗನಪಳ್ಳಿ ಸಹೋದರರು ಸಾಹಿತ್ಯ, ಸಂಸ್ಕೃತಿ ಮತ್ತು ಸಮಾಜಮುಖಿ ಚಟುವಟಿಕೆಗಳ ಮೂಲಕ ಬೀದರ ಜಿಲ್ಲೆಯ ಸಾಹಿತ್ಯ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಅವರ ಸೇವೆ ಮತ್ತು ಸಾಧನೆ ಇಂದಿನ ಪೀಳಿಗೆಗೆ ಆದರ್ಶವಾಗಿದ್ದು, ಅವರ ಸ್ಮರಣೆ ಸದಾ ಚಿರಸ್ಥಾಯಿಯಾಗಿರಲಿದೆ, ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಸದ್ಭಾವನಾ ಮಂಚ್ ಅಧ್ಯಕ್ಷ ಗುರುನಾಥ ಗಡ್ಡೆ ಹಾಗೂ ಸಮಗ್ರ ಶಿಕ್ಷಣ ಕರ್ನಾಟಕದ ಸಹಾಯಕ ಯೋಜನಾ ಸಮನ್ವಯಾಧಿಕಾರಿ ಪ್ರತಿಭಾ ಮೆಂಚ್, ಜಾಲಿಂದರ ಗಂಗನಪಳ್ಳಿ, ಅಶೋಕ ಗಂಗನಪಳ್ಳಿ, ಡಾ. ದತ್ತಪ್ರಸಾದ ಗಂಗನಪಳ್ಳಿ, ವೇದಿಕೆ ಮೇಲೆ ಉಪಸ್ಥಿತರಿದ್ದು, ಗಂಗನಪಳ್ಳಿ ಅವರ ಸಾಹಿತ್ಯ, ಸಾಮಾಜಿಕ ಚಿಂತನೆ ಹಾಗೂ ಕನ್ನಡ ನಾಡು ನುಡಿಗೆ ಅವರು ಸಲ್ಲಿಸಿದ ಕೊಡುಗೆಯನ್ನು ಸ್ಮರಿಸಿದರು.

ಹಿರಿಯ ಸಾಹಿತಿ ರಮೇಶ ಬಿರಾದಾರ ಅವರು ಎಂ.ಜಿ. ಗಂಗನಪಳ್ಳಿ ಅವರ ಬದುಕು ಮತ್ತು ಸಾಹಿತ್ಯ ವಿಷಯದ ಕುರಿತು ಉಪನ್ಯಾಸ ನೀಡಿ, ಅವರ ಸಾಹಿತ್ಯಿಕ ಸಾಧನೆ ಹಾಗೂ ಆಶುಕವಿತ್ವದ ವೈಶಿಷ್ಟಗಳನ್ನು ವಿವರಿಸಿದರು. ಅಖಿಲ ಭಾರತ ದಾಸ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ರವೀಂದ್ರ ಲಂಜವಾಡಕರ್ ಅವರು ರಾಮರಾವ ಗಂಗನಪಳ್ಳಿ ಅವರ ಬದುಕು ಮತ್ತು ಸಾಹಿತ್ಯ ವಿಷಯವಾಗಿ ಉಪನ್ಯಾಸ ನೀಡಿ, ಅವರ ಸಾಹಿತ್ಯ ಸೇವೆ ಹಾಗೂ ಸಾಮಾಜಿಕ ಬದ್ಧತೆಯನ್ನು ಮೆಲುಕು ಹಾಕಿದರು.

ಕಾರ್ಯಕ್ರಮದಲ್ಲಿ ಶಂಭುಲಿಂಗ ವಾಲ್ದೊಡ್ಡಿ, ಹಾಗೂ ರೇಣುಕಾ ಎನ್.ಬಿ. ಅವರು ಗಂಗನಪಳ್ಳಿ ಅವರ ಕಾವ್ಯಗಳನ್ನು ಗಾಯನದ ಮೂಲಕ ಪ್ರಸ್ತುತಪಡಿಸಿದರು.

ಈ ಸಂದರ್ಭದಲ್ಲಿ ಎಂ.ಜಿ. ಗಂಗನಪಳ್ಳಿ ಕಾವ್ಯ ಪ್ರಶಸ್ತಿಯನ್ನು ಹಿರಿಯ ಸಾಹಿತಿ ಮಾಣಿಕ ನೇಳಗೆ ಅವರಿಗೆ ಹಾಗೂ ರಾಮರಾವ ಗಂಗನಪಳ್ಳಿ ಉದಯೋನ್ಮುಖ ಬರಹಗಾರ ಪ್ರಶಸ್ತಿಯನ್ನು ಸಾಹಿತಿ ಹಾಗೂ ಶಿಕ್ಷಕಿ ಸುನೀತಾ ಬಿರಾದಾರ ಅವರಿಗೆ ಪ್ರದಾನ ಮಾಡಿ ತಲಾ 5 ಸಾವಿರ ನಗದು ಬಹುಮಾನ ನೀಡಿ ಸನ್ಮಾನಿಸಿ ಗೌರವಿಸಲಾಯಿತು.

ಪ್ರಾರಂಭದಲ್ಲಿ ಜಾಲಿಂದರ ಗಂಗನಪಳ್ಳಿ ಸ್ವಾಗತಿಸಿ, ಪ್ರಾಸ್ತಾವಿಕ ಮಾತನಾಡಿದರು, ಡಾ. ಸುನೀತಾ ಬಿಕ್ಲೆ ನಿರೂಪಿಸಿದರೆ, ಡಾ. ದತ್ತಪ್ರಸಾದ ಗಂಗನಪಳ್ಳಿ ವಂದಿಸಿದರು.

ಬಳಿಕ ನಡೆದ ಕವಿಗೋಷ್ಠಿಯಲ್ಲಿ ಎಸ್.ಎಸ್. ದೊಡಮನಿ, ಉಮಾಕಾಂತ ಮೀಸೆ, ಮಲ್ಲಿಕಾರ್ಜುನ ಮುಂಡಾಸೆ, ಮುರಳಿನಾಥ ಮೇತ್ರೆ, ಡಾ. ಗೌತಮ ಸಂಗಣ್ಣೂರ್, ಶ್ರೀದೇವಿ ಪಾಟೀಲ್, ಸಿದ್ದಮ್ಮ ಬಸವಣ್ಣೂರ್, ಸರಿತಾ ಬೇಬಿ, ಹಾಗೂ ಆತ್ಮನಂದ ಬಂಬುಳಗಿ, ಸೇರಿದಂತೆ ಅನೇಕ ಕವಿಗಳು ತಮ್ಮ ಕವನಗಳನ್ನು ವಾಚಿಸಿ ಮೆಚ್ಚುಗೆ ಗಳಿಸಿದರು.

ಕಾರ್ಯಕ್ರಮದಲ್ಲಿ ಜನಪರ ಸಾಂಸ್ಕೃತಿಕ ಪ್ರತಿಷ್ಠಾನದ ಪದಾಧಿಕಾರಿಗಳು, ಸಾಹಿತ್ಯಾಸಕ್ತರು, ಕವಿಗಳು, ಶಿಕ್ಷಕರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಕಾರ್ಯಕ್ರಮ ಯಶಸ್ವಿಗೊಳಿಸಿದರು.

**PAPER PUBLICATION**
**IN THE COURT OF SENIOR CIVIL JUDGE AT HUMNABAD**
**M.C. No.39/2025**

**Plaintiff :**
Rajkumar
// Vs //
**Respected :**
Padmavati
**Sub:-Petitiion U/s 13(1)(ia)(ib) of the Hindu Marriage Act.**
**To,**
**Padmavati W/o Rajkumar Kargar, Age: 24 years, Occu: Household, R/o Mustari now C/o Rajkumar kotgenour near Govt school village Kalvadi Tq.Bhalki.**

Whereas, the plaintiff have filed the suit against the respondent for suit for petition U/s 13(1)(ia)(ib) of hindu marriage act have taken steps your appearance in the proceeding several times but summons could not be served. Therefore you are hereby summoned to appear before this Hon'ble court in person or through your pleader duly instructed and able to answer all material questions relating to the claim of the plaintiff on the day of 08-09-2026 at 10.30 AM answer the claim of the plaintiff and you are directed to produce all such documents upon which you intend to rely in support of your defense.

Take notice that in default of your appearance on the day before mentioned the suit will be heard and determined in your absence.

Given under my hand and the seal of the court, on 22nd day of July-2026.

**//By order of the Court//**
**C.M.OSenior civil judgeJMFC Court Humnabad.**

# ಸಂಗಯ್ಯ ಸ್ವಾಮಿ ಹಿರೇಮಠ ವಯೋನಿವೃತ್ತಿ ಅಭಿನಂದನಾ ಸಮಾರಂಭ

## ಸರಕಾರಿ ನೌಕರರು ದಕ್ಷ ಮತ್ತು ಪ್ರಾಮಾಣಿಕತೆಯಿಂದ ಕೆಲಸ ನಿರ್ವಹಿಸಿ: ಸೋಮಶೇಖರ ಬಿರಾದಾರ

• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ




ಸರಕಾರಿ ನೌಕರರು ತಮ್ಮ ಸೇವಾವಧಿಯಲ್ಲಿ ಯಾವುದೇ ರೀತಿಯ ಲೋಪಗಳನ್ನು ಮಾಡದೆ ದಕ್ಷ ಮತ್ತು ಪ್ರಾಮಾಣಿಕತೆಯಿಂದ ಉತ್ತಮ ರೀತಿಯ ಸೇವೆ ಸಲ್ಲಿಸಿದ್ದಾಗ ನಿವೃತ್ತಿಯ ಸಂದರ್ಭದಲ್ಲಿ ಸಾರ್ವಜನಿಕರು ಆತ್ಮೀಯವಾಗಿ ಅಭಿನಂದಿಸುವ ಕಾರ್ಯಗಳು ನಿಜಕ್ಕೂ ಶ್ಲಾಘನೀಯವಾಗಿದೆ ಎಂದು ಡೊಂಗರಗಿ ಗ್ರಾಮದ ಹನುಮಾನ ಮಂದಿರದಲ್ಲಿ ಶ್ರೀ ವೈಷ್ಣೋದೇವಿ ಕಲ್ಚರಲ್ ಮತ್ತು ಚಾರಿಟೇಬಲ್ ಟ್ರಸ್ಟ್ ಗುಮ್ಮೆ ಕಾಲೋನಿ, ಬೀದರ ವತಿಯಿಂದ ಭಾನುವಾರ ಆಯೋಜಿಸಿದ ಸಂಗೀತ ಶಿಕ್ಷಕ ಸಂಗಯ್ಯ ಸ್ವಾಮಿ ಹಿರೇಮಠ ಇವರ ವಯೋನಿವೃತ್ತಿಯ ಅಭಿನಂದನಾ ಸಮಾರಂಭ ಹಾಗೂ ಸಂಗೀತ ಕಾರ್ಯಕ್ರಮ ಉದ್ಘಾಟಿಸಿ ಬೀದರ ಜಿಲ್ಲಾ ಸರಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಸೋಮಶೇಖರ ಬಿರಾದಾರ ಮಾತನಾಡಿದರು.

ಸಾಹಿತಿ ಹಾಗೂ ಜಿಲ್ಲಾ ಖಜಾನೆಯ ಸಹಾಯಕ ನಿರ್ದೇಶಕ ಮಾಣಿಕ ನೇಳಗೆ ಮುಖ್ಯ ಅತಿಥಿಯಾಗಿ ಮಾತನಾಡಿ, ನಶಿಸುತ್ತಿರುವ ಸಂಗೀತ ಕಲೆ ಉಳಿಸಿ ಬೆಳೆಸುವುದು ಅವಶ್ಯಕವಾಗಿದ್ದು, ಸಂಗೀತ ಶಿಕ್ಷಕ ಸೇವೆಯಿಂದ ನಿವೃತ್ತಿ ಹೊಂದಿದ ಸಂಗಯ್ಯ ಹಿರೇಮಠ ಅವರು ಮುಂದಿನ ಪೀಳಿಗೆಗೆ ಸಂಗೀತ ಸೇವೆ ನೀಡುವುದು ಅತ್ಯಾವಶ್ಯಕವಾಗಿದೆ. ಅದರಲ್ಲೂ ಗ್ರಾಮೀಣ ಭಾಗದಲ್ಲಿನ ಕಲೆ, ಸಂಸ್ಕೃತಿ, ಸಂಪ್ರದಾಯಗಳು ಕ್ಷೀಣಿಸುತ್ತಿದ್ದು, ಅವುಗಳ ಉಳಿವಿಗೆ ಎಲ್ಲರೂ ಪ್ರಾಮಾಣಿಕ ಪ್ರಯತ್ನ ಮಾಡಬೇಕಾಗಿದೆ ಎಂದರು.

ಡೊಂಗರಗಿ ಗ್ರಾಮದ ಸಂಗಯ್ಯ ಹಿರೇಮಠರು ಬಾಲ್ಯದಲ್ಲಿ ಭಾಲ್ಕಿಯ ಹಿರೇಮಠ ಸಂಸ್ಥಾನದಲ್ಲಿ ಬೆಳೆದು, ಗದುಗಿನ ಶ್ರೀ ವೀರೇಶ್ವರ ಪುಣ್ಯಾಶ್ರಮದ ಪಂ. ಪುಟ್ಟರಾಜ ಗವಾಯಿಯವರಲ್ಲಿ ಸಂಗೀತ ಕಲಿತು, ಹುಮನಾಬಾದ ತಾಲೂಕಿನ ಜಲಸಂಗಿ ಪ್ರೌಢ ಶಾಲೆಯಲ್ಲಿ ಸಂಗೀತ ಶಿಕ್ಷಕರಾಗಿ ಸುದೀರ್ಘ 24 ವರ್ಷ ಉತ್ತಮ ರೀತಿಯ ಸೇವೆ ಸಲ್ಲಿಸಿ ವಯೋನಿವೃತ್ತಿ ಹೊಂದಿದಕ್ಕಾಗಿ ಗ್ರಾಮದಲ್ಲಿಯೇ ಅಭಿನಂದನಾ ಕಾರ್ಯಕ್ರಮ ಹಮ್ಮಿಕೊಂಡಿರುವುದು ನಿಜಕ್ಕೂ ಅರ್ಥಪೂರ್ಣವಾಗಿದೆ ಎಂದು ಭಾಲ್ಕಿ ಹಿರೇಮಠ ಸಂಸ್ಥಾನದ ಪೂಜ್ಯ ಶ್ರೀ ಗುರುಬಸವ ಪಟ್ಟದ್ದೇವರು ತಮ್ಮ ಆಶೀವರ್ಚನದಲ್ಲಿ ಹೇಳಿದರು. ಸಾರ್ಥಕ ಬದುಕಿಗೆ ಸರಳ ವ್ಯಕ್ತಿತ್ವವೇ ಬಹಳ ಮುಖ್ಯ. ಆಡಂಬರದ ಬದುಕಿಗಿಂತ ಆತ್ಮಸಾಕ್ಷಿಯ ಬದುಕೇ ನಿಜವಾದುದು ಎಂದರು.

ಶ್ರೀ ವೈಷ್ಣೋದೇವಿ ಕಲ್ಚರಲ್ ಮತ್ತು ಚಾರಿಟೇಬಲ್ ಟ್ರಸ್ಟ್‌ನ ಅಧ್ಯಕ್ಷ ಸಂಗಮೇಶ ಬಿರಾದಾರ ಅಧ್ಯಕ್ಷತೆ ವಹಿಸಿ ಮಾತನಾಡಿ, ಜೀವನದಲ್ಲಿ ಗಳಿಸಿದ ಹಣದಲ್ಲಿ ಒಂದಿಷ್ಟು ಭಾಗ ಧರ್ಮಾರ್ಥ ಕಾರ್ಯಗಳಿಗೆ ನೀಡುವುದರಿಂದ ಆತ್ಮತೃಪ್ತಿಯ ಭಾವವುಂಟಾಗುತ್ತದೆ. ಟ್ರಸ್ಟ್ ವತಿಯಿಂದ ಅನೇಕ ಸಾಂಸ್ಕೃತಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ಧಾರ್ಮಿಕ ಕಾರ್ಯಗಳನ್ನು ಮಾಡುತ್ತ ಬರಲಾಗುತ್ತಿದೆ ಎಂದರು.

ಜಿಲ್ಲಾ ಪಂಚಾಯತ ಯೋಜನಾ ನಿರ್ದೇಶಕರಾದ ಸೂರ್ಯಕಾಂತ ಬಿರಾದಾರ ಮಾತನಾಡಿದರು. ಮುಖ್ಯ ಅತಿಥಿಗಳಾಗಿ ಹುಮನಾಬಾದ ಪಿ.ಎಸ್.ಐ. ರಾಚಯ್ಯ ಸ್ವಾಮಿ, ನೌಕರರ ಸಂಘದ ಖಜಾಂಚಿ ದೇವಪ್ಪಾ ಚಾಂಬೋಳೆ, ಪಿ.ಕೆ.ಪಿ.ಎಸ್. ಉಪಾಧ್ಯಕ್ಷ ಚಂದ್ರಕಾಂತ ಬಿರಾದಾರ ಆಗಮಿಸಿದರು.

ಮೊದಲಿಗೆ ಪಂ. ಪುಟ್ಟರಾಜ ಗವಾಯಿ ಹಾಗೂ ಗುರುಬಸವಣ್ಣನವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಲಾಯಿತು. ಶ್ರೀ ವೈಷ್ಣೋದೇವಿ ಕಲ್ಚರಲ್ ಮತ್ತು ಚಾರಿಟೇಬಲ್ ಟ್ರಸ್ಟ್ ವತಿಯಿಂದ ವಯೋನಿವೃತ್ತಿ ಹೊಂದಿದ ಸಂಗೀತ ಶಿಕ್ಷಕ ಸಂಗಯ್ಯ ಸ್ವಾಮಿ ಹಿರೇಮಠ ದಂಪತಿಗಳಿಗೆ ವಿಶೇಷವಾಗಿ ಸನ್ಮಾನಿಸಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಕು. ಪ್ರಗತಿ ಹಾಗೂ ಗಾನವಿ ಪ್ರಾರ್ಥನೆ ಗೀತೆ ನಡೆಸಿಕೊಟ್ಟರು. ಸಂಗೀತ ಕಲಾವಿದರಾದ ಕೆಂಭಾವಿಯ ಬಸವರಾಜ ಘಂಟನೂರ, ಜನಾರ್ಧನ ವಾಘಮಾರೆ, ಶಿವದೇವ ಸಂಸ್ಥಾನಮಠ ಮೈಸೂರು, ಕಲಬುರಗಿಯ ಹಣಮಂತರಾಯ ಕುಲಕರ್ಣಿ, ಬಸವಕಲ್ಯಾಣದ ರಾಮಚಂದ್ರ ಕಲಹಿಪ್ಪರ್ಗಿ, ರಾಜಕುಮಾರ ಹೂಗಾರ, ರಮೇಶ ಗರೂಡಕರ್, ಮಲ್ಲಿಕಾರ್ಜುನ ನಾಗಮಾರಪಳ್ಳಿ ಹಾಗೂ ಜೈ ಹನುಮಾನ ಭಜನೆ ಮತ್ತು ಸಾಂಸ್ಕೃತಿಕ ಸಂಘ ಮತ್ತು ಅಕ್ಕಮಹಾದೇವಿ ಮಹಿಳಾ ಭಜನಾ ಸಂಘದವರು ಸಂಗೀತ ಸೇವೆ ಸಲ್ಲಿಸಿದರು.

ಡೊಂಗರಗಿ ಗ್ರಾಮದ ಇಬ್ಬರು ಸರಕಾರಿ ನೌಕರರಿಗೆ ಹಾಗೂ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ.ಯಲ್ಲಿ ಅತಿ ಹೆಚ್ಚು ಅಂಕಪಡೆದ ವಿದ್ಯಾರ್ಥಿಗಳಿಗೆ ಗೌರವಿಸಿ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಮಲ್ಲಿಕಾರ್ಜುನ ಬಿರಾದಾರ, ಅನೀಲಕುಮಾರ, ಮಹಾಂತೇಶ, ಧನರಾಜ, ಮಹಾದೇವ, ಪಂಡಿತ, ಚಂದ್ರಕಾಂತ, ರಮೇಶ, ಶಿವರಾಜ, ಧನಯ್ಯ, ವರದಯ್ಯ, ಲೋಕೇಶ, ಆಶೀಷ, ಬಂಡೆಪ್ಪ, ನಾಗನಾಥ, ದತ್ತಾತ್ರಿ, ಭಾರತಿ ಬಿರಾದಾರ, ಮಹಾನಂದಾ, ಸಂಗೀತಾ, ಸೂಗಮ್ಮ ಮುಂತಾದವರು ಉಪಸ್ಥಿತರಿದ್ದರು. ಶರಣಯ್ಯ ಸ್ವಾಮಿ ಸ್ವಾಗತಿಸಿದರು. ನವಲಿಂಗಕುಮಾರ ಪಾಟೀಲ್ ನಿರೂಪಣೆ ಮಾಡಿದರೆ, ಕುಮಾರಿ ಪ್ರಗತಿ ಹಿರೇಮಠ ವಂದಿಸಿದರು.

# ನೌಕರರು ಸಂಘಟಿತರಾಗಿ ಕಾರ್ಯನಿರ್ವಹಿಸಿ

• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ನೌಕರರು ಸಂಘಟಿತರಾಗಿ ಸೇವಾ ಮನೋಭಾವದಿಂದ ಕಾರ್ಯನಿರ್ವಹಿಸಿದಾಗ ಮಾತ್ರ ಆಡಳಿತ ವ್ಯವಸ್ಥೆ ಮತ್ತಷ್ಟು ಪರಿಣಾಮಕಾರಿಯಾಗಲು ಸಾಧ್ಯವಾಗುತ್ತದೆ. ನೌಕರರ ಹಕ್ಕುಗಳು, ಸೇವಾ ಭದ್ರತೆ ಹಾಗೂ ಕಲ್ಯಾಣಕ್ಕಾಗಿ ರಾಜ್ಯ ಸರಕಾರಿ ನೌಕರರ ಸಂಘವು ಸದಾ ಬದ್ಧತೆಯಿಂದ ಕಾರ್ಯನಿರ್ವಹಿಸುತ್ತಿದೆ ಎಂದು ತಾಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿ ಸೂರ್ಯಕಾಂತ ಬಿರಾದಾರ ಹೇಳಿದರು. ನಗರದ ತಾಲೂಕು ಪಂಚಾಯತಿ ಸಭಾಂಗಣದಲ್ಲಿ ತಾಲೂಕು ಸರಕಾರಿ ನೌಕರರ ಸಂಘದ ವತಿಯಿಂದ ಶನಿವಾರ ಆಯೋಜಿಸಿದ್ದ 2025–26ನೇ ಸಾಲಿನ ಸರಕಾರಿ ನೌಕರರ ಸಂಘದ ಸರ್ವಸದಸ್ಯರ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಅವರು ಮಾತನಾಡಿದರು. ಎಲ್ಲ ನೌಕರರು ಸಾರ್ವಜನಿಕರಿಗೆ ಪ್ರಾಮಾಣಿಕವಾಗಿ, ಪಾರದರ್ಶಕ ಮತ್ತು ಉತ್ತಮ ಆಡಳಿತ ಸೇವೆ ಒದಗಿಸಬೇಕು ಎಂದು ತಿಳಿಸಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಸಂಘದ ಅಧ್ಯಕ್ಷ ಚಂದ್ರಶೇಖರ ಬನ್ನಾಳೆ ಮಾತನಾಡಿ, ಸಂಘದ ಯಶಸ್ಸಿನ ಹಿಂದೆ ಸದಸ್ಯರ ಒಗ್ಗಟ್ಟು ಮತ್ತು ಸಕ್ರಿಯ ಸಹಭಾಗಿತ್ವವೇ ಪ್ರಮುಖ ಶಕ್ತಿಯಾಗಿದೆ. ನೌಕರರ ನ್ಯಾಯಯುತ ಬೇಡಿಕೆಗಳ ಈಡೇರಿಕೆ, ಸೇವಾ ಹಿತಾಸಕ್ತಿಗಳ ರಕ್ಷಣೆ ಹಾಗೂ ಸಂಘದ ಬಲವರ್ಧನೆಗಾಗಿ ಸಂಘವು ನಿರಂತರವಾಗಿ ಶ್ರಮಿಸುತ್ತಿದೆ ಮುಂದಿನ ದಿನಗಳಲ್ಲಿ ಶೀಘ್ರವಾಗಿ ಎನ್‌ಪಿಎಸ್ ರದ್ದುಪಡಿಸಿ ಓಪಿಎಸ್ ಜಾರಿಗೆ ತರಲು ರಾಜ್ಯ ಸರಕಾರಕ್ಕೆ ಮತ್ತು ರಾಜ್ಯ ಸಂಘಕ್ಕೆ ಹಕ್ಕೋತ್ತಾಯ ಮಾಡುವಾದಗಿ ಭರವಸೆ ನೀಡಿದರು. ಸಂಘದ ಪ್ರಧಾನ ಕಾರ್ಯದರ್ಶಿ ರಾಜಪ್ಪ ಪಾಟೀಲ್ ಅವರು ಸಂಘದ 2025–26ನೇ ಸಾಲಿನ ವಾರ್ಷಿಕ ವರದಿ ಹಾಗೂ ಆದಾಯ–ವೆಚ್ಚದ ಲೆಕ್ಕಪತ್ರವನ್ನು ಮಂಡಿಸಿದರು. ಸಭೆಯಲ್ಲಿ ಭಾಗವಹಿಸಿದ್ದ ಸದಸ್ಯರು ವರದಿ ಹಾಗೂ ಲೆಕ್ಕಪತ್ರವನ್ನು ಸರ್ವಾನುಮತದಿಂದ ಅನುಮೋದಿಸಿದರು. ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಬಸವರಾಜ ದಾನಾ ಮಾತನಾಡಿ, ಸರ್ಕಾರಿ ನೌಕರರ ಸಂಘದ ಕಾರ್ಯಚಟುವಟಿಕೆಗಳನ್ನು ಶ್ಲಾಘಿಸಿ, ಸಂಘದ ಅಭಿವೃದ್ಧಿಗೆ ಅಗತ್ಯವಾದ ಸಲಹೆಗಳನ್ನು ನೀಡಿದರು.




ಈ ಸಂದರ್ಭದಲ್ಲಿ ಪ್ರಮುಖರಾದ ಶೇಮಿ ಪಟೇಲ್, ಸುನಿಲ ಬಿರಾದಾರ, ಬಸವರಾಜ ಬಂಗಾ–ರೆ, ಶರಣಬಸವರಾಜ ಶೆಟ್ಟರ, ನಂದುಕುಮಾರ ಜಾಧವ, ಸುಭಾಷ ಸತಾರೆ, ಲಕ್ಷ್ಮಿಕಾಂತ ಪವಾರೆ, ಬಲಬೀರಸಿಂಗ್, ವಿಜಯಕುಮಾರ ಪಾಟೀಲ, ಮಹೇಬುಬ ಖಾನ, ಮಾರುತಿ ಜಬನೂರ, ಧನರಾಜ ಮೇತ್ರೆ, ನೀಲಕಂಠ ಕಾಂಬಳೆ, ಧನರಾಜ ಬಂಬುಳಗೆ, ಸಂಗಮೇಶ ಖೇಳಗೆ, ವೀರಭದ್ರಪ್ಪ, ದಾವುದ ಜಮಾದಾರ, ನೀಲಕಂಠ ಕುರುಣೆ, ದೇವಿಂದ್ರಕುಮಾರ, ಸಚಿನ ಸ್ವಾಮಿ, ಸೂರ್ಯಕಾಂತ ಸುಂಟೆ, ಸಂತೋಷ ವಾಡೆ, ಅಮೋಲ ಮೇತ್ರೆ, ಭೀಮಣ್ಣ ಕೊಂಕಣಿ, ಕುಪೇಂದ್ರ ಜಗಶೆಟ್ಟೆ ಸೇರಿದಂತೆ ಸಂಘದ ಪದಾಧಿಕಾರಿಗಳು, ನಿರ್ದೇಶಕರು, ನಾಮನಿರ್ದೇಶಿತ ಸದಸ್ಯರು ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಭಾಗವಹಿಸಿದ್ದರು. ರವೀಚಂದ್ರ ಮೈನಾಳೆ ಸ್ವಾಗತಿಸಿದರು. ಚಂದ್ರಕಾಂತ ತಳವಾಡೆ ನಿರೂಪಿಸಿದರು. ಪ್ರಭು ಡಿಗ್ಗೆ ವಂದಿಸಿದರು.

# ಕಾಯ ಚಕ್ಕಡಿಗೆ ಸದ್ಭಾವವೇ ಕಡಾಣಿ : ಹಾರಕೂಡ ಶ್ರೀ



• ಮಲ್ಲಮ್ಮ ನುಡಿ ವಾರ್ತೆ ಬಸವಕಲ್ಯಾಣ

ಮನುಷ್ಯ ದೇಹವೆಂಬ ಚಕ್ಕಡಿ ಧರ್ಮ ಮಾರ್ಗದಲ್ಲಿ ಸಾಗಬೇಕಾದರೆ ಸದ್ಭಾವದ ಕಡಾಣಿ ಅಗತ್ಯವಾಗಿದೆ ಎಂದು ಹಾರಕೂಡದ ಪೂಜ್ಯಶ್ರೀ ಡಾ.ಚನ್ನವೀರ ಶಿವಾಚಾರ್ಯರು ನುಡಿದರು. ತಾಲೂಕಿನ ಹಾರಕೂಡ ಶ್ರೀಮಠದಲ್ಲಿ ಗುರುವಂದನೆ ಅಂಗವಾಗಿ ಆಯೋಜಿಸಿದ ಧರ್ಮ ಸಭೆಯ ಪಾವನ ಸನ್ನಿಧಾನವಹಿಸಿ ಮಾತನಾಡಿದ ಶ್ರೀಗಳು, ಗುರು ಸಾನಿಧ್ಯದಿಂದ ದೊರೆತ ಸದ್ಭಾವ ಮನುಷ್ಯನನ್ನು ಅರ್ಥಹೀನ ಬದುಕಿನಿಂದ ಪಾರು ಮಾಡುತ್ತದೆ. ಐಹಿಕ ವಿಷಯ ವಾಸನೆಯಿಂದಾಗಿ ಮಾನವ ದುರಾಲೋಚನೆಯ ಮಾಯೆಯಲ್ಲಿ ಸಿಲುಕದಂತೆ ಗುರು ಬೋಧಯ ಸಾರಾಮೃತ ಅವನನ್ನು ರಕ್ಷಿಸುತ್ತದೆ ಎಂದು ನುಡಿದರು. ಪರಿಶುದ್ಧ ಪ್ರಯತ್ನ ಹಾಗೂ ಗುರುವಿನ ಅಂತ:ಕರಣದ ಆಶೀರ್ವಾದದಿಂದ ಮನುಷ್ಯ ಆದರ್ಶ ಗ್ರಹಸ್ಥನಾಗಿ ದೇವರು ಮೆಚ್ಚುವರೀತಿಯಲ್ಲಿ ಬಾಳಿ ಬದುಕಲು ಸಾಧ್ಯವಾಗುತ್ತದೆ ಎಂದು ನುಡಿದ ಶ್ರೀಗಳು ಸರ್ವರಿಗೂ ಸನ್ಮಂಗಳವಾಗಲೆಂದು ಶುಭಹಾರೈಸಿದರು. ಈ ಸಂದರ್ಭದಲ್ಲಿ ವೀರಶಟ್ಟಿ ಇಮಡಾಪೂರ, ಡಾಟಟ ರಾಜಶೇಖರ ಮದರಿ, ಶಂಕರ ಪೂಜಾರಿ, ಶಶಿಧರ ತಡಕಲ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಕಾರ್ತಿಕ ಸ್ವಾಮಿ ಯಲದಗುಂಡಿ ಶರಣಪ್ಪ ಜಮಾದಾರ ಸಂಗೀತ ಸೇವೆ. ಪಾಂಡುರಂಗ ಪೂಜಾರಿ ಸ್ವಾಗತಿಸಿದರು. ಈ ಸಂದರ್ಭದಲ್ಲಿ ಗದಲೇಗಾಂವಬಿ. ಗ್ರಾಮದ ಪಾಂಡುರಂಗ ಪೂಜಾರಿ ಪರಿವಾರದ ವತಿಯಿಂದ ಹಾರಕೂಡ ಶ್ರೀಗಳ 1022ನೇ ತುಲಾಭಾರ ಜರುಗಿತು.

# ವಿದ್ಯಾರ್ಥಿಗಳು ಜೀವನದಲ್ಲಿ ವ್ಯಸನವನ್ನು ಅಳವಡಿಸಿಕೊಳ್ಳಬೇಡಿ :ಬೇವಿನಕಟ್ಟಿ

• ಮಲ್ಲಮ್ಮ ನುಡಿ ವಾರ್ತೆ ಗೋಕರ್ಣ




ಹಿರೇಗುತ್ತಿ ಹೈಸ್ಕೂಲಿನಲ್ಲಿ ಶಿವಯೋಗಿಗಳ ಜನ್ಮದಿನದ ಅಂಗವಾಗಿ ವ್ಯಸನ ಮುಕ್ತ ದಿನಾಚರಣೆ ನಡೆಯಿತು. ಮುಖ್ಯಾಧ್ಯಾಪಕ ವಿಶ್ವನಾಥ ಬೇವಿನಕಟ್ಟಿ ಮಾತನಾಡಿ, ವಿದ್ಯಾರ್ಥಿಗಳು ವ್ಯಸನಗಳಿಂದ ದೂರವಿದ್ದು ಉತ್ತಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕು. ಶಿಕ್ಷಣದೊಂದಿಗೆ ನೈತಿಕ ಮೌಲ್ಯಗಳನ್ನು ಅಳವಡಿಸಿಕೊಂಡಾಗ ಮಾತ್ರ ಜೀವನ ಸಾರ್ಥಕವಾಗುತ್ತದೆ ಎಂದರು.

ಶಿಕ್ಷಕ ನಾಗರಾಜ ಜಿ.ನಾಯಕ ಮಾತನಾಡಿ, ವ್ಯಸನಗಳು ವ್ಯಕ್ತಿಯ ಆರೋಗ್ಯ, ಕುಟುಂಬ ಹಾಗೂ ಸಮಾಜದ ಮೇಲೆ ಗಂಭೀರ ದುಷ್ಪರಿಣಾಮ ಬೀರುತ್ತವೆ. ವಿದ್ಯಾರ್ಥಿಗಳು ವ್ಯಸನಗಳ ಬಗ್ಗೆ ಜಾಗೃತರಾಗಿ ಆರೋಗ್ಯಕರ ಜೀವನಶೈಲಿಯನ್ನು ರೂಢಿಸಿಕೊಳ್ಳಬೇಕು ಎಂದರು.

ವಿಜ್ಞಾನ ಶಿಕ್ಷಕ ಮಹಾದೇವಗೌಡ ಮಾತನಾಡಿ, ತಂಬಾಕು, ಮದ್ಯ ಹಾಗೂ ಇತರ ಮಾದಕ ವ್ಯಸನಗಳ ದುಷ್ಪರಿಣಾಮಗಳ ಕುರಿತು ವಿದ್ಯಾರ್ಥಿಗಳಿಗೆ ಅರಿವು ಮೂಡಿಸಿ, ವ್ಯಸನಮುಕ್ತ ಜೀವನವೇ ಆರೋಗ್ಯಕರ ಮತ್ತು ಯಶಸ್ವಿ ಬದುಕಿನ ಮೂಲಾಧಾರವಾಗಿದೆ ಎಂದರು. ಎನ್. ರಾಮು ಹಿರೇಗುತ್ತಿ ಸ್ವಾಗತಿಸಿದರು. ಬಿ.ಎಡ್ ಪ್ರಶಿಕ್ಷಣಾರ್ಥಿ ಶಾಂತಲಾ ನಾಯಕ ವಂದಿಸಿದರು.

ಶಿಕ್ಷಕರಾದ ಬಾಲಚಂದ್ರ ಅಡಿಗೋಣ, ಜಾನಕಿಗೊಂಡ, ಶಿಲ್ಪಾ ನಾಯಕ, ಭರತ್ ಭಟ್ಟ, ಮದನ ನಾಯಕ, ಮಹಿಮಾಗೌಡ, ಖುಷಿ ಗೌಡ, ಸಿಬ್ಬಂದಿಗಳಾದ ಗೋಪಾಲಕೃಷ್ಣ ಗುನಗಾ, ಗೋವಿಂದ ನಾಯ್ಕ ಹಾಗೂ ಬಿ.ಎಡ್.ಪ್ರಶಿಕ್ಷಣಾರ್ಥಿಗಳಾದ ಅರುಣಗೌಡ, ವೀಣಾಗಾಂವಕರ, ಭಾರತಿ ಪಟಗಾರ, ಸಂಪ್ರೀತಿ ನಾಯಕ, ಶಾಂತಲಾ ನಾಯಕ ಉಪಸ್ಥಿತರಿದ್ದರು.

# ಅಣ್ಣಾಭಾವು ಸಾಠೆರವರ ಜಯಂತಿ ಆಚರಣೆ

• ಮಲ್ಲಮ್ಮ ನುಡಿ ವಾರ್ತೆ ಬಸವಕಲ್ಯಾಣ



ಇಲ್ಲಿನ ಈಶ್ವರ ನಗರ ಓಣಿಯ ಮಾಂಗಗಾರುಡಿಗ ಸಮಾಜದ ಯುವಕ ವ್ಂಂಡ್ ಳಿಂ್ಂ ವತಿಯಿಂದ ಸಾಹಿತ್ಯ–ಸಾಮ್ರಾಟ, ಲೋಕಶಾಹಿರ್, ಅಣ್ಣಾಭಾವು ಸಾಠೆಯವರ ಜಯಂತಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಬಜರಂಗದಳದ ಜಿಲ್ಲಾ ಸಂಯೋಜಕರಾದ ರವಿ ನಾವದ್ಗೇಕರ ಅಣ್ಣಾಭಾವು ಸಾಠೆಯವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದ ಅವರು ನಮ್ಮ ಹಂತ ಸಣ್ಣ, ದೀನದಲಿತ ಸಮುದಾಯದಲ್ಲಿ ಇಂತಹ ಧೀಮಂತ ನಾಯಕರು ಹುಟ್ಟಿದ್ದಾರೆ, ನಮ್ಮೆಲ್ಲರಿಗೂ ಹೆಮ್ಮೆಯ ವಿಷಯ, ಅಂದು ಬರೀ ಒಂದೂವರೆ ದಿವಸ ಶಾಲೆ ಕಲಿತು ಇಡೀ ಜಗತ್ತಿಗೆ ಸಾಹಿತ್ಯದೊಂದಿಗೆ, ಭಾರತೀಯ ಸಂಸ್ಕೃತಿ, ಪರಂಪರೆ ಮತ್ತು ಅಂದಿನ ಸ್ಥಿತಿಗತಿಗಳ ಬಗ್ಗೆ ಜನಪದ ಲಾವಣಿಗಳು, ಕಾದಂಬರಿಯ ಮತ್ತು ನಾಟಕಗಳ ಮೂಲಕ ಸಮಾಜವನ್ನು ಪ್ರತಿಬಿಂಬಿಸುವ ಪ್ರಯತ್ನ ಅಣ್ಣಾಭಾವು ಸಾಠೆ ರವರದಾಗಿತ್ತು, ಇವತ್ತಿಗೂ ಈ ಪರಿಸರ ನೋಡಿದರೆ ಅಂದು ಅಣ್ಣಾಭಾವು ಸಾಠೆಯವರ ಹೇಳಿದ ಮಾತು ನೆನಪಿಗೆ ಬರುತ್ತೆ ಎಂದರು. ಈ ಸಂದರ್ಭದಲ್ಲಿ ಓಣಿಯ ಹಿರಿಯರಾದ ಪಂಡಿತ. ಸುನೀಲ ಸಕಟ, ಸಾವನ ಸಕಟ, ವಿಷ್ಣು, ಸನ್ನಿ, ಗೋರಕ, ಜೀತು, ಹಾಗೂ ಕೃಷ್ಣ ಸಕಟ ಸೇರಿದಂತೆ ಅನೇಕರು ಭಾಗವಹಿಸಿದ್ದರು.

# ವಿಶ್ವ ಸ್ತನ್ಯಪಾನ ಸಪ್ತಾಹ: ಅಂಗನವಾಡಿ ಕೇಂದ್ರದಲ್ಲಿ ಜಾಗೃತಿ ಕಾರ್ಯಕ್ರಮ

• ಮಲ್ಲಮ್ಮ ನುಡಿ ವಾರ್ತೆ ಕಮಲನಗರ



ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಬೀದರ ಹಾಗೂ ಪೋಷಣ್ ಅಭಿಯಾನದ ಸಂಯುಕ್ತಾಶ್ರಯದಲ್ಲಿ ತಾಲೂಕಿನ ಡಿಗ್ಗಿ ಗ್ರಾಮದ ಅಂಗನವಾಡಿ ಕೇಂದ್ರದಲ್ಲಿ

ಆಗಸ್ಟ್ 1 ರಿಂದ ಆಗಸ್ಟ್ 07 ರವರೆಗೆ "ವಿಶ್ವಸ್ತನ್ಯಪಾನ ಸಪ್ತಾಹ" ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿದೆ.

"ಜೀವನದ ಸುಸ್ಥಿರ ಆರಂಭಕ್ಕಾಗಿ ಸ್ತನ್ಯಪಾನ: ಪರಿಣಾಮಕಾರಿ ಕಾರ್ಯವಿಧಾನಗಳನ್ನು ಬಲಪಡಿಸೋಣ" ಎಂಬ ಧ್ಯೇಯ ವಾಕ್ಯಯೊಂದಿಗೆ ಕಾರ್ಯಕ್ರಮ ಬಗ್ಗೆ ಅಂಗನವಾಡಿ ಶಿಕ್ಷಕಿ ಸವಿತಾ ಯುವರಾಜ ರಾಂಪುರೆ ಅವರು ಕಾರ್ಯಕ್ರಮ ಬಗ್ಗೆ ಸಂಪೂರ್ಣ ಮಾಹಿತಿ ನೀಡಿದರು. ಕಾರ್ಯಕ್ರಮದ ಅಂಗವಾಗಿ ಅಂಗನವಾಡಿ ಕೇಂದ್ರಗಳಲ್ಲಿ ತಾಯಂದಿರಿಗೆ ಹಾಗೂ ಗರ್ಭಿಣಿಯರಿಗೆ ಸ್ತನ್ಯಪಾನ ಮತ್ತು ವಯೋಸೂಕ್ತ ಪೂರಕ ಆಹಾರದ ಕುರಿತು ಜಾಗೃತಿ ಮೂಡಿಸಲಾಯಿತು. ಟೇಕ್ ಹೋಮ್ ರೇಷನ್ ನೀಡುವ ಸಂದರ್ಭದಲ್ಲಿ ಫಲಾನುಭವಿಗಳಿಗೆ ಎದೆಹಾಲು ಉಣಿಸುವುದರ ಮಹತ್ವ ಹಾಗೂ ಆರೋಗ್ಯಕರ ಅಭ್ಯಾಸಗಳ ಬಗ್ಗೆ ಮಾಹಿತಿ ನೀಡಲಾಯಿತು. ಈ ಸಂದರ್ಭದಲ್ಲಿ ಅಂಗನವಾಡಿ ಆಶಾ ಕಾರ್ಯಕರ್ತೆ ದೇವಿಕಾ ಪಂಚಾಳ, ಸಹಾಯಕಿ ಸಿಬ್ಬಂದಿ ವಿಮಲಾ ಮೆಹತ್ರೆ, ಸ್ಥಳೀಯ ಸಂಸ್ಥೆಗಳ ಸದಸ್ಯರು, ಆರೋಗ್ಯ ಇಲಾಖೆ ಹಾಗೂ ರಾಷ್ಟ್ರೀಯ ಆರೋಗ್ಯ ಅಭಿಯಾನ (NHM) ಅಧಿಕಾರಿಗಳು ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ತಾಯಂದಿರು ಹಾಗೂ ಮಕ್ಕಳು ಉಪಸ್ಥಿತರಿದ್ದರು.

# ಕುರಗೋಡು ನೀರಾವರಿ ಇಲಾಖೆಯ ಎಇಇ ರಾಮಿರೆಡ್ಡಿಯವರ ವಯೋನಿವೃತ್ತಿ

• ಮಲ್ಲಮ್ಮ ನುಡಿ ವಾರ್ತೆ ಕುರುಗೋಡು



ಆ.3 ಕುರುಗೋಡು ಪಟ್ಟಣದ ನೀರಾವರಿ ಇಲಾಖೆಯಲ್ಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಎಇಇ ಜಿ.ರಾಮಿರೆಡ್ಡಿ ಅವರು ವಯೋನಿವೃತ್ತಿ ಹೊಂದಿದ ಹಿನ್ನಲೆಯಲ್ಲಿ ಅವರ ಪತ್ನಿಯೊಂದಿಗೆ ನೀರಾವರಿ ಇಲಾಖೆಯ ಇಂಜಿನಿಯರ್‌ಗಳು, ಸಿಬ್ಬಂದಿವರ್ಗದವರು ಹಾಗು ಕುರುಗೋಡು ತಾಲೂಕಿನ ವಿವಿದ ಗ್ರಾಮಗಳ ರೈತರು ಅವರಿಗೆ ಹೂಮಾಲೆ ಹಾಕಿ ಸನ್ಮಾನಿಸಿ, ಆತ್ಮೀಯವಾಗಿ ಬೀಳ್ಕೊಟ್ಟರು. ಸನ್ಮಾನಸ್ವೀಕರಿಸಿದ ಕುರುಗೋಡು ನೀರಾವರಿ ಇಲಾಖೆಯ ಎಇಇ ಜಿ.ರಾಮಿರೆಡ್ಡಿ ಅವರು ಮಾತನಾಡಿ ಸತತ 32 ವರ್ಷಗಳ ಕಾಲ ನೀರಾವರಿ ಇಲಾಖೆಯಲ್ಲಿ ಸೇವೆ ಮಾಡಿದ ತೃಪ್ತಿ ನನಗಿದೆ. ಅದರಲ್ಲೂ ನನ್ನ ಅಧಿಕಾರ ಸೇವೆಯಲ್ಲಿ ಕುರುಗೋಡು ತಾಲೂಕಿನ ರೈತರು ಮತ್ತು ನಮ್ಮ ಕಛೇರಿಯ ಇಂಜಿನಿಯರ್‌ಗಳು, ಸಿಬ್ಬಂದಿವರ್ಗದವರು ನನಗೆ ತುಂಬಾ ಸಹಕಾರ ನೀಡಿದ್ದಾರೆ. ಅವರನ್ನು ನಾನೆಂದೂ ಮರೆಯಲಾರೆ ಎಂದು ಭಾವುಕರಾಗಿ ನುಡಿದರು. ಈ ಸಂದರ್ಭದಲ್ಲಿ ರೈತರು ತಮ್ಮ ಅನಿಸಿಕೆ ವ್ಯಕ್ತಪಡಿಸಿ ಮಾತನಾಡಿದ ಅವರು, ನೀರಾವರಿ ಇಲಾಖೆಯ ಎಇಇ ರಾಮಿರೆಡ್ಡಿಯವರು ರೈತರ ವಿಷಯದಲ್ಲಿ ಪ್ರಮಾಣಿಕವಾಗಿ ಸೇವೆ ಮಾಡಿದ್ದಾರೆ. ಅವರು ಕಾಲುವೆಯ ಮೇಲೆ ಬಂದು ರೈತರಿಗೆ ಹೊಂದಾಣಿಕೆಯಿಂದ ನೀರನ್ನು ತಮ್ಮ ಜಮೀನುಗಳಿಗೆ ಹರಿಸಿರಿ ಯಾವುದೇ ರೀತಿಯ ಗಲಬೆಗೆ ಹೋಗದೆ ಎಲ್ಲಾ ರೈತರು ಹೊಂದಾಣಿಕೆಯಿಂದ ನೀರನ್ನು ಪಡೆಯಬೇಕೆಂದು ರೈತರಿಗೆ ಕಿವಿಮಾತುಗಳನ್ನು ಆಡುತ್ತಿದ್ದರು. ಆದ್ದರಿಂದ ಅವರ ನಿವೃತ್ತಿ ಜೀವನ ಸುಖಮಯವಾಗಿರಲೆಂದು ಎಲ್ಲರೂ ಹಾರೈಸಿದರು. ಈ ಸಂದರ್ಭದಲ್ಲಿ ಕುರುಗೋಡು ನೀರಾವರಿ ಇಲಾಖೆಯ ಇಂಜಿನಿಯರ್ ಮತ್ತು ತಾಲೂಕಿನ ಎಲ್ಲಾ ಗ್ರಾಮಗಳ ರೈತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

# ಶರಣಗೌಡ ಬಾನಳರ ಶಿಕ್ಷಣ ಮತ್ತು ಕ್ರೀಡಾ ಸೇವೆಗೆ ಅದ್ದೂರಿ ಗೌರವ



• ಮಲ್ಲಮ್ಮ ನುಡಿ ವಾರ್ತೆ ಹುಣಸಗಿ

ತಾಲೂಕಿನ ಮಾಳನೂರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ದೈಹಿಕ ಶಿಕ್ಷಣ ಶಿಕ್ಷಕರಾದ ಶರಣಗೌಡ ಬಾನಳ ಅವರ 28 ವರ್ಷಗಳ ಸುದೀರ್ಘ ಶೈಕ್ಷಣಿಕ ಹಾಗೂ ಕ್ರೀಡಾ ಸೇವೆಯನ್ನು ಸ್ಮರಿಸಿ ವಯೋನಿವೃತ್ತಿ ಸಮಾರಂಭವನ್ನು ಗ್ರಾಮಸ್ಥರು, ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಹಳೇ ವಿದ್ಯಾರ್ಥಿಗಳ ಸಮ್ಮುಖದಲ್ಲಿ ಅದ್ದೂರಿಯಾಗಿ ಆಚರಿಸಲಾಯಿತು.

ಕಾರ್ಯಕ್ರಮದ ಸಾನಿಧ್ಯವನ್ನು ಪರಮಪೂಜ್ಯ ಗುರುಲಿಂಗ ಮಹಾಸ್ವಾಮಿಗಳು (ಗುಂಡುಕನಾಳ ಮಠ) ವಹಿಸಿ ಆಶೀರ್ವಚನ ನೀಡಿದರು.

ಮುಖ್ಯ ಅತಿಥಿಯಾಗಿ ಮಾತನಾಡಿದ ನಿವೃತ್ತ ಉಪನಿರ್ದೇಶಕ ಶಾಂತಗೌಡ ಪಾಟೀಲ್, "ಸರ್ಕಾರಿ ಸೇವೆಯಲ್ಲಿ ನಿವೃತ್ತಿಯಾಗುವುದು ಅನಿವಾರ್ಯ. ಆದರೆ ಸೇವಾವಧಿಯಲ್ಲಿ ಮಾಡಿದ ಉತ್ತಮ ಕಾರ್ಯಗಳು ಸದಾ ಜನರ ಮನಸ್ಸಿನಲ್ಲಿ ಉಳಿಯುತ್ತವೆ. ಸಮಯಪಾಲನೆ ಶಿಕ್ಷಕ ವೃತ್ತಿಯ ಜೀವಾಳ. ಶರಣಗೌಡ ಬಾನಳ ಅವರು ಅನೇಕ ವಿದ್ಯಾರ್ಥಿಗಳನ್ನು ಜಿಲ್ಲಾ ಹಾಗೂ ರಾಜ್ಯಮಟ್ಟದ ಕ್ರೀಡಾಕೂಟಗಳಿಗೆ ಕರೆದೊಯ್ದು ಶಾಲೆಗೆ ಕೀರ್ತಿ ತಂದಿದ್ದಾರೆ. ಸಮುದಾಯದ ಸಹಕಾರದೊಂದಿಗೆ ಶಾಲೆಯ ಅಭಿವೃದ್ಧಿಗೆ ಶ್ರಮಿಸಿರುವ ಅವರ ಸೇವೆ ಎಲ್ಲರಿಗೂ ಮಾದರಿಯಾಗಿದೆ," ಎಂದು ಹೇಳಿದರು.

ಶಿಕ್ಷಕ ಗುರುನಾಥ್ ನಾವದಗಿ ಅವರು ಶರಣಗೌಡ ಬಾನಳ ಅವರ ಕಿರು ಪರಿಚಯ ಮಾಡಿಕೊಟ್ಟರು. ದೈಹಿಕ ಶಿಕ್ಷಣ ಶಿಕ್ಷಕರಾದ ನಾಗನಗೌಡ ಪಾಟೀಲ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಶರಣಗೌಡ ಬಾನಳ ಅವರ 28 ವರ್ಷಗಳ ಸೇವಾ ಪಯಣ, ಕರ್ತವ್ಯನಿಷ್ಠೆ, ವಿದ್ಯಾರ್ಥಿಗಳಲ್ಲಿ ಕ್ರೀಡಾ ಮನೋಭಾವ ಬೆಳೆಸಿದ ರೀತಿ, ಶಾಲೆಯ ಅಭಿವೃದ್ಧಿಗೆ ನೀಡಿದ ಕೊಡುಗೆ ಹಾಗೂ ಸಹೋದ್ಯೋಗಿಗಳೊಂದಿಗೆ ಹೊಂದಿದ್ದ ಆತ್ಮೀಯ ಬಾಂಧವ್ಯವನ್ನು ಸ್ಮರಿಸಿದರು. ಅವರ ಸೇವೆ ಯುವ ಶಿಕ್ಷಕರಿಗೆ ಆದರ್ಶವಾಗಿದ್ದು, ಶಿಕ್ಷಣ ಹಾಗೂ ಕ್ರೀಡಾ ಕ್ಷೇತ್ರದಲ್ಲಿ ಅವರ ಸಾಧನೆ ಸದಾ ಸ್ಮರಣೀಯವಾಗಿರುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಗ್ರಾಮದ ನಾಗರಿಕರು, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಶರಣಗೌಡ ಬಾನಳ ಅವರನ್ನು ಎತ್ತಿನಗಾಡಿಯಲ್ಲಿ ಮೆರವಣಿಗೆ ನಡೆಸಿ ವಿಶಿಷ್ಟವಾಗಿ ಸನ್ಮಾನಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎಸ್‌ಡಿಎಂಸಿ ಅಧ್ಯಕ್ಷ ದೇವರಾಜ್ ಶಾಸ್ತ್ರಿ ವಹಿಸಿದ್ದರು. ಪ್ರಧಾನ ಗುರುಗಳು, ವಿವಿಧ ಶಾಲೆಗಳ ಮುಖ್ಯೋಪಾಧ್ಯಾಯರು, ಶಿಕ್ಷಕರು, ಗ್ರಾಮದ ಮುಖಂಡರು, ಸ್ನೇಹಿತರು, ಬಂಧುಗಳು, ವಿದ್ಯಾರ್ಥಿಗಳು ಹಾಗೂ ಹಳೇ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ ನಿವೃತ್ತ ಶಿಕ್ಷಕರಿಗೆ ಗೌರವ ಸಮರ್ಪಿಸಿದರು. ದೈಹಿಕ ಶಿಕ್ಷಕ ನಾಗನಗೌಡ ಪಾಟೀಲ್ ಪ್ರಾಸ್ತವಿಕ ಮಾತನಾಡಿದರು, ಶಿಕ್ಷಕ-ಸಾಹಿತಿ ಸಾಹೇಬ್‌ಗೌಡ ಬಿರಾದಾರ್ ಕಾರ್ಯಕ್ರಮವನ್ನು ನಿರೂಪಿಸಿ, ವಂದಿಸಿದರು.

# ಕಾಲಕ್ಕೆ ತಕ್ಕಂತೆ ತಂತ್ರಜ್ಞಾನ ಅಳವಡಿಸಿಕೊಂಡಾಗ ಮಾತ್ರ ಪತ್ರಿಕೋದ್ಯಮ ಉಳಿಯುತ್ತದೆ: ಗಂಗಾಧರ್ ಮೊದಲಿಯಾರ್

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ



ಕಾಲದ ಬದಲಾವಣೆಗೆ ಅನುಗುಣವಾಗಿ ತಂತ್ರಜ್ಞಾನವನ್ನು ಅಳವಡಿಸಿಕೊಂಡಾಗ ಮಾತ್ರ ಪತ್ರಕರ್ತರು ಕ್ರಿಯಾಶೀಲರಾಗಿ ಉಳಿಯಲು ಸಾಧ್ಯ ಎಂದು ಹಿರಿಯ ಪತ್ರಕರ್ತ ಹಾಗೂ ವಿಶೇಷ ಉಪನ್ಯಾಸಕ ಗಂಗಾಧರ್ ಮೊದಲಿಯಾರ್ ಹೇಳಿದರು. ನಗರದ ಸರ್ಕಾರಿ ಪದವಿ ಮಹಾವಿದ್ಯಾಲಯದ ಆವರಣದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಧ್ವನಿ, ಯಾದಗಿರಿ ಜಿಲ್ಲಾ ಘಟಕ ಆಯೋಜಿಸಿದ್ದ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಹಾಗೂ ಪತ್ರಿಕಾ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ವಿಶೇಷ ಉಪನ್ಯಾಸ ನೀಡಿದರು.

ಸುಮಾರು 25 ವರ್ಷಗಳ ಹಿಂದಿನ ಪತ್ರಿಕೋದ್ಯಮ ಮತ್ತು ಇಂದಿನ ಪತ್ರಿಕೋದ್ಯಮದ ನಡುವೆ ಸಾಕಷ್ಟು ಬದಲಾವಣೆಗಳಾಗಿವೆ. ತಂತ್ರಜ್ಞಾನದ ಬೆಳವಣಿಗೆಯಿಂದ ಸುದ್ದಿ ಸಂಗ್ರಹ, ಸಂಪಾದನೆ ಹಾಗೂ ಪ್ರಸಾರದ ವಿಧಾನ ಸಂಪೂರ್ಣ ಬದಲಾಗಿದೆ. ಹಿಂದೆ ರಾಜಧಾನಿ ಕೇಂದ್ರಿತವಾಗಿದ್ದ ಅನೇಕ ಕಾರ್ಯಗಳು ಇಂದು ಜಿಲ್ಲಾಮಟ್ಟದಲ್ಲೇ ಸಾಧ್ಯವಾಗುತ್ತಿವೆ. ಪತ್ರಿಕೋದ್ಯಮವು ಈಗ ಸಮೂಹ ಮಾಧ್ಯಮವಾಗಿ ರೂಪಾಂತರಗೊಂಡಿದ್ದು, ಪತ್ರಕರ್ತರು ಹೊಸ ತಂತ್ರಜ್ಞಾನವನ್ನು ಅಳವಡಿಸಿಕೊಂಡು ತಮ್ಮ ಕೌಶಲ್ಯವನ್ನು ನಿರಂತರವಾಗಿ ವೃದ್ಧಿಸಿಕೊಳ್ಳಬೇಕು ಎಂದು ಹೇಳಿದರು. ದೇಶ ಕಟ್ಟುವ ಕಾರ್ಯದಲ್ಲಿ ಪತ್ರಿಕೋದ್ಯಮದ ಪಾತ್ರ ಮಹತ್ವದ್ದಾಗಿದೆ. ಸಮಾಜದಲ್ಲಿ ಉಂಟಾಗುವ ಸಮಸ್ಯೆಗಳ ಬಗ್ಗೆ ಪತ್ರಕರ್ತರ ಮೇಲೆ ಆಕ್ರೋಶ ವ್ಯಕ್ತಪಡಿಸುವ ಬದಲು ಆಡಳಿತವನ್ನು ಪ್ರಶ್ನಿಸುವ ಮನೋಭಾವ ಬೆಳೆಯಬೇಕು. "ಗೋದಿ ಮೀಡಿಯಾ", "ಮಾರಿಕೊಂಡ ಪತ್ರಕರ್ತರು" ಎಂಬ ಪದಗಳ ಬಳಕೆ ಹಾಗೂ ಊಹಾತ್ಮಕ ಪತ್ರಿಕೋದ್ಯಮದ ಪ್ರವೃತ್ತಿ ಆತಂಕಕಾರಿಯಾಗಿದೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮವನ್ನು ಯಾದಗಿರಿ ಶಾಸಕ ಚನ್ನಾರೆಡ್ಡಿ ಪಾಟೀಲ್ ತುನ್ನೂರು ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಧ್ವನಿ ಜಿಲ್ಲಾ ಅಧ್ಯಕ್ಷ ಇಂದೂದರ್ ಸಿನ್ನೂರ್ ವಹಿಸಿದ್ದರು. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಲವೀಶ್ ಒರಡಿಯಾ, ಸರ್ಕಾರಿ ಪದವಿ ಮಹಾವಿದ್ಯಾಲಯದ ಪ್ರಾಂಶುಪಾಲ ಸುಭಾಷ್ ಚಂದ್ರ ಕೌಲಗಿ, ನಗರಸಭೆ ಪೌರಾಯುಕ್ತ ಉಮೇಶ್ ಚವ್ವಾಣ್, ಅಂತಾರಾಷ್ಟ್ರೀಯ ಹಾಸ್ಯ ಕಲಾವಿದ ಬಸವರಾಜ ಮಹಾಮನೆ ಸೇರಿದಂತೆ ಹಲವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಕಾರ್ಯಕ್ರಮದ ಅಂಗವಾಗಿ "ಹೊಸ ಕನ್ನಡ ಸಾಹಿತ್ಯದಲ್ಲಿ ಅಕ್ಕಮಾದೇವಿ" ಕೃತಿಯನ್ನು ಲೋಕಾರ್ಪಣೆ ಮಾಡಲಾಯಿತು. ಡಾ. ಕಮಲಾ ಸಿನ್ನೂರ್ ಅವರ ಕೃತಿಯನ್ನೂ ಅನಾವರಣಗೊಳಿಸಲಾಯಿತು. ಪತ್ರಿಕಾ ವಿತರಕರು ಹಾಗೂ ಹಿರಿಯ ಪತ್ರಕರ್ತರನ್ನು ಸನ್ಮಾನಿಸಿ ಗೌರವಿಸಲಾಯಿತು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಲವೀಶ್ ಒರಡಿಯಾ ಮಾತನಾಡಿ, ಮಾಧ್ಯಮವು ಸರ್ಕಾರ ಮತ್ತು ಸಾರ್ವಜನಿಕರ ನಡುವಿನ ಸೇತುವೆಯಾಗಿ ಕಾರ್ಯನಿರ್ವಹಿಸಬೇಕು. ಸಮಸ್ಯೆಗಳನ್ನು ಬೆಳಕಿಗೆ ತರುವುದರ ಜೊತೆಗೆ ಪರಿಹಾರದ ಮಾರ್ಗವನ್ನೂ ಸೂಚಿಸಿದರೆ ಜಿಲ್ಲೆಯ ಅಭಿವೃದ್ಧಿಗೆ ಸಹಕಾರಿಯಾಗುತ್ತದೆ ಎಂದು ಹೇಳಿದರು.

ಚಂದ್ರಶೇಖರಗೌಡ ಮಾಗನೂರು ಮಾತನಾಡಿ, ಜಿಲ್ಲೆಯ ಪತ್ರಿಕಾರಂಗ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು, ಪತ್ರಕರ್ತರ ಸಂಘಟನೆ ಮತ್ತಷ್ಟು ಬಲಿಷ್ಠವಾಗಲಿ ಎಂದು ಆಶಿಸಿದರು. ಅಂತಾರಾಷ್ಟ್ರೀಯ ಹಾಸ್ಯ ಕಲಾವಿದ ಬಸವರಾಜ ಮಹಾಮನೆ ಮಾತನಾಡಿ, ಪತ್ರಕರ್ತರು ಸಮಾಜದ ಸಮಸ್ಯೆಗಳನ್ನು ಅಧಿಕಾರಿಗಳ ಗಮನಕ್ಕೆ ತಂದು ಅಭಿವೃದ್ಧಿ ಕಾರ್ಯಗಳಿಗೆ ಕೈಜೋಡಿಸಬೇಕು ಎಂದು ಕರೆ ನೀಡಿದರು.

ರಾಚನಗೌಡ ಮುದ್ದನಾಳ ಮಾತನಾಡಿ, ಸಾಮಾಜಿಕ ಜಾಲತಾಣಗಳು ಎಷ್ಟೇ ಪ್ರಭಾವಶಾಲಿಯಾಗಿದ್ದರೂ ಜನರು ವಿಶ್ವಾಸವಿಡುವುದು ಪರಿಶೀಲಿತ ಪತ್ರಿಕಾ ವರದಿಗಳ ಮೇಲೆಯೇ. ಪತ್ರಿಕೆಗಳ ವಿಶ್ವಾಸಾರ್ಹತೆ ಇಂದಿಗೂ ಅಚಲವಾಗಿದೆ ಎಂದು ಹೇಳಿದರು.

ಶಾಸಕ ಚನ್ನಾರೆಡ್ಡಿ ಪಾಟೀಲ್ ತುನ್ನೂರು ಮಾತನಾಡಿ, ಕ್ಷೇತ್ರದ ಅಭಿವೃದ್ಧಿಯಲ್ಲಿ ಅಧಿಕಾರಿಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಜನಪ್ರತಿನಿಧಿಗಳು ಅನುದಾನ ತರುವ ಕೆಲಸ ಮಾಡುತ್ತಾರೆ. ಆದರೆ ಅಧಿಕಾರಿಗಳು ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸಿ ಜನಪ್ರತಿನಿಧಿಗಳಿಗೆ ಅಗತ್ಯ ಮಾಹಿತಿಯನ್ನು ನೀಡಿದಾಗ ಮಾತ್ರ ಅಭಿವೃದ್ಧಿ ಕಾರ್ಯಗಳು ಪರಿಣಾಮಕಾರಿಯಾಗಿ ಜಾರಿಯಾಗುತ್ತವೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮಹೇಶ್ ರೆಡ್ಡಿ ಮುದ್ನಾಳ, ಗುಂಡಪ್ಪ ಕಲಬುರ್ಗಿ, ಮಲ್ಲಿಕಾರ್ಜುನ ಶಿರಗೋಳ, ದಿನೇಶ್ ದೋಖಾ ಸೇರಿದಂತೆ ದಿನೇಶ್ ವಿ ಸಿ ಕುದಾನ್ ಸಾಬ್ ನಾಗಪ್ಪ ಮಾಲಿಪಾಟೀಲ್ ರೂಪೇಶ್ ಹುಲಿಕರ್ , ರವಿ ಬುರನೋಳ, ಸಾಯಿ ರೆಡ್ಡಿ ಮಲ್ಕಪಲ್ಲಿ, ಮೊಗಲಪ್ಪ ನಾಯ್ಕಿನ್, ಫಹಾದ್, ಅಹಮದ್ ಸೇರಿದಂತೆ ಅನೇಕ ಗಣ್ಯರು, ಪತ್ರಕರ್ತರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

# ಧರ್ಮದ ಮಾರ್ಗವೇ ಮೋಕ್ಷದ ಹೆದ್ದಾರಿ




• ಮಲ್ಲಮ್ಮ ನುಡಿ ವಾರ್ತೆ ಹುಣಸಗಿ

ಧರ್ಮ, ಸತ್ಯ, ಕರುಣೆ ಹಾಗೂ ನಿಷ್ಠೆಯ ಮಾರ್ಗವನ್ನು ಅನುಸರಿಸಿದವರಿಗೆ ಅಂತಿಮವಾಗಿ ವಿಜಯ, ಶಾಂತಿ ಮತ್ತು ಮೋಕ್ಷ ದೊರೆಯುತ್ತದೆ ಎಂದು ಕೃಷಿಕ ಸುನೀಲ ಚಂದಾ ಹೇಳಿದರು.

ತಾಲೂಕಿನ ವಿಕ್ರಮಪುರ ಓದುಗರ ಬಳಗದ ವತಿಯಿಂದ ಶಾಖಾ ಗ್ರಂಥಾಲಯದಲ್ಲಿ ಆಯೋಜಿಸಿದ್ದ 'ಓದುಗರ ಭೇಟಿ-4' ಕಾರ್ಯಕ್ರಮದಲ್ಲಿ ಪಾಂಡವರ ಸ್ವರ್ಗಾರೋಹಣ ಪರ್ವ ಕುರಿತು ಉಪನ್ಯಾಸ ನೀಡಿದ ಅವರು, ಮಹಾಭಾರತದ ಮಹಾಪ್ರಸ್ಥಾನ ಪ್ರಸಂಗವನ್ನು ಉಲ್ಲೇಖಿಸಿ, ದ್ರೌಪದಿ, ಸಹದೇವ, ನಕುಲ, ಅರ್ಜುನ ಹಾಗೂ ಭೀಮ ತಮ್ಮ ತಮ್ಮ ದೋಷಗಳ ಕಾರಣದಿಂದ ಮಾರ್ಗ ಮಧ್ಯೆಯೇ ಬೀಳುತ್ತಾರೆ. ಆದರೆ ಧರ್ಮವನ್ನು ಎಂದಿಗೂ ಕೈಬಿಡದ ಯುಧಿಷ್ಠಿರ ಮಾತ್ರ ತನ್ನೊಂದಿಗೆ ಬಂದ ನಾಯಿಯನ್ನು ಸಹ ತೊರೆಯದೆ ಧರ್ಮನಿಷ್ಠೆಯಿಂದ ಸಾಗುತ್ತಾನೆ. ಕೊನೆಗೆ ಆ ನಾಯಿ ಧರ್ಮದೇವನೆಂಬುದು ತಿಳಿದು, ಯುಧಿಷ್ಠಿರನ ಧರ್ಮನಿಷ್ಠೆಗೆ ದೇವತೆಗಳು ಮೆಚ್ಚುಗೆ ವ್ಯಕ್ತಪಡಿಸುತ್ತಾರೆ ಎಂದು ವಿವರಿಸಿದರು.

ಪ್ರಾಂಶುಪಾಲ ಭೀಮಣ್ಣ ಹುಬ್ಬಳ್ಳಿ ಅವರು ಲಕ್ಷ್ಮೀಶನ ಜೈಮಿನಿ ಭಾರತ ಕುರಿತು ಮಾತನಾಡಿ, ಜೈಮಿನಿ ಸಂಹಿತೆಯನ್ನು ಆಧರಿಸಿದ ಈ ಮಹಾಕಾವ್ಯವು ಅಶ್ವಮೇಧ ಪರ್ವದ ಕಥೆಯನ್ನು ಸರಳ ಹಾಗೂ ಭಾವಪೂರ್ಣ ಕನ್ನಡದಲ್ಲಿ ನಿರೂಪಿಸಿದ್ದು, ಧರ್ಮ, ಭಕ್ತಿ ಮತ್ತು ಶ್ರೀಕೃಷ್ಣನ ಮಹಿಮೆಯನ್ನು ಮನೋಜ್ಞವಾಗಿ ಬಿಂಬಿಸುತ್ತದೆ ಎಂದು ತಿಳಿಸಿದರು.

ಬಲಶೆಟ್ಟಿಹಾಳದ ಶಿಕ್ಷಕ ದೇವರಾಜ ಕುಲಕರ್ಣಿ ಅವರು ಕಠೋಪನಿಷತ್ತಿನ ನಚಿಕೇತ-ಯಮಧರ್ಮ ಸಂವಾದ ಕುರಿತು ಉಪನ್ಯಾಸ ನೀಡಿ, ಆತ್ಮವು ನಾಶವಾಗುವುದಿಲ್ಲ. ಜ್ಞಾನ, ಸತ್ಯ ಮತ್ತು ಧರ್ಮದ ಮಾರ್ಗವನ್ನು ಅನುಸರಿಸಿದಾಗ ಮಾತ್ರ ಮೋಕ್ಷ ಸಾಧ್ಯ ಎಂಬ ಸಂದೇಶವನ್ನು ಯಮಧರ್ಮನು ನಚಿಕೇತನಿಗೆ ನೀಡುತ್ತಾನೆ ಎಂದು ವಿವರಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಮಹೇಶ ಸ್ಥಾವರಮಠ ಅವರು, ಮೊಬೈಲ್ ಯುಗದಲ್ಲಿ ಸಾಹಿತ್ಯ ಓದುವ ಅಭಿರುಚಿ ಕುಗ್ಗುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದ್ದು, ಓದುವ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಅಗತ್ಯವಿದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಸಾಂಪ್ರದಾಯಿಕ ಹಾರ-ಶಾಲು ಸನ್ಮಾನದ ಬದಲಾಗಿ ದಂಡಿನ ಬುಕ್ ಸ್ಟಾಲ್‌ನ ಮಾಲೀಕ ಮಲ್ಲಿಕಾರ್ಜುನ ದಂಡಿನ ಅವರು ಗಣ್ಯರಿಗೆ ಉಚಿತವಾಗಿ ಪುಸ್ತಕಗಳನ್ನು ನೀಡಿ ಗೌರವಿಸಿದರು. ಮುಂದೆಯೂ ವಿಕ್ರಮಪುರ ಓದುಗರ ಬಳಗಕ್ಕೆ ಉಚಿತ ಪುಸ್ತಕಗಳನ್ನು ನೀಡುವುದಾಗಿ ತಿಳಿಸಿದರು. ಶಾಖಾ ಗ್ರಂಥಾಲಯದ ಮೇಲ್ವಿಚಾರಕಿ ನೀಲಮ್ಮ ಎಂ. ಗಣಾಚಾರಿ ಸ್ವಾಗತಿಸಿದರು. ಸಂಗಮ್ಮ ಸಜ್ಜನ್ ಪ್ರಾರ್ಥಿಸಿದರು. ಸವಿತಾ ಬೆಳ್ಳಿ ನಿರೂಪಿಸಿದರು. ನಾಗರಾಜ ಬಿರಾದಾರ ವಂದಿಸಿದರು. ಕಾರ್ಯಕ್ರಮದಲ್ಲಿ ಅನೇಕ ಸಾಹಿತ್ಯಾಸಕ್ತರು ಹಾಗೂ ಓದುಗರು ಭಾಗವಹಿಸಿದ್ದರು.

# ದಲಿತರಿಗೆ ಭೂಮಿ ಹಂಚಿಕೆ, ರೈತರ ಬೆಳೆಸಾಲ ಮನ್ನಾ: ಸಮತಾ ಸೈನಿಕ ದಳ ಒತ್ತಾಯ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ



ದಲಿತ ಕುಟುಂಬಗಳಿಗೆ ಭೂ-ಒಡೆತನ ಯೋಜನೆಯಡಿ ತ್ವರಿತವಾಗಿ ಭೂಮಿ ಹಂಚಿಕೆ ಮಾಡಬೇಕು, ಯಾದಗಿರಿ ಜಿಲ್ಲೆಯನ್ನು ಬರಪೀಡಿತ ಜಿಲ್ಲೆ ಎಂದು ಘೋಷಿಸಿ ರೈತರ ಬೆಳೆಸಾಲ ಮನ್ನಾ ಮಾಡಿ ಸೂಕ್ತ ಪರಿಹಾರ ನೀಡಬೇಕು ಎಂದು ಆಗ್ರಹಿಸಿ ಸಮತಾ ಸೈನಿಕ ದಳ ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಜಿಲ್ಲಾಧಿಕಾರಿಗಳ ಮುಖಾಂತರ ರಾಜ್ಯದ ಮುಖ್ಯಮಂತ್ರಿಗೆ ಮನವಿ ಸಲ್ಲಿಸಲಾಯಿತು. ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಭೂ-ಒಡೆತನ ಯೋಜನೆಗೆ ಹೊಸ ಸಮಿತಿ ರಚಿಸಿ, ಹಲವು ವರ್ಷಗಳಿಂದ ಬಾಕಿ ಉಳಿದಿರುವ ಭೂ ಹಂಚಿಕೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕು. ಹತ್ತಿಗೂಡೂರು ಸೇರಿದಂತೆ ಜಿಲ್ಲೆಯ ವಿವಿಧ ಗ್ರಾಮಗಳ ಭೂರಹಿತ ದಲಿತ ಕುಟುಂಬಗಳಿಗೆ ಕೃಷಿ ಭೂಮಿ ಹಾಗೂ ವಸತಿ ಸೌಲಭ್ಯ ಕಲ್ಪಿಸಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ. ಇದೇ ವೇಳೆ, ಯಾದಗಿರಿ ಜಿಲ್ಲೆಯ ರೈತರ ಬೆಳೆಸಾಲವನ್ನು ಸಂಪೂರ್ಣ ಮನ್ನಾ ಮಾಡಿ, ಬರದಿಂದ ಸಂಕಷ್ಟದಲ್ಲಿರುವ ರೈತರಿಗೆ ಸೂಕ್ತ ಪರಿಹಾರ ಘೋಷಿಸಬೇಕು ಎಂದು ಆಗ್ರಹಿಸಲಾಯಿತು. ಸರ್ಕಾರ ಶೀಘ್ರವೇ ಕ್ರಮ ಕೈಗೊಳ್ಳದಿದ್ದರೆ ಸಮತಾ ಸೈನಿಕ ದಳದ ನೇತೃತ್ವದಲ್ಲಿ ಮಹಿಳಾ ಘಟಕದೊಂದಿಗೆ ಉಗ್ರ ಹೋರಾಟ ಹಾಗೂ ಉಪವಾಸ ಸತ್ಯಾಗ್ರಹ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಅಧ್ಯಕ್ಷ ಹತ್ತಿಗೂಡೂರು ಶರಣರೆಡ್ಡಿ, ಜಿಲ್ಲಾ ಗೌರವಾಧ್ಯಕ್ಷ ಶರಣಪ್ಪ ಕಡಿಮನಿ ಅನಕಸೂಗೂರು, ತಾಲೂಕು ಮುಖಂಡ ಭೀಮರಾಯ ದೋರನಹಳ್ಳಿ, ತಾಲೂಕು ಅಧ್ಯಕ್ಷ ಶರಣಪ್ಪ

ಚಲುವಾದಿ ಸೇರಿದಂತೆ ಸಂಘಟನೆಯ ಮುಖಂಡರು ಉಪಸ್ಥಿತರಿದ್ದರು.

# ನೂತನ ಜಿಲ್ಲಾ ಅಧ್ಯಕ್ಷರಿಗೆ ಜಿಲ್ಲೆಯ ಕಲಾವಿದರಿಂದ ಸನ್ಮಾನ



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಕರ್ನಾಟಕ ಕಾರ್ಯನಿರತ ಪತ್ರಕರ್ತ ಧ್ವನಿ ಸಂಘಟನೆಯ ನೂತನವಾಗಿ ಜಿಲ್ಲಾಧ್ಯಕ್ಷರಾದ ಇಂದೂಧರ್ ಸಿನ್ನೂರ್, ಉಪಾಧ್ಯಕ್ಷರಾದ ದಿನೇಶ್ ವಿ.ಸಿ, ಪ್ರಧಾನ ಕಾರ್ಯದರ್ಶಿ ಕುದನ್ ಸಾಬ್, ಖಜಾಂಚಿ ನಾಗಪ್ಪ ಮಾಲಿ ಪಾಟೀಲ್ ರವರಿಗೆ ಜಿಲ್ಲೆಯ ಪ್ರಸಿದ್ಧ ಕಲಾವಿದರಿಂದ ಗೌರವಿಸಿ ಸನ್ಮಾನಿಸಲಾಗಿದೆ. ಈ ಸಂದರ್ಭದಲ್ಲಿ ಶಂಕರ ಶಾಸ್ತ್ರಿ, ಮಹಾದೇವ ಸೀತಾರಿ, ಹಣಮಂತ ಸೀತಾರಿ, ಗುರುದತ್ತು ಸೀತಾರಿ, ಶ್ರೀನಿವಾಸ್ ಸೈದಾಪುರ್, ಮಾರೆಪ್ಪ, ರಾಕೇಶ್ ಶಾಸ್ತ್ರಿ ಗಂಗಮ್ಮ ಮುಂತಾದ ಕಲಾವಿದರು ಇದ್ದರು.

# ಸಂಚಾರ ಸುಗಮ ಹಾಗೂ ಮೂಲಸೌಕರ್ಯ ಅಭಿವೃದ್ಧಿಗೆ ಒತ್ತು ನೀಡಲು ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅಧಿಕಾರಿಗಳಿಗೆ ತಾಕೀತು

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ



ನಗರದಲ್ಲಿ ಹೆಚ್ಚುತ್ತಿರುವ ವಾಹನ ದಟ್ಟಣೆ ನಿಯಂತ್ರಣ, ಸಾರ್ವಜನಿಕ ಸಾರಿಗೆ ವ್ಯವಸ್ಥೆಯ ಸುಧಾರಣೆ ಹಾಗೂ ರಸ್ತೆಗಳ ಪರಿಶೀಲನೆ, ಸಿಗ್ನಲ್ ಹಾಗೂ ವೇಗ ಮಿತಿ ಮರುಪರಿಶೀಲನೆ, ಮೂಲಸೌಕರ್ಯಗಳ ಅಭಿವೃದ್ಧಿಗೆ ಒತ್ತು ನೀಡಬೇಕು ಎಂದು ಜಿಲ್ಲಾ ಮಟ್ಟದ ರಸ್ತೆ ಸುರಕ್ಷತಾ ಸಮಿತಿಯ ಅಧ್ಯಕ್ಷರೂ ಆಗಿರುವ ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ಅಧಿಕಾರಿಗಳಿಗೆ ತಾಕೀತು ಮಾಡಿದರು. ನಗರದ ನೂತನ ಜಿಲ್ಲಾಡಳಿತ ಭವನದ ವಿಡೀಯೋ ಸಭಾಂಗಣದಲ್ಲಿ ಸೋಮವಾರ ಆಯೋಜಿಸಿದ್ದ ಜಿಲ್ಲಾ ಮಟ್ಟದ ರಸ್ತೆ ಸುರಕ್ಷತಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ನಗರದ ಮುಖ್ಯ ರಸ್ತೆಗಳಲ್ಲಿ ಭಾರಿ ಸರಕು ಮತ್ತು ಸಾರಿಗೆ ವಾಹನಗಳ ದಟ್ಟಣೆಯನ್ನು ಕಡಿಮೆ ಮಾಡಲು ಚೆಕ್‌ಪೋಸ್ಟ್ ಗಳು ಹಾಗೂ ಬೈಪಾಸ್ ರಸ್ತೆಗಳ ಮೂಲಕ ಮಾರ್ಗ ಬದಲಾವಣೆ ಮಾಡಬೇಕು. ಹೊಸಪೇಟೆ ಬೈಪಾಸ್ ರಸ್ತೆಯ ಸುತ್ತಮುತ್ತಲಿನ ಸೈಡ್ ರೋಡ್‌ಗಳಲ್ಲಿ ಭಾರಿ ವಾಹನಗಳನ್ನು ಡೈವರ್ಟ್ ಮಾಡಿ ನಗರದೊಳಗಿನ ಟ್ರಾಫಿಕ್ ಒತ್ತಡವನ್ನು ಕಡಿಮೆ ಮಾಡಲು ಕ್ರೀಯಾಯೋಜನೆ ಸಿದ್ಧಪಡಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶಿಸಿದರು. ನಗರದ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಬಲಪಡಿಸಲು ಹಾಗೂ ರಸ್ತೆ ಪಕ್ಕದಲ್ಲಿ ಬಸ್‌ಗಳನ್ನು ಎಲ್ಲೆಂದರಲ್ಲಿ ನಿಲ್ಲಿಸುವುದನ್ನು ತಡೆಯಲು 13 ಪ್ರಮುಖ ಸ್ಥಳಗಳಲ್ಲಿ ನೂತನ ಬಸ್ ಬೇ ನಿರ್ಮಿಸಲು ಗುರುತಿಸಲಾಗಿದೆ. ಪಾಲಿಕೆಯಿಂದ ಬಸ್ ಬೇ ಗಳನ್ನು ನೇರವಾಗಿ ನಿರ್ಮಿಸಲು ಎದುರಾಗುವ ತಾಂತ್ರಿಕ/ಆಡಳಿತಾತ್ಮಕ ಸವಾಲುಗಳಿದ್ದು, ಈ ಕುರಿತು ಲೋಕೋಪಯೋಗಿ ಇಲಾಖೆ ಹಾಗೂ ಪಾಲಿಕೆ ಇಂಜಿನಿಯರ್‌ಗಳು ಜಂಟಿಯಾಗಿ ಪರಿಶೀಲಿಸಿ, ಬಸ್ ಬೇ ನಿರ್ಮಾಣಕ್ಕೆ ಅಗತ್ಯವಿರುವ ಜಾಗದ ಲಭ್ಯತೆ ಕುರಿತು ವರದಿ ನೀಡಿದ ತಕ್ಷಣವೇ ಮುಂದಿನ ಯೋಜನಾ ಕೆಲಸಗಳನ್ನು ಕೈಗೆತ್ತಿಕೊಳ್ಳಬೇಕು ಎಂದು ಸಮ್ಮತಿಸಿದರು. ನಗರದಾದ್ಯಂತ ಸಂಚಾರ ಸುರಕ್ಷತೆಯನ್ನು ಕಾಯ್ದುಕೊಳ್ಳಲು ವೇಗ ಮಿತಿ ಹಾಗೂ ಸ್ಕೂಲ್ ಝೋನ್ ಸೂಚನಾ ಫಲಕಗಳನ್ನು ಅಳವಡಿಸಬೇಕು. ಶಾಲೆಗಳು ಹಾಗೂ ಆಸ್ಪತ್ರೆಗಳಿರುವ ಸೂಕ್ಷ್ಮ ?? ಪ್ರದೇಶಗಳಲ್ಲಿ ಗರಿಷ್ಠ ವೇಗವನ್ನು 40 ಕಿ.ಮೀ/ಗಂಟೆಗೆ ನಿಗದಿಪಡಿಸಿ ಬೋರ್ಡ್ ಗಳನ್ನು ಹಾಕಬೇಕು. ಸಂಚಾರ ವಿಭಾಗ ಹಾಗೂ ಸಿವಿಲ್ ಇಲಾಖೆಯ ಜಂಟಿ ಪರಿಶೀಲನೆ ನಂತರ ವೇಗ ಮಿತಿಯ ಅಧಿಸೂಚನೆಯನ್ನು ಹೊರಡಿಸಲಾಗುತ್ತದೆ. ವರದಿ ಬಂದ ನಂತರ ಒಂದು ವಾರದೊಳಗೆ ಅಗತ್ಯ ಸ್ಥಳಗಳಲ್ಲಿ 'ವೇಗ ಮಿತಿ ಬೋರ್ಡ್'ಗಳನ್ನು ಕಡ್ಡಾಯವಾಗಿ ಸ್ಥಾಪಿಸಬೇಕು ಎಂದು ತಿಳಿಸಿದರು.

*ಫುಟ್‌ಪಾತ್ ಅತಿಕ್ರಮಣ ತೆರವು ಕಾರ್ಯಾಚರಣೆ ನಡೆಸಿ:*

ಸಾರ್ವಜನಿಕರ ಸುರಕ್ಷಿತ ಪಾದಚಾರಿ ಸಂಚಾರಕ್ಕೆ ಅಡ್ಡಿಯಾಗಿರುವ ಫುಟ್‌ಪಾತ್ ಅತಿಕ್ರಮಣಗಳನ್ನು ತೆರವುಗೊಳಿಸಲು ಮಹಾನಗರ ಪಾಲಿಕೆ ಅಭಿವೃದ್ಧಿ ಅಧಿಕಾರಿಗಳು, ಎಂಜಿನಿಯರ್‌ಗಳು ಹಾಗೂ ಸ್ಥಳೀಯ ಪೊಲೀಸರನ್ನು ಒಳಗೊಂಡ ವಿಶೇಷ ತಂಡವನ್ನು ರಚಿಸಿ ಕಟ್ಟುನಿಟ್ಟಿನ ಅತಿಕ್ರಮಣ ತೆರವು ಕಾರ್ಯಾಚರಣೆ ನಡೆಸಬೇಕು ಎಂದು ಸೂಚಿಸಿದರು. *ರೈಲ್ವೆ ಸರಕು ಸಾಗಣೆ ಸಮಯದ ಸಮನ್ವಯ:*

ರೈಲ್ವೇ ಗೂಡ್ಸ್ ಗಾಡಿಗಳ ಮುಖಾಂತರ ಬರುವ ಸಿಮೆಂಟ್ ಹಾಗೂ ರಸಗೊಬ್ಬರ ಲೋಡಿಂಗ್/ಅನ್‌ಲೋಡಿಂಗ್ ಸರಕು ರೈಲುಗಳಿಂದ ನಗರದಲ್ಲಿ ಸಂಚಾರಕ್ಕೆ ಅಡಚಣೆಯಾಗುತ್ತಿದೆ ಎಂದು ಸಂಚಾರ ಪೊಲೀಸ್ ಅಧಿಕಾರಿಗಳು ಸಭೆಯಲ್ಲಿ ಪ್ರಸ್ತಾಪಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿಯವರು, ರೈಲ್ವೇ ಇಲಾಖೆಯಿಂದ ಸರಕು ರೈಲುಗಳು ಆಗಮಿಸುವ ಮತ್ತು ನಿರ್ಮಿಸುವ ನಿಖರ ಸಮಯದ ಮಾಹಿತಿ ಪಡೆದುಕೊಳ್ಳಬೇಕು. ನಗರದಲ್ಲಿ ಸಂಚಾರ ದಟ್ಟಣೆ ತಡೆಯಲು, ಪೀಕ್ ಅವರ್ ಹೊರತುಪಡಿಸಿ ಸಾಗಣೆ ಮಾಡಲು ಸಾಧ್ಯವೇ ಎಂಬುದರ ಕುರಿತು ರೈಲ್ವೇ ಸ್ಟೇಷನ್ ಮಾಸ್ಟರ್ ಹಾಗೂ ಸಂಬಂಧಿಸಿದ ಅಧಿಕಾರಿಗಳೊಂದಿಗೆ ತಕ್ಷಣವೇ ಸಮನ್ವಯ ಸಭೆ ನಡೆಸಬೇಕು ಎಂದು ತಿಳಿಸಿದರು. *ಲಾರಿ ಟರ್ಮಿನಲ್ ನೈರ್ಮಲ್ಯ ಹಾಗೂ ಲೈಟಿಂಗ್ ನಿರ್ವಹಣೆ:*

ನಗರದ ಟ್ರಕ್ ಟರ್ಮಿನಲ್‌ನಲ್ಲಿ ಮೂಲಸೌಕರ್ಯ ಹಾಗೂ ನೈರ್ಮಲ್ಯ ಕೊರತೆ ಕಂಡುಬಂದಿದೆ. ಟರ್ಮಿನಲ್ ಆವರಣದಲ್ಲಿ ಲೈಟಿಂಗ್ ವ್ಯವಸ್ಥೆಯನ್ನು ಸರಿಪಡಿಸುವುದು ಮತ್ತು ನಿಯಮಿತ ನೈರ್ಮಲ್ಯ ಕಾಪಾಡುವುದು ಅತ್ಯಗತ್ಯ ಎಂದು ಜಿಲ್ಲಾಧಿಕಾರಿಯವರು ಹೇಳಿದರು. ಇದೇ ವೇಳೆ ಮಹಾನಗರ ಪಾಲಿಕೆ ಆಯುಕ್ತ ಪಿ.ಎಸ್.ಮಂಜುನಾಥ್ ಅವರು, ಟರ್ಮಿನಲ್ ನಿರ್ವಹಣೆಯಿಂದ ವಸೂಲಾಗುವ ತೆರಿಗೆ ಮತ್ತು ನಿಧಿಯ ಕುರಿತು ಪರಿಶೀಲಿಸಿ, ಕೆಕೆಆರ್‌ಟಿಸಿ ಹಾಗೂ ಸ್ಥಳೀಯ ಸಾರಿಗೆ ಸಂಸ್ಥೆಗಳೊಂದಿಗೆ ಸಮಾಲೋಚನೆ ನಡೆಸಿ, ನಿಗದಿತ ಸುಂಕದ ಆಧಾರದಲ್ಲಿ ಟರ್ಮಿನಲ್ ಮೂಲಸೌಕರ್ಯಗಳನ್ನು ಮೇಲ್ದರ್ಜೆಗೇರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಸಭೆಗೆ ತಿಳಿಸಿದರು.

ಸಂಚಾರ ಪೊಲೀಸ್ ಠಾಣೆಯ ಇನ್ಸ್ ಪೆಕ್ಟರ್ ರುದ್ರಪ್ಪ ಅವರು ಮಾತನಾಡಿ, ಆಗಸ್ಟ್ 15 ರಿಂದ ನಗರದಲ್ಲಿ ಸಂಚರಿಸುವ ಆಟೋಗಳ ದಾಖಲೆಗಳು, ಪರವಾನಗಿ ಮತ್ತು ನಿಯಮ ಉಲ್ಲಂಘನೆಗಳನ್ನು ತಪಾಸಣೆ ಮಾಡಲು 'ವಿಶೇಷ ಡ್ರೈವ್' ನಡೆಸಲಾಗುವುದು. ನಿಯಮ ಮೀರಿದ ಮತ್ತು ಬಿಳಿ ಬೋರ್ಡ್ ಬಳಸಿ ಅನಧಿಕೃತವಾಗಿ ಸಂಚರಿಸುವ ವಾಹನಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮ ಜರುಗಿಸಲಾಗುವುದು ಎಂದು ಸಭೆಗೆ ತಿಳಿಸಿದರು.

# ಕಸಾಪ ಮಹಿಳಾ ಸಮ್ಮೇಳನ ಪೂರ್ವಭಾವಿ ಸಭೆ ಇಂದು

• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ



ಪಟ್ಟಣದ ಕುಂಬಾರ ಗುಂಡಯ್ಯಾ ಕಲ್ಯಾಣ ಮಂಟಪದಲ್ಲಿ ಆ.4 ರಂದು ಮಂಗಳವಾರ ಸಾಯಂಕಾಲ 4.30 ಗಂಟೆಗೆ ಜಿಲ್ಲಾ ಮಟ್ಟದ ಮಹಿಳಾ ಸಮ್ಮೇಳನ ನಿಮಿತ್ಯ ಕಸಾಪ ಜಿಲ್ಲಾಧ್ಯಕ್ಷ ಸುರೇಶ ಚನಶೆಟ್ಟಿ ನೇತೃತ್ವದಲ್ಲಿ ಪೂರ್ವಭಾವಿ ಸಭೆ ನಡೆಯಲಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ ತಾಲೂಕು ಅಧ್ಯಕ್ಷ ನಾಗಭೂಷಣ ಮಾಮಡಿ ತಿಳಿಸಿದ್ದಾರೆ.

ಈ ಕುರಿತು ಪ್ರಕಟಣೆ ಹೊರಡಿಸಿದ ಅವರು, ಭಾಲ್ಕಿಯಲ್ಲಿ ಇದೇ ಆಗಷ್ಟ 11 ರಂದು ನಡೆಯಲಿರುವ ಜಿಲ್ಲಾ ಮಟ್ಟದ ಮಹಿಳಾ ಸಾಹಿತ್ಯ ಸಮ್ಮೇಳನದ ನಿಮಿತ್ಯ ಆ.4 ರಂದು ಮಂಗಳವಾರ ಸಾಯಂಕಾಲ 4.30 ಗಂಟೆಗೆ ಕಸಾಪ ಜಿಲ್ಲಾಧ್ಯಕ್ಷರ ನೇತೃತ್ವದಲ್ಲಿ ಪೂರ್ವಭಾವಿ ಸಭೆ ನಡೆಸಲು ನಿರ್ಧರಿಸಲಾಗಿದೆ. ಕಾರಣ ಕನ್ನಡ ಸಾಹಿತ್ಯ ಪರಿಷತ್‌ನ ಎಲ್ಲಾ ಪದಾಧಿಕಾರಿಗಳು, ವಿವಿಧ ಸಂಘಟನೆಯ ಪದಾಧಿಕಾರಿಗಳು, ಜನಪ್ರತಿನಿಧಿಗಳು, ಕನ್ನಡಾಭಿಮಾನಿಗಳು, ಮಹಿಳಾ ಸಂಘಟನೆಗಳ ಪ್ರಮುಖರು ಸಭೆಯಲ್ಲಿ ಪಾಲ್ಗೊಂಡು ಸಲಹೆ ಸೂಚನೆ ಬೇಡಬೇಕು ಎಂದು ಮನವಿ ಮಾಡಿಕೊಂಡಿದ್ದಾರೆ.

# ಸುಮಾರು 4 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಪ್ರಭು ಚವ್ಹಾಣ ಶಂಕುಸ್ಥಾಪನೆ

• ಮಲ್ಲಮ್ಮ ನುಡಿ ವಾರ್ತೆ ಔರಾದ



ಔರಾದ ಶಾಸಕರಾದ ಪ್ರಭು ಬಿ. ಚವ್ಹಾಣ ಅವರು ಸೋಮವಾರ ಔರಾದ(ಬಿ) ತಾಲೂಕಿನ ವಿವಿಧ ಗ್ರಾಮಗಳಲ್ಲಿ ಸಂಚರಿಸಿ ಸುಮಾರು 4 ಕೋಟಿ ಮೊತ್ತದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಿದರು.ಔರಾದ(ಬಿ), ಲಾಲಸಿಂಗ್ ತಾಂಡಾ (ಹಲ್ಯಾಳ), ಗೋಪಿನಾಯಕ್ ತಾಂಡಾ (ಮೆಡಪಳ್ಳಿ), ಪೋಮಾತಾಂಡಾ (ಜಂಬಗಿ), ಏಕನಾಥ ತಾಂಡಾ, ರಾಂಪೂರ ತಾಂಡಾ, ಗುರುನಾಥ ತಾಂಡಾ, ಕಂದಗೂಳ, ಬೇಲೂರು (ಎನ್) ಹಾಗೂಧರಿ ಹನುಮಾನ ಮಂದಿರ ಸೇರಿದಂತೆ ವಿವಿಧೆಡೆ ರಸ್ತೆ, ಸಿಸಿ ರಸ್ತೆ, ಸಮುದಾಯ ಭವನ, ಕುಡಿಯುವ ನೀರು ಸೇರಿದಂತೆ ವಿವಿಧ ಕಾಮಗಾರಿಗಳಿಗೆ ಭೂಮಿಪೂಜೆ ನೆರವೇರಿಸಿದರು.ಎಕಂಬಾದಲ್ಲಿನ ಬಾಲಕಿಯರ ಪ್ರೌಢ ಶಾಲೆಯಲ್ಲಿ 29 ಲಕ್ಷದ ಹೆಚ್ಚುವರಿ ತರಗತಿ ಕೋಣೆಗಳು, ಪ್ರೌಢ ಶಾಲೆಯಲ್ಲಿ 8 ಲಕ್ಷದ ಡಿಜಿಟಲ್ ಕ್ಲಾಸ್ ರೂಮ್, ಲಾಲಸಿಂಗ್ ತಾಂಡಾದಲ್ಲಿ 30 ಲಕ್ಷದ ತೆರೆದ ಬಾವಿ,ಔರಾದ(ಬಿ) ಕೇದಾರೇಶ್ವರ ಮಂದಿರದ ಬಳಿ 25 ಲಕ್ಷದ ಸಮುದಾಯ ಭವನ, ಗೋಪಿನಾಯಕ್ ತಾಂಡಾದಲ್ಲಿ 4.5 ಲಕ್ಷದ ಸಮುದಾಯ ಭವನ, ಪೋಮಾ ತಾಂಡಾದಲ್ಲಿ 20 ಲಕ್ಷ, ಏಕನಾಥ ತಾಂಡಾದಲ್ಲಿ 30 ಲಕ್ಷ, ರಾಂಪೂರ ತಾಂಡಾದಲದಲಿ 20 ಲಕ್ಷದ ಕುಡಿಯುವ ನೀರಿನ ಕಾಮಗಾರಿಗಳು, ಗುರುನಾಥ ತಾಂಡಾದಲ್ಲಿ 65 ಲಕ್ಷ ಮೊತ್ತದ ಕೇಶವ ತಾಂಡಾದಿಂದ ಗುರುನಾಥ ತಾಂಡಾವರೆಗೆ ರಸ್ತೆ, ಕಂದಗೂಳನಲ್ಲಿ 192.50 ಲಕ್ಷದ ರಸ್ತೆ, ಬೇಲೂರ ಎನ್ ಗ್ರಾಮದಲ್ಲಿ 6.50 ಲಕ್ಷದ ಸಿಸಿ ರಸ್ತೆ, ಲಾಧಾ ಗ್ರಾಮ ವ್ಯಾಪ್ತಿಯ ಧರಿ ಹನುಮಾನ ಮಂದಿರದ ಬಳಿ 15 ಲಕ್ಷದ ಸಮುದಾಯ ಭವನ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿದರು.ಈ ಸಂದರ್ಭದಲ್ಲಿ ಮಾತನಾಡಿದ ಶಾಸಕರು, ಔರಾದ(ಬಿ) ಕ್ಷೇತ್ರದ ಪ್ರತಿಯೊಂದು ಗ್ರಾಮಕ್ಕೂ ಅಗತ್ಯ ಮೂಲಸೌಕರ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ನಿರಂತರ ಶ್ರಮಿಸುತ್ತಿದ್ದೇನೆ. ಈ ದಿಶೆಯಲ್ಲಿ ಜನತೆಗೆ ಅತ್ಯಂತ ಅವಶ್ಯಕವಿರುವ ಕಾಮಗಾರಿಗಳನ್ನು ಕೈಗೊಂಡಿದ್ದು, ಎಲ್ಲ ಕಾಮಗಾರಿಗಳನ್ನು ನಿಗದಿತ ಅವಧಿಯೊಳಗೆ ಮತ್ತು ಗುಣಮಟ್ಟದಿಂದ ಮಾಡಿಕೊಡಬೇಕೆಂದು ಅಧಿಕಾರಿಗಳು ಮತ್ತು ಗುತ್ತಿಗೆದಾರರಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ಮುಖಂಡರಾದ ಧೊಂಡಿಬಾ ನರೋಟೆ, ಶಿವಾಜಿರಾವ ಪಾಟೀಲ ಮುಂಗನಾಳ, ಶಿವರಾಜ ಅಲ್ಮಾಜೆ, ರಾಮಶೆಟ್ಟಿ ಪನ್ನಾಳೆ, ಮಲ್ಲಪ್ಪ ನೇಳಗೆ, ಪ್ರಕಾಶ ಮೇತ್ರೆ, ಮಾಧವ ಮಿಠಾರೆ, ಖಂಡೋಬಾ ಕಂಗಟೆ, ರವೀಂದ್ರ ರೆಡ್ಡಿ, ಬಾಲಾಜಿ ಠಾಕೂರ್, ದೀಪಕ ಸಜ್ಜನಶೆಟ್ಟಿ, ದಯಾನಂದ ಘೂಳೆ, ಕೇರಬಾ ಪವಾರ, ಅಬ್ದುಲ್ ಪಠಾನ್, ಸಂತೋಷ ಪೋಕಲವಾರ, ಬಸವರಾಜ ಹಳ್ಳೆ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಮುಖಂಡರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

# ದಾನಗಳಲ್ಲಿ ರಕ್ತದಾನ ಶ್ರೇಷ್ಠವಾದದ್ದು




• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ಎಲ್ಲ ದಾನಗಳಿಗಿಂತ ರಕ್ತದಾನ ಅತ್ಯಂತ ಶ್ರೇಷ್ಠವಾದದ್ದು, ರಕ್ತದಾನ ಮತ್ತೊಬ್ಬರ ಜೀವ ಉಳಿಸಲು ಸಹಕಾರಿ ಆಗುತ್ತದೆ ಎಂದು ರಾಜಯೋಗ ಕೇಂದ್ರದ ಸಂಯೋಜಕಿ ಬ್ರಹ್ಮಕುಮಾರಿ ರಾಧಿಕಾ ಬಹನಜೀ ಹೇಳಿದರು.ನಗರದ ತಳವಾಡೆ ಆಸ್ಪತ್ರೆಯಲ್ಲಿ ತಾಲೂಕು ರೋಟರಿ ಕ್ಲಬ್ ಭಾಲ್ಕಿ ಫೋರ್ಟ್–3160 ವತಿಯಿಂದ ಭಾನುವಾರ ಆಯೋಜಿಸಿದ್ದ ರಕ್ತದಾನ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

ಅಪಘಾತಗಳು, ಪ್ರಮುಖ ಶಸ್ತ್ರಚಿಕಿತ್ಸೆಗಳು ಮತ್ತು ತೀವ್ರ ರಕ್ತಹೀನತೆಯಿಂದ ಬಳಲುತ್ತಿರುವವರ ಪ್ರಾಣ ಉಳಿಸಲು ದಾನ ಮಾಡಿದ ರಕ್ತವು ತಕ್ಷಣದ ಜೀವನಾಡಿಯಾಗುತ್ತದೆ.

ನಿಯಮಿತವಾಗಿ ರಕ್ತದಾನ ಮಾಡುವುದರಿಂದ ಆರೋಗ್ಯವು ಉತ್ತಮಗೊಳ್ಳುತ್ತದೆ ಎಂದರು. ಇಂದಿನ ದಿನಮಾನಗಳಲ್ಲಿ ಎಲ್ಲವೂ ಸೃಷ್ಟಿ ಮಾಡಬಹುದು ಅಷ್ಟರ ಮಟ್ಟಿಗೆ ಪ್ರಗತಿ ಸಾಧಿಸಿದ್ದೇವೆ.

ಆದರೂ ಕೃತಕವಾಗಿ ರಕ್ತ ತಯಾರಿಸಲು ಇದು ವರೆಗೂ ಸಾಧ್ಯವಾಗಿಲ್ಲ. ಹಾಗಾಗಿ ರಕ್ತದಾನಕ್ಕೆ ತನ್ನದೆ ಆದ ಮಹತ್ವ ಇದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ತಾಲೂಕು ರೋಟರಿ ಕ್ಲಬ್ ಅಧ್ಯಕ್ಷೆ ಡಾ.ಶೈಲಜಾ ತಳವಾಡೆ ಮಾತನಾಡಿ, ರಕ್ತದಾನ ಶಿಬಿರಕ್ಕೆ ವೈದ್ಯರು, ವಿವಿಧ ಸಂಘ ಸಂಸ್ಥೆಗಳ ಮುಖಂಡರು ಸ್ವಯಂಪ್ರೇರಿತರಾಗಿ ಆಗಮಿಸಿ ರಕ್ತದಾನ ಮಾಡಿರುವುದು ಅತ್ಯಂತ ಖುಷಿ ಕೊಟ್ಟಿದೆ. ಇದು ಮುಂದಿನ ನಮ್ಮ ಸಾಮಾಜಿಕ ಕಾರ್ಯಕ್ಕೆ ಮತ್ತಷ್ಟು ಶಕ್ತಿ ತಂದು ಕೊಡಲಿದೆ ಎಂದು ತಿಳಿಸಿದರು.ಡಾ.ಅನಿಲಕುಮಾರ ತಳವಾಡೆ ಮಾತನಾಡಿ, ಚಿತ್ರದುರ್ಗದಲ್ಲಿಂದು ಡೆಂಗ್ಯು ಜ್ವರದಿಂದ ಬಳಲುತ್ತಿದ್ದ ಒಬ್ಬ ವ್ಯಕ್ತಿಗೆ ಬೀದರ್ ಬ್ಲಡ್ ಬ್ಯಾಂಕ್ ಮೂಲಕ ರಕ್ತ ಕಳುಹಿಸಿ ಪ್ರಾಣ ಉಳಿಸಿ ಕೊಳ್ಳುವ ಪ್ರಯತ್ನ ಮಾಡಿದ್ದೆವೆ. ಹಾಗಾಗಿ ರಕ್ತದಾನಕ್ಕೆ ಎಂದಿಗೂ ಬೆಲೆ ಕಟ್ಟಲು ಸಾಧ್ಯವಾಗುವುದಿಲ್ಲ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಸಾರ್ವಜನಿಕ ಆಸ್ಪತ್ರೆಯ ಮುಖ್ಯವೈದ್ಯಾಧಿಕಾರಿ ಡಾ.ಶಶಿಕಾಂತ ಭೂರೆ, ಐಶ್ವರ್ಯ ಉದ್ಧವ ಕನಸೆ, ನಮ್ರತಾ ಗುಂಡೇರಾವ ಶೆಡೋಳೆ, ಗ್ರಾಮೀಣ ಪೊಲೀಸ್ ಠಾಣೆಯ ಪಿಎಸ್ಐ ಅಶೋಕ ಪಾಟೀಲ್, ಡಾ.ನಿತಿನ್ ಪಾಟೀಲ್, ಡಾ.ಅಮಿತ ಅಷ್ಟೂರೆ, ಡಾ.ವಿಕ್ರಮ ದೇವಪ್ಪ, ಡಾ.ಶ್ರೀರಂಗ ಬಿರಾದಾರ, ನ್ಯಾಯವಾದಿ ಉಮಾಕಾಂತ ವಾರದ, ಅಶ್ವಿನ ಭೋಸ್ಲೆ, ಅವಿನಾಶ ಮಾಲ್ಗೆ, ಸಾಗರ ನಾಯಕ, ಡಾ.ಯುವರಾಜ ಜಾಧವ, ಡಾ.ವಸಂತ ಪವಾರ, ಡಾ.ವಿಲಾಸ ಕನಸೆ, ಸಂಜಯಕುಮಾರ ಪಂಡರಗೆರೆ, ನ್ಯಾಯವಾದಿ ಸಂಜಯ ನಾಯಕ, ಬಸವ ಪಾಟೀಲ್, ಪ್ರಭು ಕೋಟೆ, ಜಯಕಿಶನ ಬಿಯಾನಿ, ಡಾ.ವಿಜಯಕುಮಾರ, ಡಾ.ಶೃತಿ ಬುಳ್ಳಾ ಸೇರಿದಂತೆ ರೋಟರಿ ಪದಾಧಿಕಾರಿಗಳು, ತಳವಾಡೆ ಆಸ್ಪತ್ರೆಯ ಸಿಬ್ಬಂದಿಗಳು ಹಾಜರಿದ್ದರು.ಶೋಭಾ ಪ್ರಾರ್ಥನೆ ಗೀತೆ ನಡೆಸಿ ಕೊಟ್ಟರು. ರೋಟರಿ ಕ್ಲಬ್ ಕಾರ್ಯದರ್ಶಿ ಅಶೋಕ ರಾಜೋಳೆ ನಿರೂಪಿಸಿ, ವಂದಿಸಿದರು.

**175 ಜನರು ರಕ್ತದಾನ**

ರಕ್ತದಾನ ಶಿಬಿರದಲ್ಲಿ ಸುಮಾರು 175 ಜನರು ಸ್ವಯಂಪ್ರೇರಿತರಾಗಿ ರಕ್ತದಾನ ಮಾಡಿದರು. ಬೀದರ್ ಬ್ಲಡ್ ಬ್ಯಾಂಕ್‌ನ ಸಿಬ್ಬಂದಿಗಳಾದ ಶಿವನಾಥ ಸ್ವಾಮಿ, ಧರ್ಮಣ್ಣ, ಮೀನಾಕ್ಷಿ, ಸವಿತಾ, ರಾಜೇಂದ್ರ, ದೀಪಕ, ಜೈಹಿಂದ್ ಸೇರಿ ಮುಂತಾದವರು ಮೊದಲಿಗೆ ಜನರ ರಕ್ತ ಮಾದರಿ ಪರೀಕ್ಷಿಸಿ, ಆರೋಗ್ಯಯುತ ಜನರಿಗೆ ರಕ್ತದಾನಕ್ಕೆ ಅನುವು ಮಾಡಿಕೊಟ್ಟರು. ರಕ್ತದಾನ ಮಾಡಿದ ಜನರಿಗೆ ಸ್ಥಳದಲ್ಲೇ ಪ್ರಶಂಸಾ ಪತ್ರ ನೀಡಿದರು. ತಾಲೂಕು ವಕೀಲರ ಸಂಘದ ಅಧ್ಯಕ್ಷ ಮಹೇಶ ರಾಚೋಟೆ, ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಸಂತೋಷ ಬಿಜಿ ಪಾಟೀಲ್, ಕನ್ನಡಪರ ಸಂಘಟನೆಯ ಹಿರಿಯ ಮುಖಂಡ ಸಂಗಮೇಶ ಗುಮ್ಮೆ ಸೇರಿದಂತೆ ಹಲವರು ರಕ್ತದಾನ ಮಾಡಿದರು.

## ದಂಪತಿಗಳಿಂದ ರಕ್ತದಾನ

ರಕ್ತದಾನ ಶಿಬಿರದಲ್ಲಿ ವಿವಿಧ ಸಂಸ್ಥೆಗಳ ಮುಖಂಡರು, ವೈದ್ಯರು ರಕ್ತದಾನ ಮಾಡಿದರು. ವಿಶೇಷವಾಗಿ ಸಾರ್ವಜನಿಕ ಆಸ್ಪತ್ರೆಯ ಮುಖ್ಯವೈದ್ಯಾಧಿಕಾರಿ ಡಾ.ಶಶಿಕಾಂತ ಭೂರೆ, ರೀನಾ ಶಶಿಕಾಂತ, ಡಾ.ಶೈಲಜಾ ಡಾ.ಅನಿಲಕುಮಾರ ತಳವಾಡೆ, ಡಾ.ಗುಂಡೇರಾವ ಶೆಡೋಳೆ, ನಮ್ರತಾ ಗುಂಡೇರಾವ, ಹಿರಿಯ ನ್ಯಾಯವಾದಿ ಉಮಾಕಾಂತ ವಾರದ, ಗೌರಿ ಉಮಾಕಾಂತ, ಡಾ.ಶಿಕ್ಷಾ ದಯಾನಂದ ಸೂರ್ಯವಂಶಿ ಸೇರಿದಂತೆ ಮುಂತಾದವರು ರಕ್ತದಾನ ಮಾಡಿದರು.

# ಕೃಷ್ಣಾ ನದಿಗೆ 1.31 ಲಕ್ಷ ಕ್ಯೂಸೆಕ್ ನೀರು,ಶೀಲಹಳ್ಳಿ ಸೇತುವೆ ಗೆ ಭೇಟಿ ನೀಡಿದ ತಹಶೀಲ್ದಾರ್ ಸತ್ಯಮ್ಮ



## ಪ್ರವಾಹ ಪರಿಸ್ಥಿತಿ ಎದುರಿಸಲು ಆಡಳಿತ ಸಜ್ಜು

ಕೃಷ್ಣಾ ನದಿ ಗೆ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿಸುತ್ತಿರುವ ಕಾರಣ ನದಿ ಪಾತ್ರದಲ್ಲಿ ಜನರು ನದಿಗೆ ಇಳಿಯದಂತೆ ಎಚ್ಚರವಹಿಸಲು ನೋಡಲ್ ಅಧಿಕಾರಿಗಳನ್ನು ನೇಮಿಸಲಾಗಿದೆ, ಜೊತೆಗೆ ನಡುಗಡ್ಡೆ ಪ್ರದೇಶಗಳ ಜನರಿಗೆ ಆಹಾರ ವಿತರಣೆ ಗೆ, ಹಾಗೂ ಆರೋಗ್ಯ ಇಲಾಖೆ ಯಿಂದ ಮೊಬೈಲ್ ವ್ಯಾನ್ ಬಳಕೆ ಮಾಡುವ ಮೂಲಕ ಜನರ ಹಿತ ಕಾಪಾಡಿ,ಪ್ರವಾಹ ಪರಿಸ್ಥಿತಿ ಯನ್ನ ಎದುರಿಸಲು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ.

**ಸತ್ಯಮ್ಮ**
**ತಹಶೀಲ್ದಾರರು ಲಿಂಗಸುಗೂರು**

• ಮಲ್ಲಮ್ಮ ನುಡಿ ವಾರ್ತೆ ಲಿಂಗಸಗೂರ

ಮಹಾರಾಷ್ಟ್ರದಲ್ಲಿ ವ್ಯಾಪಕವಾಗಿ ಸುರಿಯುತ್ತಿರುವ ಮಳೆಯಿಂದಾಗಿ ಅಪಾರಪ್ರಮಾಣದನೀರಿನಒಳಹರಿವು ಕಾರಣದಿಂದ ನಾರಾಯಣಪುರ ಜಲಾಶಯದಿಂದ ಕೃಷ್ಣಾ ನದಿಗೆ 1.31 ಲಕ್ಷ ಕ್ಯುಸೆಕ್ ನೀರನ್ನು ಹರಿಸಲಾಗುತ್ತಿದ್ದು,ಲಿಂಗಸುಗೂರು ತಾಲೂಕಿನ ಶೀಲಹಳ್ಳಿ ಸೇತುವೆ ಗೆ ತಹಶೀಲ್ದಾರ್ ಸತ್ಯಮ್ಮ ರವರು ಭೇಟಿ ನೀಡಿ ಪರಿಶೀಲನೆ ನಡೆಸಿದರುಕಳೆದಮೂರುದಿನಗಳಿಂದ ನಾರಾಯಣಪುರದ ಬಸವಸಾಗರ ಜಲಾಶಯಕ್ಕೆ ನಿರಂತರವಾಗಿ 1.10 ಲಕ್ಷ ಕ್ಯೂಸೆಕ್ ನೀರು ಹರಿದು ಬರುತ್ತಿದ್ದು ಜಲಾಶಯ ಭರ್ತಿಯಾಗಿ ಹೆಚ್ಚುವರಿ ನೀರನ್ನು ನದಿಗೆ ಹರಿಸಲಾಗುತ್ತಿದೆ.

ಗರಿಷ್ಠ 432.252 ಮೀ ನೀರು ಸಂಗ್ರಹಮಟ್ಟದ ಜಲಾಶಯದಲ್ಲಿ ಇದೀಗ 491.25 ಮೀ ನೀರು ಸಂಗ್ರಹವಾಗಿದ್ದು ಗರಿಷ್ಠ 33.313 ಟಿಎಂಸಿ ನೀರು ಸಂಗ್ರಹದ ಜಲಾಶಯದಲ್ಲಿಗೆ 29.57 ಟಿಎಂಸಿ ನೀರು ಸಂಗ್ರಹವಿದೆ. ಅದರಲ್ಲಿ 14.81 ಟಿಎಂಸಿ ಜೀವಜಲ ಬಳಕೆಗೆ ಲಭ್ಯವಿದೆ .ಕಳೆದ ಒಂದು ವಾರದಿಂದ ಜಲಾಶಯಕ್ಕೆನಿರಂತರವಾಗಿಹರಿದು ಬರುತ್ತಿರುವನೀರಿನಒಳಹರಿವಿನಲ್ಲಿ ಏರಳಿತಗಳು ಉಂಟಾಗುತ್ತಿರುವ ಕಾರಣ ಜಲಾಶಯದ ನೀರಿನ ಸಂಗ್ರಹಮಟ್ಟದಲ್ಲಿಯೂ ಕೂಡಾ ಏರಿಳಿತ ಕಂಡು ಬರುತಿದ್ದು, ಶೇ 88.77ರಷ್ಟು ಭರ್ತಿಯಾಗಿದೆ.

ಇನ್ನೂ ನೀರಿನ ಒಳಹರಿವು ಬರುತ್ತಿರುವ ಕಾರಣದಿಂದಾಗಿ ಜಲಾಶಯದ ಸುರಕ್ಷತೆ ಮತ್ತು ನೀರಿನ ಸಂಗ್ರಹಮಟ್ಟವನ್ನು ಕಾಯ್ದುಕೊಂಡು ಜಲಾಶಯದ 29 ಮುಖ್ಯ ಕ್ರಸ್ಟ್‌ಗೇಟ್‌ಗಳನ್ನು ತೆರೆಯುವ ಮೂಲಕ ಹಾಗೂ ಎಂಪಿಸಿಎಲ್ ಮೂಲಕ ನದಿಗೆ 1,31,326 ಕ್ಯೂಸೆಕ್ ಪ್ರಮಾಣದ ನೀರನ್ನು ಹರಿಸಲಾಗುತ್ತಿದೆ. ಇದರಿಂದಾಗಿ ಕೃಷ್ಣಾನದಿಯಲ್ಲಿ ಪ್ರವಾಹ ಸ್ಥಿತಿ ಉಂಟಾಗಿದ್ದು, ನದಿ ತೀರದ ಗ್ರಾಮಗಳಲ್ಲಿ ಕಂದಾಯ ಇಲಾಖೆ ಹಾಗೂ ಗ್ರಾಪಂ ವತಿಯಿಂದ ಜಾಗೃತಿ ಮೂಡಿಸಲಾಗುತ್ತಿದೆ.ಶೀಲಹಳ್ಳಿ ಸೇತುವೆಭೇಟಿಸಂದರ್ಭದಲ್ಲಿಉಪ ತಹಶೀಲ್ದಾರ್‌ರಾಘವೇಂದ್ರಕೊಪ್ಪದ್, ಶಿರಸ್ತೇದಾರ್ ಅಮರೇಶ ಸೇರಿದಂತೆ ಸ್ಥಳಿಯರು ಹಾಜರಿದ್ದರು.

# ನಿಧನ ವಾರ್ತೆ



• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ಯಮನಪ್ಪತಂದೆಕುಂಟೆಪ್ಪಭಾವಿಕಟ್ಟಿ ವಯಸ್ಸು (73)

ಸಾಕಿನ: ಹನುಮನಹಟ್ಟಿ,ತಾಲೂಕು: ಕೊಪ್ಪಳ, ಜಿಲ್ಲೆ: ಕೊಪ್ಪಳ

ಹನುಮನಹಟ್ಟಿ ಗ್ರಾಮದ ನಿವಾಸಿಯಾದ ಯಮನಪ್ಪ ತಂದೆ ಕುಂಟೆಪ್ಪ ಭಾವಿಕಟ್ಟಿ ವಯಸ್ಸು (73) ಅವರು ದಿನಾಂಕ 02-08-2026 ರಂದು ರಾತ್ರಿ 11:30 ಗಂಟೆಗೆ ಅಕಾಲಿಕ ನಿಧನರಾದರು.ಇವರಿಗೆ

ಇಬ್ಬರು ಪುತ್ರರು, ಮೂವರು ಪುತ್ರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಬಿಟ್ಟು ಅಗಲಿದ್ದಾರೆ.

ಅವರ ನಿಧನದಿಂದ ಕುಟುಂಬದ ಸದಸ್ಯರು, ಬಂಧು-ಬಳಗ ಹಾಗೂ ಹನುಮನಹಟ್ಟಿ ಗ್ರಾಮದ ನಿವಾಸಿಗಳಲ್ಲಿ ತೀವ್ರ ಶೋಕದ ವಾತಾವರಣ ನಿರ್ಮಾಣವಾಗಿದೆ.

ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಹಾಗೂ ಅವರ ಕುಟುಂಬದ ಸದಸ್ಯರಿಗೆ ಈ ದುಃಖವನ್ನು ಭರಿಸುವ ಶಕ್ತಿ ನೀಡಲಿ ಎಂದು ಬಂಧು-ಬಳಗದವರು ಮತ್ತು ಗ್ರಾಮಸ್ಥರು ಪ್ರಾರ್ಥಿಸಿದ್ದಾರೆ.

## ಚುನಾವಣೆಯ ಕಾಲವಲ್ಲ: ಬದಲಾವಣೆಯ ಪರ್ವ - ಅಭಿವೃದ್ಧಿಯ ದಾರಿ



• ಮಲ್ಲಮ್ಮ ನುಡಿ ವಾರ್ತೆ ಲಿಂಗಸಗೂರ

ಮತಕ್ಷೇತ್ರದಲ್ಲಿ ಬಿಜೆಪಿ-ಜೆಡಿಎಸ್ ಕಾರ್ಯಕರ್ತರು, ಯುವಕರು ಇಂದು ವಿಧಾನಪರಿಷತ್ ಸದಸ್ಯರಾದ ಸನ್ಮಾನ್ಯ ಶ್ರೀ ಶರಣಗೌಡ ಪಾಟೀಲ್ ಬಯ್ಯಾಪುರ ಸಾಹೇಬರು ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಂಡರು ಶ್ರೀ ನಾಗರಾಜ್ ಸಾಲ್ಮನಿ ಧಣಿ, ಮತ್ತು ಶ್ರೀ ಸೂಗಯ್ಯ ಸ್ವಾಮಿ ಅತ್ತುನೂರು, ಶ್ರೀ ಸಾಲ್ಮನಿ ತಾತ, ಮಕ್ಬುಲ್ ಗ್ಯಾರಂಟಿ, ವಿಜಯಕುಮಾರ್ ಸರ್ದಾರ್ , ರೋಶನ್ ಬೇಗ್, ಅಮರೇಶ್ ದೇವದುರ್ಗ, ಕೊಟ್ರೇಶ್, ಮಂಜುನಾಥ್ ಬಣ್ಣದ, ಅನುಪ್ ಲಿಂಗಸುಗೂರು, 10ನೇ ವಾರ್ಡಿನ ರವರು ಇಂದು ನೂರಾರು ಕಾರ್ಯಕರ್ತರೊಂದಿಗೆ ಸೇರ್ಪಡೆಗೊಂಡರು.ನಮ್ಮ ಲಿಂಗಸುಗೂರು ಮತಕ್ಷೇತ್ರದಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕಾರ್ಯಗಳಿಗೆ ಮೆಚ್ಚುಗೆ ವ್ಯಕ್ತಪಡಿಸಿ, ಹಲವು ಸ್ಥಳೀಯ ಮುಖಂಡರು ಹಾಗೂ ಕಾರ್ಯಕರ್ತರು, ಯುವಕರು ಬಿಜೆಪಿ-ಜೆಡಿಎಸ್ ತೊರೆದು ಕಾಂಗ್ರೆಸ್ ಪಕ್ಷಕ್ಕೆ ಅಧಿಕೃತವಾಗಿ ಸೇರ್ಪಡೆಗೊಂಡರು.

ಈ ಸಂದರ್ಭದಲ್ಲಿ ಶ್ರೀ ಭೂಪನಗೌಡ ಕರಡಕಲ್, ಪಾಮಯ್ಯ ಮುರಾರಿ, ಗುಂಡಪ್ಪ ನಾಯಕ್, ಶಶಿಧರ ಪಾಟೀಲ್ , ಅಮರೇಶ ಮೇದನಾಪುರ, ಮುತ್ತು ಹುನಕುಂಟಿ ಹಾಗೂ ಒಐಅ ಆಪ್ತ ಸಹಾಯಕ ಚನರೆಡ್ಡಿ ಬಿರಾದರ್ ಉಪಸ್ಥಿತರಿದ್ದರು

## ಮಂಜುನಾಥ ನಾಯ್ಕರಿಗೆ ಸನ್ಮಾನ



• ಮಲ್ಲಮ್ಮ ನುಡಿ ವಾರ್ತೆಗೋಕರ್ಣ

ಸಮಾಜ ಕಲ್ಯಾಣ ಇಲಾಖೆಯಯಲ್ಲಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ಮಂಜುನಾಥ ತುಕಾರಾಮ ನಾಯ್ಕ ಅವರನ್ನು ಗೋಕರ್ಣದ ಅವರ ನಿವಾಸದಲ್ಲಿ ಸನ್ಮಾನಸಿಲಾಯಿತು.ಈ ಸಂದರ್ಭದಲ್ಲಿ ಉದ್ದಿಮೆದಾರರಾದ ವೆಂಕಟರಮಣ ದೇವಣ್ಣ ಗೌಡ, ಅರವಿಂದ ವೆಂಕಟರಮಣ ನಾಯಕ, ಕಿರಣ ಭಂಡಾರಿ, ವರುಣ ನಾಯ್ಕ ಉಪಸ್ಥಿತರಿದ್ದರು.

# ಜ್ಯೋತಿ ಆಗು ಜಗಕೆಲ್ಲ ಜಾನಪದ ಬೆಳಗು ಹಾಡು ಹಕ್ಕಿಗಳ ಜಾನಪದ ವೈಭವ ಇಂದು

• ಮಲ್ಲಮ್ಮ ನುಡಿ ವಾರ್ತೆ ಕುಕನೂರು



ಪಟ್ಟಣದ ಜಗದ್ಗುರು ಮುಂಡರಗಿ ಅನ್ನದಾನೇಶ್ವರ ಶಾಖಾ ಮಠದ ಸಭಾ ಭವನದಲ್ಲಿ ಆಗಸ್ಟ್ 4ರಂದು ಸಂಜೆ 5 ಗಂಟೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಹಾಗೂ ಕರ್ನಾಟಕ ಜಾನಪದ ಅಕಾಡೆಮಿ ಬೆಂಗಳೂರು ಇವರ ಸಯೋಗದಲ್ಲಿ ಜ್ಯೋತಿ ಆಗು ಜಗವೆಲ್ಲ ಜ್ಞಾನಪದ ಬೆಳಗು, ಹಾಡು ಹಕ್ಕಿಗಳ ಜಾನಪದ ವೈಭವ ಸಾಂಸ್ಕೃತಿಕ ಕಾರ್ಯಕ್ರಮ* ಜರುಗಲಿದೆ.ಈ ಕಾರ್ಯಕ್ರಮದಲ್ಲಿ ಜಿಲ್ಲೆಯ ವಿವಿಧ ಪ್ರಕಾರದ ಜಾನಪದ ಕಲಾವಿದರು ಭಾಗವಹಿಸಲಿದ್ದು ಜಾನಪದ ಕಲೆ, ಸಾಹಿತ್ಯ, ಮತ್ತು ಸಂಸ್ಕೃತಿಯನ್ನು ಪ್ರತಿಬಿಂಬಿಸುವಂತಹ ಜನಪದ ಶೈಲಿಯ ಗೀಗಿ ಪದ, ಚೌಡಕಿ ಪದ, , ಜಾನಪದ ಸಂಗೀತ ಸಾಂಪ್ರದಾಯಿಕ ಸೋಬಾನ ಪದಗಳು ಇನ್ನು ಅನೇಕ ಕಲಾ ಪ್ರಕಾರಗಳು ವೇದಿಕೆಯಲ್ಲಿ ಪ್ರದರ್ಶನಗೊಳ್ಳುತ್ತವೆ. ಕಾರ್ಯಕ್ರಮದಲ್ಲಿ ಮುಂಡರಗಿ ಅನ್ನದಾನೇಶ್ವರ ಕುಕುನೂರು ಶಾಖಾ ಮಠದ ಪರಮಪೂಜ್ಯ ಡಾ. ಮಹಾದೇವ ಮಹಾಸ್ವಾಮಿಗಳು ಸಾನಿಧ್ಯವಹಿಸುವರು.ಮಾಜಿ ಸಚಿವರು ಹಾಗೂ ಯಲಬುರ್ಗಾ ವಿಧಾನಸಭಾ ಕ್ಷೇತ್ರದ ಹಾಲಿ ಶಾಸಕರಾದ ಬಸವರಾಜ ರಾಯರೆಡ್ಡಿ ಅವರು ಸಮಾರಂಭವನ್ನು ಉದ್ಘಾಟಿಸುವರು. ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷರಾದ ಗೊಲ್ಲಹಳ್ಳಿ ಶಿವಪ್ರಸಾದ್, ಕರ್ನಾಟಕ ಜಾನಪದ ಅಕಾಡೆಮಿ ರಿಜಿಸ್ಟರ್ ಎಸ್. ನಮ್ರತಾ ಮತ್ತು ಅನೇಕಗಣ್ಯರು ವೇದಿಕೆಯಲ್ಲಿ ಉಪಸ್ಥಿತರಿರುವರು ಎಂದು ಜಾನಪದ ಕಲಾವಿದರಾದ ಮತ್ತು *ಕರ್ನಾಟಕ ಜಾನಪದ ಅಕಾಡೆಮಿಯ ಸದಸ್ಯರಾದ ಡಾ ಜೀವನ್ ಸಾಬ್ ವಾಲಿಕಾರ್‌ಬಿನ್ನಾಳ ಅವರು ಪತ್ರಿಕಾ ಪ್ರಕಟಣೆಗೆ ತಿಳಿಸಿದ್ದಾರೆ.

# ಶಾಲೆಯಲ್ಲಿ ವ್ಯಸನ ಮುಕ್ತ ದಿನಾಚರಣೆ



• ಮಲ್ಲಮ್ಮ ನುಡಿ ವಾರ್ತೆಮುದಗಲ್

ಪಟ್ಟಣದ ಶ್ರೀ ವಿಜಯ ಮಹಾಂತೇಶ ಹಿರಿಯ ಪ್ರಾಥಮಿಕ ಶಾಲೆಯಲ್ಲಿ, ಮಹಾಂತ ಶ್ರೀಗಳ ಜೋಳಿಗೆಯ ಹರಿಕಾರರಾಗಿರುವ ಇಲಕಲ್ಲ ಮಹಾಂತ ಶ್ರೀಗಳ ಹುಟ್ಟುಹಬ್ಬ ಆಚರಣೆ ಪ್ರಯುಕ್ತ ವ್ಯಸನ ಮುಕ್ತ ದಿನಾಚರಣೆ ಶನಿವಾರ ಆಚರಣೆ ಮಾಡಲಾಯಿತು.ಶಾಲಾ ಶಿಕ್ಷಕ ಮಹಾಂತೇಶ ಬನ್ನಿಗೋಳ ಮಾತನಾಡಿದ ಅವರು ಬಸತತ್ವದ ಮಹಾದಂಡನಾಯಕ, ನಡೆದಾಡುವ ಬಸವ ಎಂದೇ ಖ್ಯಾತಿಯಾಗಿರುವ ಇಳಕಲ್ಲಿನ ಲಿಂ. ಶ್ರೀ ವಿಜಯ ಮಹಾಂತ ಸ್ವಾಮೀಜಿಯವರು ನಾಡಿನಾದ್ಯಂತ ಕೈಗೊಂಡ ಮೌಢ್ಯತೆ ನಿರ್ಮೂಲನೆ, ಮೂಢನಂಬಿಕೆಗಳ ವಿರುದ್ಧ ಅನೇಕ ಕಾರ್ಯಕ್ರಮಗಳನ್ನು ಆಯೋಜಿಸಿದ್ದು,ಅಲ್ಲದೆ ಯುವಜನರು ದುಶ್ಚಟಗಳಿಂದ ದೂರವಾಗಲು ಕರೆಯನ್ನು ಕೊಡಲು ವ್ಯಸನ ಮುಕ್ತ ಕಾರ್ಯಕ್ರಮಗಳನ್ನು ನಾಡಿನಾದ್ಯಂತ ಹಮ್ಮಿಕೊಂಡರು ಎಂದು ಹೇಳಿದರು.ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಯೋಜನಾಧಿಕಾರಿ ಆಂಜನೇಯ, ಜ್ಞಾನದೀಪ ಶಿಕ್ಷಕಿ ಮೈಮುನ ಅವರು ಸ್ವಾಸ್ಥ್ಯ ಸಂಕಲ್ಪ ಪ್ರತಿಜ್ಞೆವಿಧಿ ಮಕ್ಕಳಿಗೆ ಬೋಧಿಸಿದರು.ಇದೇ ಸಂದರ್ಭದಲ್ಲಿ ವಚನ ಸ್ಪರ್ಧೆಯಲ್ಲಿ ಭಾಗವಹಿಸಿದ ಮಕ್ಕಳಿಗೆ ವಚನ ಪುಸ್ತಕಗಳನ್ನು ಪ್ರಶಸ್ತಿ ಪತ್ರಗಳನ್ನು ನೀಡಿ ಗೌರವಿಸಲಾಯಿತು.

ಸಂಸ್ಥೆಯ ಕಾರ್ಯದರ್ಶಿ ಶಿವಕುಮಾರ ಪಾಟೀಲ, ಸಂಸ್ಥೆಯ ನಿವೃತ್ತ ಮುಖ್ಯ ಗುರುಗಳು ಮಾಧವ ಭಟ್,ಶಾಲಾ ಮುಖ್ಯಗುರುಗಳು ಆನಂದ ಕುಮಾರ ಕೊಳ್ಳಿ, ಸಹ ಶಿಕ್ಷಕರು, ವಿದ್ಯಾರ್ಥಿಗಳು, ಎಸ್. ಹರ್ಷಿಕ ಸೇರಿದಂತೆ ಇತರರಿದ್ದರು.

# ಗೆದ್ದಲಗಟ್ಟಿ ಸೋಮನಾಥ ರವರಿಗೆ ಸುನಾಮಿ ರಾಷ್ಟ್ರೀಯ ಮಾಧ್ಯಮ ಪ್ರಶಸ್ತಿ

• ಮಲ್ಲಮ್ಮ ನುಡಿ ವಾರ್ತೆ ಹಗರಿಬೊಮ್ಮನಹಳ್ಳಿ



ಆ. 3: ಸುನಾಮಿ ಪತ್ರಿಕೆ ವತಿಯಿಂದ ದಶಕದ ಸಂಭ್ರಮದಲ್ಲಿ ಪ್ರತಿಷ್ಠಿತ ಸುನಾಮಿ ರಾಷ್ಟ್ರೀಯ ಮಾಧ್ಯಮ ಪ್ರಶಸ್ತಿ–2026ಕ್ಕೆ ಈ ಸಮಯ ನ್ಯೂಸ್ ದಿನಪತ್ರಿಕೆಯ ಸಂಪಾದಕರು,ವಿಜಯನಗರವಾಣಿ ವರದಿಗಾರರಾದ ಗೆದ್ದಲಗಟ್ಟಿ . ಸೋಮನಾಥ್ ರವರು ಆಯ್ಕೆಯಾಗಿದ್ದಾರೆ.

ಸುನಾಮಿ ಪತ್ರಿಕೆಯ ದಶಕದ ಸಂಭ್ರಮದ ಅಂಗವಾಗಿ "ಬದಲಾವಣೆಯ ಅಲೆಗೆ ಹತ್ತರ ಸಂಭ್ರಮ – ಸಾಧಕರ ಜಗತ್ತಿಗೆ ಸುನಾಮಿ ಪ್ರಣಾಮ" ಎಂಬ ಧ್ಯೇಯದೊಂದಿಗೆ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಆಗಸ್ಟ್ 5ರಂದು (ಬುಧವಾರ) ಬೆಳಿಗ್ಗೆ 10.30ಕ್ಕೆ ಬೆಂಗಳೂರಿನ ಗಾಂಧಿ ಭವನ, ಕುಮಾರಕೃಪಾ ರಸ್ತೆಯಲ್ಲಿ ಆಯೋಜಿಸಲಾಗಿದೆ.

ಕಾರ್ಯಕ್ರಮದ ಉದ್ಘಾಟನೆಯನ್ನು ಮಾಜಿ ಮುಖ್ಯಮಂತ್ರಿ ಹಾಗೂ ಮಾಜಿ ಕೇಂದ್ರ ಸಚಿವರಾದ ಡಾ. ಎಂ. ವೀರಪ್ಪ ಮೊಯ್ಲಿ ರವರು ಅಧ್ಯಕ್ಷತೆ ಬಳ್ಳಾರಿ ಲೋಕಸಭಾ ಸದಸ್ಯರಾದ ಈ.ತುಕಾರಾಂ ರವರು ವಿಶೇಷ ಆಹ್ವಾನಿರಾದ ಡಾ.ಕುಂ.ವೀರಭದ್ರಪ್ಪ ರವರು ಅಧ್ಯಕ್ಷತೆಯನ್ನು ಸುನಾಮಿ ಪತ್ರಿಕೆಯ ಸಂಪಾದಕರಾದ ಹಳ್ಳಿ ಪ್ರಕಾಶ್ ವಹಿಸಲಿದ್ದು, ರಾಜ್ಯದ ವಿವಿಧ ಭಾಗಗಳಿಂದ ಹಿರಿಯ ಪತ್ರಕರ್ತರು, ಸಂಪಾದಕರು,ಮಾಧ್ಯಮ ಪ್ರತಿನಿಧಿಗಳು, ಸಾಹಿತಿಗಳು,ಸಾಮಾಜಿಕ ಮುಖಂಡರು, ಜನಪ್ರತಿನಿಧಿಗಳು ಹಾಗೂ ವಿವಿಧ ಕ್ಷೇತ್ರಗಳ ಗಣ್ಯರು ಭಾಗವಹಿಸಲಿದ್ದಾರೆ.

ಮಾಧ್ಯಮ ಕ್ಷೇತ್ರದಲ್ಲಿ ಗೆದ್ದಲಗಟ್ಟಿ. ಸೋಮನಾಥ್ ಅವರು ಸಲ್ಲಿಸಿರುವ ವಿಶಿಷ್ಟ ಸೇವೆ, ಜನಪರ ಪತ್ರಿಕೋದ್ಯಮ, ಸಮಾಜಮುಖಿ ವರದಿಗಾರಿಕೆ ಹಾಗೂ ಗ್ರಾಮೀಣ ಸಮಸ್ಯೆಗಳನ್ನು ಜನಪ್ರತಿನಿಧಿಗಳ ಮತ್ತು ಸರ್ಕಾರದ ಗಮನಕ್ಕೆ ತರುವಲ್ಲಿ ಅವರು ವಹಿಸಿರುವ ಮಹತ್ವದ ಪಾತ್ರವನ್ನು ಪರಿಗಣಿಸಿ ಅವರಿಗೆ ಸುನಾಮಿ ರಾಷ್ಟ್ರೀಯ ಮಾಧ್ಯಮ ಪ್ರಶಸ್ತಿ–2026 ಪ್ರದಾನ ಮಾಡಲಾಗುತ್ತಿದೆ.

ಇದೇ ಸಂದರ್ಭದಲ್ಲಿ ರಾಜ್ಯದ ವಿವಿಧ ಭಾಗಗಳಿಂದ ಆಯ್ಕೆಯಾದ ಮಾಧ್ಯಮ ಕ್ಷೇತ್ರದ ಸಾಧಕರು, ಹಾಗೂ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಸಾಧಕರನ್ನು ಸನ್ಮಾನಿಸಿ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗುವುದು. ಜೊತೆಗೆ ಸುನಾಮಿ ಪತ್ರಿಕೆಯ ದಶಕದ ಪಯಣ, ಮಾಧ್ಯಮ ಕ್ಷೇತ್ರದಲ್ಲಿ ಸಲ್ಲಿಸಿರುವ ಸೇವೆಗಳು, ಸಮಾಜಮುಖಿ ಕಾರ್ಯಗಳು ಹಾಗೂ ಪತ್ರಿಕೆಯ ಸಾಧನೆಗಳ ಕುರಿತು ವಿಶೇಷ ಪರಿಚಯ ಕಾರ್ಯಕ್ರಮವೂ ನಡೆಯಲಿದೆ.

ಜಿ. ಸೋಮನಾಥ್ ಅವರಿಗೆ ಸುನಾಮಿ "ರಾಷ್ಟ್ರೀಯ ಮಾಧ್ಯಮ" ಪ್ರಶಸ್ತಿ ಲಭಿಸಿರುವುದಕ್ಕೆ ಜನನಿ ಸೇವಾ ಟ್ರಸ್ಟ್ ಅಧ್ಯಕ್ಷ ಎ. ಕೇಶವಮೂರ್ತಿ ಅವರು ಅಭಿನಂದನೆ ಸಲ್ಲಿಸಿದ್ದಾರೆ. ಟ್ರಸ್ಟ್‌ನ ಪದಾಧಿಕಾರಿಗಳು ಹಾಗೂ ವಿಎಸ್ ಎಸ್ ಎನ್ ಅಧ್ಯಕ್ಷರಾದ ಕೆ.ಹುಲುಗಪ್ಪ. ಯುವ ಮುಖಂಡ ಎಸ್. ಚಂದ್ರು, ಬಂಟ್ರ ಕುಬೇರ, ವಿ. ಗೋವಿಂದ, ಶಿಗೇನಹಳ್ಳಿ ಮಾರುತಿ,ಟಿ.ಹನುಮಂತ,ಕೆ.ವಿಶ್ವನಾಥ,ಗುಂಡಾ ಹನುಮಂತ,ದೊಡ್ಡ ಸೋಮಣ್ಣ,ಹನಸಿ ಮಾರ್ಗೇಶ್,

ತಳವಾರ ರಾಮಣ್ಣ, ಮುಂಡರಗಿ ಮಂಜುನಾಥ,ಬಂಟ್ರ ಹರೀಶ್ ,ಖಾಜಹುಸೇನ್, ಓಬಳಾಪುರ ವೆಂಕಟೇಶ, ಹೆಗ್ಡಾಳ್ ಯಮನೂರು ಹಾಗೂ ಹಡಗಲಿ ಖಾಜಾ ಅವರು ಜಿ. ಸೋಮನಾಥ್ ಅವರಿಗೆ ಶುಭ ಹಾರೈಸಿ, ಇನ್ನಷ್ಟು ಜನಪರ ಪತ್ರಿಕೋದ್ಯಮದ ಮೂಲಕ ಸಮಾಜಕ್ಕೆ ಸೇವೆ ಸಲ್ಲಿಸುವಂತಾಗಲಿ ಎಂದು ಆಶಿಸಿದ್ದಾರೆ.

ಈ ಕುರಿತು ಮಾಹಿತಿ ನೀಡಿರುವ ಸುನಾಮಿ ಪತ್ರಿಕೆಯ ಸಂಪಾದಕರಾದ ಹಳ್ಳಿ ಪ್ರಕಾಶ್, ಪತ್ರಕರ್ತರು, ಮಾಧ್ಯಮ ಸ್ನೇಹಿತರು, ವಿವಿಧ ಸಂಘ–ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಂತೆ ಮನವಿ ಮಾಡಿದ್ದಾರೆ.

# ವೈಟ್‌ಬೋರ್ಡ್ ಬೈಕ್ ಟ್ಯಾಕ್ಸಿ ಸೇವೆ ನಿಷೇಧಕ್ಕೆ ಆಗ್ರಹಿಸಿ 200 ಆಟೋಗಳೊಂದಿಗೆ ಪ್ರತಿಭಟನೆ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ




ವೈಟ್‌ಬೋರ್ಡ್ ದ್ವಿಚಕ್ರ ವಾಹನಗಳ ಮೂಲಕ ನಡೆಯುತ್ತಿರುವ ಆನ್‌ಲೈನ್ ಬೈಕ್ ಟ್ಯಾಕ್ಸಿ (ರೈಡ್ ಬುಕ್ಕಿಂಗ್) ಸೇವೆಗಳನ್ನು ತಕ್ಷಣ ನಿಷೇಧಿಸಬೇಕು ಎಂದು ಆಗ್ರಹಿಸಿ ಬಳ್ಳಾರಿ ಆಟೋ ಚಾಲಕರ ಸಂಘದ ಅಧ್ಯಕ್ಷ ಹುಂಡೇಕರ್ ರಾಜೇಶ್ ಅವರ ನೇತೃತ್ವದಲ್ಲಿ ಸೋಮವಾರ ನಗರದಲ್ಲಿ ನೂರಕ್ಕೂ ಹೆಚ್ಚು ಆಟೋಗಳೊಂದಿಗೆ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು.ನಗರದ ರೈಲ್ವೆ ನಿಲ್ದಾಣದಿಂದ ಆರಂಭವಾದ ಪ್ರತಿಭಟನಾ ಮೆರವಣಿಗೆ ಪ್ರಮುಖ ರಸ್ತೆಗಳಲ್ಲಿ ಸಾಗುತ್ತಾ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ (ಎಸ್‌ಪಿ) ಕಚೇರಿವರೆಗೆ ತಲುಪಿತು. ಬಳಿಕ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಸುಮನ್ ಡಿ. ಪೆನ್ನೇಕರ್ ಅವರಿಗೆ ಸಲ್ಲಿಸಲು ಉದ್ದೇಶಿಸಿದ್ದ ಮನವಿ ಪತ್ರವನ್ನು ಬ್ರೂಸ್‌ಪೇಟೆ ಪೊಲೀಸ್ ಠಾಣೆಯ ಸರ್ಕಲ್ ಇನ್ಸ್‌ಪೆಕ್ಟರ್ ಮಹಾಂತೇಶ್ ಅವರಿಗೆ ಪ್ರತಿಭಟನಾಕಾರರು ಹಸ್ತಾಂತರಿಸಿದರು.ಈ ಸಂದರ್ಭದಲ್ಲಿ ಮಾತನಾಡಿದ ಹುಂಡೇಕರ್ ರಾಜೇಶ್, ಬಳ್ಳಾರಿ ನಗರ ಹಾಗೂ ಗ್ರಾಮಾಂತರ ಭಾಗದಲ್ಲಿ ಸುಮಾರು 15 ಸಾವಿರ ಆಟೋ ಚಾಲಕರು ಆಟೋ ಚಾಲನೆಯನ್ನೇ ನಂಬಿ ಜೀವನ ಸಾಗಿಸುತ್ತಿದ್ದಾರೆ. ಆದರೆ ಇತ್ತೀಚಿನ ದಿನಗಳಲ್ಲಿ ಯಾವುದೇ ಕಾನೂನುಬದ್ಧ ಅನುಮತಿ ಇಲ್ಲದೆ ವೈಟ್‌ಬೋರ್ಡ್ ದ್ವಿಚಕ್ರ ವಾಹನಗಳ ಮೂಲಕ ಆನ್‌ಲೈನ್ ರೈಡ್ ಸೇವೆಗಳು ವ್ಯಾಪಕವಾಗಿ ನಡೆಯುತ್ತಿರುವುದು ಆಟೋ ಚಾಲಕರ ಜೀವನೋಪಾಯಕ್ಕೆ ದೊಡ್ಡ ಹೊಡೆತ ನೀಡಿದೆ ಎಂದು ಆರೋಪಿಸಿದರು.ಕರ್ನಾಟಕ ಸರ್ಕಾರ ಈಗಾಗಲೇ ಬೈಕ್ ಟ್ಯಾಕ್ಸಿ ಸೇವೆಗೆ ಸಂಬಂಧಿಸಿದಂತೆ ಆರ್‌ಟಿಓ ಅನುಮತಿ, ನಿಗದಿತ ನಿಯಮಗಳು ಹಾಗೂ ಕಪ್ಪು ನಾಮಫಲಕ ಹೊಂದಿರುವ ವಾಹನಗಳಿಗೆ ಮಾತ್ರ ಅವಕಾಶ ಕಲ್ಪಿಸಿರುವುದಾಗಿ ಅವರು ತಿಳಿಸಿದರು. ಆದರೂ ಬಳ್ಳಾರಿ ನಗರದಲ್ಲಿ ಅಂದಾಜು 500ಕ್ಕೂ ಹೆಚ್ಚು ವೈಟ್‌ಬೋರ್ಡ್ ಬೈಕ್‌ಗಳು ಯಾವುದೇ ಅಧಿಕೃತ ಅನುಮತಿ ಇಲ್ಲದೆ ಆನ್‌ಲೈನ್ ಆಪ್‌ಗಳ ಮೂಲಕ ಪ್ರಯಾಣಿಕರಿಗೆ ಸೇವೆ ನೀಡುತ್ತಿವೆ ಎಂದು ದೂರಿದರು.ಇಂತಹ ವಾಹನಗಳಲ್ಲಿ ಪ್ರಯಾಣಿಸುವ ವೇಳೆ ಯಾವುದೇ ಅಪಘಾತ ಅಥವಾ ಅನಾಹುತ ಸಂಭವಿಸಿದರೆ ಅದರ ಹೊಣೆ ಯಾರು ಹೊರುತ್ತಾರೆ ಎಂಬ ಪ್ರಶ್ನೆಯನ್ನು ಎತ್ತಿದ ಅವರು, ಈಗಾಗಲೇ ಸರ್ಕಾರದ ಉಚಿತ ಬಸ್ ಪ್ರಯಾಣ ಯೋಜನೆ, ಎಲ್‌ಪಿಜಿ ಹಾಗೂ ಸಿಎನ್‌ಜಿ ದರ ಏರಿಕೆಯಿಂದ ಆಟೋ ಚಾಲಕರು ಆರ್ಥಿಕ ಸಂಕಷ್ಟದಲ್ಲಿದ್ದು, ಅನಧಿಕೃತ ಬೈಕ್ ಟ್ಯಾಕ್ಸಿ ಸೇವೆಯಿಂದ ಅವರ ಜೀವನ ಮತ್ತಷ್ಟು ದುಸ್ತರವಾಗಿದೆ ಎಂದು ಹೇಳಿದರು.ವೈಟ್‌ಬೋರ್ಡ್ ಬೈಕ್‌ಗಳ ಮೂಲಕ ನಡೆಯುತ್ತಿರುವ ರ್ಯಾಪಿಡೊ ಹಾಗೂ ಇತರೆ ಆನ್‌ಲೈನ್ ರೈಡ್ ಬುಕ್ಕಿಂಗ್ ಸೇವೆಗಳ ವಿರುದ್ಧ ಕೂಡಲೇ ಕಾನೂನು ಕ್ರಮ ಕೈಗೊಂಡು, ಅನಧಿಕೃತ ಸೇವೆಗಳನ್ನು ಸ್ಥಗಿತಗೊಳಿಸುವ ಮೂಲಕ ಬಡ ಆಟೋ ಚಾಲಕರ ಹಿತವನ್ನು ಕಾಪಾಡಬೇಕು ಎಂದು ಮನವಿ ಪತ್ರದಲ್ಲಿ ಆಗ್ರಹಿಸಲಾಗಿದೆ.ಪ್ರತಿಭಟನೆಯಲ್ಲಿ ಬಳ್ಳಾರಿ ಆಟೋ ಚಾಲಕರ ಸಂಘದ ಪದಾಧಿಕಾರಿಗಳು ಹಾಗೂ ನೂರಕ್ಕೂ ಹೆಚ್ಚು ಆಟೋ ಚಾಲಕರು ಭಾಗವಹಿಸಿ ಸರ್ಕಾರ ಮತ್ತು ಪೊಲೀಸ್ ಇಲಾಖೆಯು ಶೀಘ್ರ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

# ಇಂದ್ರನಗರದಲ್ಲಿ ವಿದ್ಯುತ್ ತಂತಿ ತುಂಡಾಗಿ ರಸ್ತೆ ಮೇಲೆ ಬಿದ್ದು ಆತಂಕ



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ನಗರದ 35ನೇ ವಾರ್ಡಿನ ಇಂದ್ರನಗರದಲ್ಲಿ ಸೋಮವಾರ ವಿದ್ಯುತ್ ತಂತಿಯೊಂದು ತುಂಡಾಗಿ ರಸ್ತೆ ಮೇಲೆ ಬಿದ್ದ ಘಟನೆ ಸಂಭವಿಸಿದ್ದು, ಅದೃಷ್ಟವಶಾತ್ ಯಾವುದೇ ಅನಾಹುತ ಸಂಭವಿಸಿಲ್ಲ.ವಿದ್ಯುತ್ ತಂತಿ ರಸ್ತೆ ಮೇಲೆ ಬಿದ್ದಿರುವುದನ್ನು ಗಮನಿಸಿದ ಸ್ಥಳೀಯ ನಿವಾಸಿಗಳು ಕೂಡಲೇ ಎಚ್ಚರಿಕೆ ವಹಿಸಿ ಸಾರ್ವಜನಿಕರು ಆ ಮಾರ್ಗದಲ್ಲಿ ಸಂಚರಿಸದಂತೆ ತಡೆಹಿಡಿದರು. ನಂತರ ಸಂಬಂಧಪಟ್ಟ ವಿದ್ಯುತ್ ಇಲಾಖೆಯ ಅಧಿಕಾರಿಗಳಿಗೆ ಮಾಹಿತಿ ನೀಡಲಾಯಿತು.ಘಟನೆಯಿಂದ ಕೆಲಕಾಲ ಸ್ಥಳೀಯರಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿತ್ತು. ಆದರೆ ಯಾವುದೇ ಪ್ರಾಣಹಾನಿ ಅಥವಾ ಆಸ್ತಿ ಹಾನಿ ಸಂಭವಿಸಿಲ್ಲ ಎಂದು ತಿಳಿದುಬಂದಿದೆ.ತುಂಡಾದ ವಿದ್ಯುತ್ ತಂತಿಯನ್ನು ಶೀಘ್ರದಲ್ಲೇ ದುರಸ್ತಿಗೊಳಿಸಿ, ಇಂತಹ ಘಟನೆಗಳು ಮರುಕಳಿಸದಂತೆ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸ್ಥಳೀಯ ನಿವಾಸಿಗಳು ವಿದ್ಯುತ್ ಇಲಾಖೆಯನ್ನು ಆಗ್ರಹಿಸಿದ್ದಾರೆ.

# ಬಳ್ಳಾರಿ ಜಿಲ್ಲೆಯನ್ನು ಬರಪೀಡಿತ ಜಿಲ್ಲೆ ಎಂದು ಘೋಷಿಸಲು ಆಗ್ರಹ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ




ಬಳ್ಳಾರಿ ಜಿಲ್ಲೆಯನ್ನು ತಕ್ಷಣವೇ ಬರಪೀಡಿತ ಜಿಲ್ಲೆ ಎಂದು ಘೋಷಿಸಿ, ರೈತರಿಗೆ ಪ್ರತಿ ಎಕರೆಗೆ ?50 ಸಾವಿರ ಪರಿಹಾರ ನೀಡಬೇಕು ಎಂದು ಆಗ್ರಹಿಸಿ ಭಾರತೀಯ ಜನತಾ ಪಕ್ಷದ ರೈತ ಮೋರ್ಚಾ ವತಿಯಿಂದ ಸೋಮವಾರ ಅಹೋರಾತ್ರಿ ಧರಣಿ ಪ್ರತಿಭಟನೆ ನಡೆಸಲಾಯಿತು.

ನಗರದ ಹಳೆ ಜಿಲ್ಲಾಧಿಕಾರಿ ಕಚೇರಿ ಮುಂಭಾಗ, ರೈಲ್ವೆ ನಿಲ್ದಾಣ ಎದುರು ಬೆಳಿಗ್ಗೆ 11.30 ಗಂಟೆಗೆ ಆರಂಭವಾದ ಅಹೋರಾತ್ರಿ ಧರಣಿಯು ಮಂಗಳವಾರ ಬೆಳಿಗ್ಗೆ 11 ಗಂಟೆಯವರೆಗೆ ನಡೆಯಲಿದೆ. ರಾಜ್ಯ ಕಾಂಗ್ರೆಸ್ ಸರ್ಕಾರದ ರೈತ ವಿರೋಧಿ ನೀತಿಗಳನ್ನು ಖಂಡಿಸಿ ಪ್ರತಿಭಟನಾಕಾರರು ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅನಿಲ್ ಕುಮಾರ್ ಮೋಕ ನಾಯ್ಡು ಅವರು ಜಿಲ್ಲೆಯಾದ್ಯಂತ ಮಳೆ ಕೊರತೆಯಿಂದ ರೈತರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ಬೆಳೆಗಳು ಒಣಗಿ ಹೋಗುತ್ತಿದ್ದು, ಕೃಷಿಗೆ ಮಾಡಿದ ಹೂಡಿಕೆ ಸಂಪೂರ್ಣ ನಷ್ಟವಾಗುವ ಪರಿಸ್ಥಿತಿ ನಿರ್ಮಾಣವಾಗಿದೆ. ಸರ್ಕಾರ ಕೂಡಲೇ ಬಳ್ಳಾರಿ ಜಿಲ್ಲೆಯನ್ನು ಬರಪೀಡಿತ ಜಿಲ್ಲೆ ಎಂದು ಘೋಷಿಸಿ, ರೈತರಿಗೆ ಪ್ರತಿ ಎಕರೆಗೆ ?50 ಸಾವಿರ ಪರಿಹಾರವನ್ನು ನೀಡಬೇಕು ಎಂದು ಒತ್ತಾಯಿಸಿದರು.

ರಾಜ್ಯ ಸರ್ಕಾರ ರೈತರ ಸಮಸ್ಯೆಗಳ ಬಗ್ಗೆ ನಿರ್ಲಕ್ಷ್ಯ ವಹಿಸುತ್ತಿದ್ದು, ಬೆಳೆ ನಷ್ಟದ ಸಮೀಕ್ಷೆ ನಡೆಸಿ ತುರ್ತು ಪರಿಹಾರ ಘೋಷಿಸಬೇಕು. ರೈತರ ಬದುಕು ಉಳಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಪ್ರತಿಭಟನೆಯಲ್ಲಿ ವೈ.ಎಂ. ಸತೀಶ್, ಸೋಮಲಿಂಗಪ್ಪ, ಸಣ್ಣ ಪಕೀರಪ್ಪ, ಬಿಜೆಪಿ ಬಳ್ಳಾರಿ ನಗರ ಜಿಲ್ಲಾಧ್ಯಕ್ಷ ಗುರಂ ವೆಂಕಟರಮಣ, ಹನುಮಂತಪ್ಪ ಮಹಿಪಾಲ್, ಗುರುಲಿಂಗನಗೌಡ, ಏನಾಥ್ ರೆಡ್ಡಿ, ದರಪ್ಪ ನಾಯಕ್, ತಿಮ್ಮಪ್ಪ, ಗುಡಿಗಂಟಿ ಹನುಮಂತು, ವೀರಶೇಖರ್ ರೆಡ್ಡಿ, ಅಡವಿ ಸ್ವಾಮಿ, ಹಂಪಿ ರಾಮನ, ಸುಗುಣ, ಪುಷ್ಪ ಚಂದ್ರಶೇಖರ್, ಡಾ. ಅರುಣಾ, ಅಲಿವೇಲಮ್ಮ, ಜ್ಯೋತಿ, ಚಾಂದಿನಿ ಸೇರಿದಂತೆ ಬಿಜೆಪಿ ಮುಖಂಡರು, ರೈತ ಮೋರ್ಚಾ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಭಾಗವಹಿಸಿದ್ದರು.

# ಸೆ. 2 ರಂದು ಪರಿಸರ ಸಾರ್ವಜನಿಕ ಆಲಿಕೆ ಸಭೆ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಸಿರುಗುಪ್ಪ ತಾಲೂಕಿನ ಮಣ್ಣೂರು ಗ್ರಾಮ ಮತ್ತು ಎಂ. ಸೂಗೂರು ಗ್ರಾಮಗಳಲ್ಲಿ ಉದ್ದೇಶಿತ ನದಿ ಮರಳು ಗಣಿಗಾರಿಕೆ ಯೋಜನೆಗೆ ಸಂಬಂಧಿಸಿದಂತೆ ಸೆಪ್ಟೆಂಬರ್ 02 ರಂದು ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸಲು ತೀರ್ಮಾನಿಸಲಾಗಿದೆ.

*ಮಣ್ಣೂರು ಗ್ರಾಮ:*ಅಂದು ಬೆಳಿಗ್ಗೆ 11 ಗಂಟೆಗೆ ಮಣ್ಣೂರು ಗ್ರಾಮದ ಸರ್ವೆ ನಂ. 259(ಪಿ) ಯೋಜನಾ ಪ್ರದೇಶದಲ್ಲಿ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸಲು ನಿರ್ಧರಿಸಲಾಗಿದೆ.ಪ್ರವರ್ತಕ ಎಂ. ಚಂದ್ರಶೇಖರ್ ಗೌಡ, ಸಿರುಗುಪ್ಪ ತಾಲ್ಲೂಕಿನ ಮಣ್ಣೂರು ಗ್ರಾಮದ ಸರ್ವೆ ನಂ. 259(ಪಿ) ತುಂಗಭದ್ರಾ ನದಿ ಪಾತ್ರದಲ್ಲಿರುವ ಬ್ಲಾಕ್–ಬಿಎಲ್‌ವೈ–ಓಎಸ್‌ಬಿ–09 ರಲ್ಲಿ ಒಟ್ಟು 31 ಎಕರೆ (12.5506 ಹೆಕ್ಟೇರ್) ಸರ್ಕಾರಿ ಪ್ರದೇಶದಲ್ಲಿ ವಾರ್ಷಿಕ 39,400 ಟನ್ ಉತ್ಪಾದನಾ ಸಾಮರ್ಥ್ಯದ ನದಿ ಮರಳು ಗಣಿಗಾರಿಕೆ ಯೋಜನೆಯನ್ನು ಕೈಗೊಳ್ಳಲು ಉದ್ದೇಶಿಸಿದ್ದಾರೆ.*ಎಂ.ಸೂಗೂರು:*ಅಂದು ಮಧ್ಯಾಹ್ನ 03 ಗಂಟೆಗೆ ಎಂ. ಸೂಗೂರು ಗ್ರಾಮದ ಸರ್ವೆ ನಂ. 551 (ಪಿ) ರ ಯೋಜನಾ ಪ್ರದೇಶದಲ್ಲಿ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸಲು ನಿರ್ಧರಿಸಲಾಗಿದೆ.ಪ್ರವರ್ತಕ ಜಗದೀಶ್ ಎಂ.(ತಂದೆ: ಎಂ. ಸಿದ್ದರಾಮನಗೌಡ), ಸಿರುಗುಪ್ಪ ತಾಲ್ಲೂಕಿನ ಎಂ. ಸೂಗೂರು ಗ್ರಾಮದ ಸರ್ವೆ ನಂ. 551 (ಪಿ) ರ ಬ್ಲಾಕ್–ಬಿಎಲ್‌ವೈ–ಓಎಸ್‌ಬಿ–06 ರಲ್ಲಿ ಒಟ್ಟು 34 ಎಕರೆ ಸರ್ಕಾರಿ ಪ್ರದೇಶದಲ್ಲಿ ವಾರ್ಷಿಕ 43,400 ಟನ್ ಉತ್ಪಾದನಾ ಸಾಮರ್ಥ್ಯದ ನದಿ ಮರಳು ಗಣಿಗಾರಿಕೆ ಯೋಜನೆ ಕೈಗೊಳ್ಳಲು ಉದ್ದೇಶಿರುತ್ತಾರೆ.ಹಾಗಾಗಿ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಈ ಸಭೆಗಳು ಜರುಗಲಿದ್ದು, ಸಾರ್ವಜನಿಕರು ಹಾಗೂ ಸ್ಥಳೀಯರು ಈ ಸಭೆಯಲ್ಲಿ ಭಾಗವಹಿಸಿ ತಮ್ಮ ಅಭಿಪ್ರಾಯ ಹಾಗೂ ಸಲಹೆಗಳನ್ನು ಹಂಚಿಕೊಳ್ಳಬಹುದಾಗಿದೆ ಎಂದು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಬಳ್ಳಾರಿ ಪ್ರಾದೇಶಿಕ ಕಚೇರಿಯ ಪರಿಸರ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅಂತರರಾಷ್ಟ್ರೀಯ ಅಂಚೆ ವಸ್ತುಗಳ ಬುಕ್ಕಿಂಗ್ ಸೌಲಭ್ಯ ವಿಸ್ತರಣೆ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಅ.03–ಗ್ರಾಹಕರ ಅನುಕೂಲತೆಯನ್ನು ಹೆಚ್ಚಿಸುವ ಹಾಗೂ ಅಂತರರಾಷ್ಟ್ರೀಯ ಅಂಚೆ ಸೇವೆಗಳನ್ನು ಜನಸಾಮಾನ್ಯರಿಗೆ ಇನ್ನಷ್ಟು ಸುಲಭವಾಗಿ ತಲುಪಿಸುವ ಉದ್ದೇಶದಿಂದ, ಅಂಚೆ ಇಲಾಖೆಯು ಕಲಬುರಗಿ ಅಂಚೆ ವಿಭಾಗದ ಮುಖ್ಯ ಅಂಚೆ ಕಚೇರಿ ಸೇರಿದಂತೆ 39 ಉಪ ಅಂಚೆ ಕಚೇರಿ ಮತ್ತು ಎಲ್ಲಾ 320 ಶಾಖಾ ಅಂಚೆ ಕಚೇರಿಗಳಿಗೂ ಅಂತರರಾಷ್ಟ್ರೀಯ ಅಂಚೆ ವಸ್ತುಗಳ ಬುಕ್ಕಿಂಗ್ ಸೌಲಭ್ಯವನ್ನು ವಿಸ್ತರಿಸಲಾಗಿದೆ ಎಂದು ಕಲಬುರಗಿ ವಿಭಾಗದ ಅಂಚೆ ಅಧೀಕ್ಷಕರಾದ ರವೀಂದ್ರ ಬಿ.ಎಲ್. ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ .ಇದುವರೆಗೆ ಅಂತರರಾಷ್ಟ್ರೀಯ ಅಂಚೆ ವಸ್ತುಗಳನ್ನು ಬುಕ್ ಮಾಡಲು ಗ್ರಾಹಕರು ನಿಗದಿತ ಮುಖ್ಯ ಅಂಚೆ ಕಚೇರಿಗಳಿಗೆ (HeadPostOffices) ತೆರಳಬೇಕಾಗುತ್ತಿತ್ತು. ಈಗ ಈ ಸೌಲಭ್ಯವನ್ನು ಕಲಬುರಗಿ ಅಂಚೆ ವಿಭಾಗದ ಮುಖ್ಯ ಅಂಚೆ ಕಚೇರಿ ಸೇರಿದಂತೆ 39 ಉಪ ಅಂಚೆ ಕಚೇರಿ ಮತ್ತು ಎಲ್ಲಾ 320 ಶಾಖಾ ಅಂಚೆಕಚೇರಿಗಳಿಗೂ ವಿಸ್ತರಿಸಿರುವುದರಿಂದ,ಗ್ರಾಹಕರು ತಮ್ಮ ವಾಸಸ್ಥಳ ಅಥವಾ ವ್ಯಾಪಾರ ಸ್ಥಳಕ್ಕೆ ಸಮೀಪದಲ್ಲಿರುವ ಉಪ ಹಾಗೂ ಶಾಖಾ ಅಂಚೆ ಕಚೇರಿಗಳಲ್ಲಿಯೇ ಅಂತರರಾಷ್ಟ್ರೀಯ ಅಂಚೆ ಸೇವೆಗಳನ್ನು ಪಡೆಯಬಹುದಾಗಿದೆ.

# 10ರೊಳಗೆ ಎಲ್ಲ ಕಾಲುವೆಗಳಿಗೆ ನೀರು ಹರಿಸಿ: ತುಂಗಭದ್ರಾ ರೈತ ಸಂಘದ ಆಗ್ರಹ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ




ತುಂಗಭದ್ರಾ ಜಲಾಶಯದಿಂದ ಆಗಸ್ಟ್ 10ರೊಳಗೆ ಎಲ್ಲಾ ನೀರಾವರಿ ಕಾಲುವೆಗಳಿಗೆ ನೀರು ಹರಿಸಿ, ಮುಂಗಾರು ಹಂಗಾಮಿನ ಕೃಷಿ ಚಟುವಟಿಕೆಗಳಿಗೆ ಅನುಕೂಲ ಕಲ್ಪಿಸಬೇಕು ಎಂದು ತುಂಗಭದ್ರಾ ರೈತ ಸಂಘದ ರಾಜ್ಯಾಧ್ಯಕ್ಷ ದರೂರ್ ಪುರುಷೋತಮ್ ಗೌಡ ಆಗ್ರಹಿಸಿದರು.ನಗರದ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿರುವ ಪತ್ರಿಕಾ ಭವನದಲ್ಲಿ ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರ ತುರ್ತಾಗಿ ನೀರಾವರಿ ಸಲಹಾ ಸಮಿತಿ (ಐಸಿಸಿ) ಸಭೆ ಕರೆಯಬೇಕು. ರಾಜ್ಯದ ಮುಖ್ಯಮಂತ್ರಿ ಹಾಗೂ ಜಲಸಂಪನ್ಮೂಲ ಸಚಿವ ಡಿ.ಕೆ. ಶಿವಕುಮಾರ್ ಮತ್ತು ತುಂಗಭದ್ರಾ ಮಂಡಳಿ ಅಧಿಕಾರಿಗಳು ರೈತರ ಹಿತದೃಷ್ಟಿಯಿಂದ ತಕ್ಷಣ ನಿರ್ಧಾರ ಕೈಗೊಂಡು ಕಾಲುವೆಗಳಿಗೆ ನೀರು ಹರಿಸಲು ಕ್ರಮವಹಿಸಬೇಕು ಎಂದು ಒತ್ತಾಯಿಸಿದರು.

ರಾಜ್ಯದ ವಿವಿಧ ಭಾಗಗಳಲ್ಲಿ ಉತ್ತಮ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ರೈತರು ಭತ್ತ ಸೇರಿದಂತೆ ವಿವಿಧ ಬೆಳೆಗಳ ನಾಟಿ ಹಾಗೂ ಬಿತ್ತನೆ ಕಾರ್ಯ ಆರಂಭಿಸಿದ್ದಾರೆ. ಇಂತಹ ಸಂದರ್ಭದಲ್ಲಿ ಕಾಲುವೆಗಳಿಗೆ ನೀರು ಹರಿಸದಿದ್ದರೆ ರೈತರು ಸಂಕಷ್ಟಕ್ಕೆ ಸಿಲುಕುವ ಸಾಧ್ಯತೆ ಇದ್ದು, ಬೆಳೆಗಳ ಮೇಲೂ ಪ್ರತಿಕೂಲ ಪರಿಣಾಮ ಬೀಳಲಿದೆ. ಆದ್ದರಿಂದ ಯಾವುದೇ ವಿಳಂಬ ಮಾಡದೆ ನೀರಾವರಿ ನೀರು ಬಿಡುಗಡೆ ಮಾಡಬೇಕು ಎಂದು ಅವರು ಆಗ್ರಹಿಸಿದರು.ಇದೇ ವೇಳೆ ತುಂಗಭದ್ರಾ ಜಲಾನಯನ ಪ್ರದೇಶದಲ್ಲಿ ಸುರಿಯುತ್ತಿರುವ ಮಳೆಯಿಂದ ಜಲಾಶಯಕ್ಕೆ ಒಳಹರಿವು ದಿನದಿಂದ ದಿನಕ್ಕೆ ಹೆಚ್ಚಳವಾಗುತ್ತಿದೆ. ಆಗಸ್ಟ್ 1ರಂದು ಜಲಾಶಯದ ನೀರಿನ ಮಟ್ಟ 1610.56 ಅಡಿ ಇದ್ದು, 38.688 ಟಿಎಂಸಿ ನೀರು ಸಂಗ್ರಹವಾಗಿತ್ತು. ಕಳೆದ 24 ಗಂಟೆಗಳ ಸರಾಸರಿ ಒಳಹರಿವು 22,051 ಕ್ಯೂಸೆಕ್, ತತ್ಕ್ಷಣದ ಒಳಹರಿವು 24,968 ಕ್ಯೂಸೆಕ್ ಹಾಗೂ ಹೊರಹರಿವು 3,003 ಕ್ಯೂಸೆಕ್ ದಾಖಲಾಗಿತ್ತು.ಆಗಸ್ಟ್ 2ರಂದು ನೀರಿನ ಮಟ್ಟ 1611.59 ಅಡಿಗೆ ಏರಿಕೆಯಾಗಿದ್ದು, ಸಂಗ್ರಹ 40.805 ಟಿಎಂಸಿಗೆ ಹೆಚ್ಚಳವಾಯಿತು. ಕಳೆದ 24 ಗಂಟೆಗಳ ಸರಾಸರಿ ಒಳಹರಿವು 25,811 ಕ್ಯೂಸೆಕ್, ತತ್ಕ್ಷಣದ ಒಳಹರಿವು 24,468 ಕ್ಯೂಸೆಕ್ ಹಾಗೂ ಹೊರಹರಿವು 1,195 ಕ್ಯೂಸೆಕ್ ದಾಖಲಾಗಿತ್ತು. ತುಂಗಾ ನದಿಯಿಂದ 70,556 ಕ್ಯೂಸೆಕ್ ನೀರು ಹರಿಯುತ್ತಿತ್ತು.ಆಗಸ್ಟ್ 3ರಂದು ಜಲಾಶಯದ ನೀರಿನ ಮಟ್ಟ ಮತ್ತಷ್ಟು ಏರಿಕೆಯಾಗಿ 1613.16 ಅಡಿ ತಲುಪಿದ್ದು, ನೀರಿನ ಸಂಗ್ರಹ 44.190 ಟಿಎಂಸಿಗೆ ಏರಿಕೆಯಾಗಿದೆ. ಕಳೆದ 24 ಗಂಟೆಗಳ ಸರಾಸರಿ ಒಳಹರಿವು 40,705 ಕ್ಯೂಸೆಕ್ ಆಗಿದ್ದರೆ, ತತ್ಕ್ಷಣದ (ಲೈವ್) ಒಳಹರಿವು 57,785 ಕ್ಯೂಸೆಕ್ ದಾಖಲಾಗಿದೆ. ಹೊರಹರಿವು 1,390 ಕ್ಯೂಸೆಕ್ ಆಗಿದ್ದು, ತುಂಗಾ ನದಿಯಿಂದ 87,841 ಕ್ಯೂಸೆಕ್ ನೀರು ಹರಿಯುತ್ತಿದೆ.ಜಲಾಶಯಕ್ಕೆ ಹೆಚ್ಚುತ್ತಿರುವ ಒಳಹರಿವು ಮತ್ತು ಸಂಗ್ರಹವನ್ನು ಪರಿಗಣಿಸಿ ರೈತರ ಹಿತದೃಷ್ಟಿಯಿಂದ ವಿಳಂಬವಿಲ್ಲದೆ ನೀರಾವರಿ ಕಾಲುವೆಗಳಿಗೆ ನೀರು ಬಿಡುಗಡೆ ಮಾಡಬೇಕು ಎಂದು ದರೂರ್ ಪುರುಷೋತಮ್ ಗೌಡ ಸರ್ಕಾರವನ್ನು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮೋಕಾ ಸಣ್ಣ ಅಂಜಿನಪ್ಪ, ಶ್ರೀಧರ್, ವೀರಣಗೌಡ, ವೀರಭದ್ರ, ರಾಜಶೇಖರ್, ಬಸವರಾಜ್ ಸ್ವಾಮಿ, ಸಾಗರ್ ಗೌಡ, ಭೀಮಯ್ಯ ಸೇರಿದಂತೆ ರೈತ ಮುಖಂಡರು ಹಾಗೂ ರೈತರು ಉಪಸ್ಥಿತರಿದ್ದರು.

## ವಿಕಸಿತ ಭಾರತಕ್ಕಾಗಿ ನಶಾ ಮುಕ್ತ ಯುವ ಸ್ಪರ್ಧೆ



**ಬಾಗಲಕೋಟೆ:** ಭಾರತ ಸರ್ಕಾರದ ಯುವಜನ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯದ ವತಿಯಿಂದ ಆಯೋಜಿಸಲಾಗಿದ್ದ 'ವಿಕಸಿತ ಭಾರತಕ್ಕಾಗಿ ನಶಾ ಮುಕ್ತ ಯುವ' ಜಿಲ್ಲಾ ಮಟ್ಟದ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಬಸವೇಶ್ವರ ಕಲಾ ಮಹಾವಿದ್ಯಾಲಯದ ಪಿಯುಸಿ ವಿಭಾಗದ ವಿದ್ಯಾರ್ಥಿಗಳು ಅತ್ಯುತ್ತಮ ಸಾಧನೆ ಮಾಡಿ ರಾಜ್ಯ ಮಟ್ಟದ ಸ್ಪರ್ಧೆಗಳಿಗೆ ಆಯ್ಕೆಯಾಗಿದ್ದಾರೆ.

ಸಮೂಹ ಜಾನಪದ ಗೀತೆ ವಿಭಾಗದಲ್ಲಿ ಬಾಲಮ್ಮ ದಿಬ್ಬದಮನಿ ಮತ್ತು ತಂಡ ಪ್ರಥಮ ಸ್ಥಾನ ಪಡೆದುಕೊಂಡಿದೆ. ಸಮೂಹ ನೃತ್ಯ ವಿಭಾಗದಲ್ಲಿ ಪ್ರಿಯಾಂಕ ಇಟಗಿ ಮತ್ತು ತಂಡ ಪ್ರಥಮ ಸ್ಥಾನ, ರೀಲ್ಸ್ ಮೇಕಿಂಗ್ ವಿಭಾಗದಲ್ಲಿ ಸಂತೋಷ ಮಾದರ ಮತ್ತು ತಂಡ ದ್ವಿತೀಯ ಸ್ಥಾನ ಪಡೆದು ಕಾಲೇಜಿನ ಕೀರ್ತಿಯನ್ನು ಹೆಚ್ಚಿಸಿದ್ದಾರೆ.

ಜಿಲ್ಲಾ ಮಟ್ಟದ ಸಾಧನೆಯ ವಿದ್ಯಾರ್ಥಿಗಳು ಬೆಂಗಳೂರಿನಲ್ಲಿ ನಡೆಯಲಿರುವ ರಾಜ್ಯ ಮಟ್ಟದ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಬಾಗಲಕೋಟೆ ಜಿಲ್ಲೆಯನ್ನು ಪ್ರತಿನಿಧಿಸಲಿದ್ದಾರೆ. ವಿದ್ಯಾರ್ಥಿಗಳ ಈ ಸಾಧನೆಗೆ ಬಿವಿವಿ ಸಂಘದ ಕಾರ್ಯಾಧ್ಯಕ್ಷ ವೀರಣ್ಣ ಚರಂತಿಮಠ, ಗೌರವ ಕಾರ್ಯದರ್ಶಿ ಮಹೇಶ್ ಎನ್. ಅಥಣಿ, ಕಾಲೇಜು ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷ ಗುರುಬಸವ ಸೂಳಿಭಾವಿ, ಆಡಳಿತ ಅಧಿಕಾರಿಗಳಾದ ವಿ.ಆರ್. ಶಿರೋಳ ಹಾಗೂ ಡಾ. ವಿ.ಎಸ್. ಕಟಗಿಹಳ್ಳಿಮಠ, ಪ್ರಾಚಾರ್ಯ ಎಸ್.ಆರ್. ಮೂಗನೂರಮಠ ಮತ್ತು ಪಿಯುಸಿ ವಿಭಾಗದ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳು ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದಾರೆ.

## ಹಂಪನಗೌಡ ಬಾದರ್ಲಿಗೆ ಸಚಿವ ಸ್ಥಾನ ವಂಚಿತ ಕಾಂಗ್ರೆಸ್ ಕಾರ್ಯಕರ್ತರಿಂದ ಆಕ್ರೋಶ, ಪ್ರತಿಭಟನೆ



**ಸಿಂಧನೂರು:** ಐದು ಬಾರಿ ಶಾಸಕರಾಗಿ ಆಯ್ಕೆಯಾಗಿರುವ ಹಿರಿಯ



ಅನುಭವಿ ರಾಜಕಾರಣಿ ಹಾಗೂ ಕಾಂಗ್ರೆಸ್ ಪಕ್ಷದ ನಿಷ್ಠಾವಂತ ನಾಯಕ ಹಂಪನಗೌಡ ಬಾದರ್ಲಿ ಅವರಿಗೆ ಸಚಿವ ಸ್ಥಾನ ಕೈ ತಪ್ಪಿರುವುದು ಶಾಸಕರ ತೀವ್ರ ಅಸಮಾಧಾನಕ್ಕೂ ಹಾಗೂ ಕಾರ್ಯಕರ್ತರ ಆಕ್ರೋಶಕ್ಕೂ ಕಾರಣವಾಗಿದೆ.

ಕಳೆದ ಸಚಿವ ಸಂಪುಟ ವಿಸ್ತರಣೆಯ ಸಂದರ್ಭದಲ್ಲಿ ಹಂಪನಗೌಡ ಬಾದರ್ಲಿ ಅವರಿಗೆ ಸಚಿವ ಸ್ಥಾನ ಸಿಗಲಿದೆ ಎಂಬ ಬಲವಾದ ನಿರೀಕ್ಷೆಯಿತ್ತು. ಆದರೆ, ಅನಿರೀಕ್ಷಿತವಾಗಿ ಎನ್.ಎಸ್. ಬೋಸರಾಜ್ ಅವರಿಗೆ ಸಚಿವ ಸ್ಥಾನ ನೀಡಲಾಗಿದ್ದು, ರಾಯಚೂರು ಜಿಲ್ಲಾ ಉಸ್ತುವಾರಿಯನ್ನು ಬೇರೆಯವರಿಗೆ ವಹಿಸಲಾಗಿತ್ತು. ನಂತರ ಸ್ಥಳೀಯ ನಾಯಕರು ಹೈಕಮಾಂಡ್ ಮೇಲೆ ಒತ್ತಡ ತಂದು, ಶರಣಪ್ರಕಾಶ ಪಾಟೀಲ್ ಅವರಿಗೆ ಉಸ್ತುವಾರಿ ಜವಾಬ್ದಾರಿ ಸಿಗುವಂತೆ ಮಾಡಿದ್ದರು.

ಅಂದಿನಿಂದಲೂ ಜಿಲ್ಲೆಯಲ್ಲಿ ನಾಲ್ವರು ಶಾಸಕರು ಮತ್ತು ಮೂವರು ವಿಧಾನ ಪರಿಷತ್ ಸದಸ್ಯರು ಇದ್ದರೂ, ಅವರ ನಡುವೆ ಸಮನ್ವಯದ ಕೊರತೆ ಎದ್ದು ಕಾಣುತ್ತಿತ್ತು. ಇತರೆ ಜಿಲ್ಲೆಗಳಲ್ಲಿ ಅನುಸರಿಸಿದ ರಾಜಕೀಯ ಮಾರ್ಗಗಳನ್ನು ಇಲ್ಲಿ ಅಳವಡಿಸಿಕೊಳ್ಳದೆ, ಜಿಲ್ಲಾ ಕಾಂಗ್ರೆಸ್‌ನಲ್ಲಿ ಎರಡು ಬಣಗಳು ಸಚಿವ ಸ್ಥಾನಕ್ಕಾಗಿ ತೀವ್ರ ಪೈಪೋಟಿ ನಡೆಸುತ್ತ ಬಂದಿರುವುದು ಗುಟ್ಟಾಗಿ ಉಳಿದಿಲ್ಲ.

ತಮ್ಮ ನೆಚ್ಚಿನ ನಾಯಕರಿಗೆ ಸಚಿವ ಸ್ಥಾನ ದೊರೆಯಬೇಕೆಂದು ಆಗ್ರಹಿಸಿ ಕಾರ್ಯಕರ್ತರು ಪಾದಯಾತ್ರೆ, ಬೈಕ್ ರ್ಯಾಲಿ, ವಿವಿಧ ಹೋರಾಟಗಳನ್ನು ನಡೆಸುವುದಲ್ಲದೆ, ದೇವಸ್ಥಾನಗಳಲ್ಲಿ ವಿಶೇಷ ಪೂಜೆಗಳನ್ನು ಸಲ್ಲಿಸಿ ಹೈಕಮಾಂಡ್ ಗಮನ ಸೆಳೆಯುವ ಪ್ರಯತ್ನ ಮಾಡಿದ್ದರು. ಆದರೆ, ಅಂತಿಮವಾಗಿ ರಾಯಚೂರು ಜಿಲ್ಲೆಗೆ ಪ್ರಮುಖ ಸಚಿವ ಸ್ಥಾನ ಸಿಗದಿರುವುದು ರಾಜ್ಯ ಸರ್ಕಾರ ಜಿಲ್ಲೆಯನ್ನು ಕಡೆಗಣಿಸಿದೆ ಎಂಬ ಭಾವನೆ ಮೂಡಿಸಿದೆ ಎಂದು ಸಾರ್ವಜನಿಕ ವಲಯದಲ್ಲಿ ಚರ್ಚೆಯಾಗುತ್ತಿದೆ. ಶಾಸಕ ಹಂಪನಗೌಡ ಬಾದರ್ಲಿ ಅವರಿಗೆ ಸಚಿವ ಸ್ಥಾನ ಕೈ ತಪ್ಪಿದ್ದನ್ನು ಖಂಡಿಸಿ ಕಾಂಗ್ರೆಸ್ ಕಾರ್ಯಕರ್ತರು ಬೀದಿಗಿಳಿದು ಪ್ರತಿಭಟನೆ ನಡೆಸುತ್ತಿದ್ದು, ಮುಂಬರುವ ದಿನಗಳಲ್ಲಿ ಈ ಬೆಳವಣಿಗೆ ಯಾವ ಹಂತಕ್ಕೆ ತಿರುಗಲಿದೆ ಎಂಬುದನ್ನು ಕಾದು ನೋಡಬೇಕಿದೆ.

## ಸುಳ್ಳು ಪ್ರಚಾರಕ್ಕೆ ಮರುಳಾಗಬೇಡಿ



**ಭಾಲ್ಕಿ:** ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆಯಡಿ 'ಬಾಂಡ್ಯಾ ಸ್ಕೀಮ್' ಅಥವಾ ಎಲೆಕ್ಟ್ರಾನಿಕ್ಸ್ ವಸ್ತುಗಳ ವಿತರಣೆ ನಡೆ–ಯುತ್ತಿದೆ ಎಂಬ ಸುದ್ದಿ ಸಂಪೂರ್ಣ ಸುಳ್ಳು ಎಂದು ಕಾರ್ಮಿಕ ಇಲಾಖೆ ಸ್ಪಷ್ಟಪಡಿಸಿದೆ.

ಸಾಮಾಜಿಕ ಜಾಲತಾಣಗಳು ಹಾಗೂ ಕೆಲ ಇಂಟರ್ನೆಟ್ ಕೇಂದ್ರಗಳ ಹೆಸರಿನಲ್ಲಿ ನಕಲಿ ಪೋಸ್ಟರ್‌ಗಳು ಹರಿದಾಡುತ್ತಿರುವ ಹಿನ್ನೆಲೆಯಲ್ಲಿ ಕಳೆದ 10–15 ದಿನಗಳಲ್ಲಿ 3,000ಕ್ಕೂ ಹೆಚ್ಚು ಅರ್ಜಿಗಳು ಸಲ್ಲಿಕೆಯಾಗಿವೆ. ಪರಿಶೀಲನೆ ನಡೆಸಿದ ಇಲಾಖೆಯ ಅಧಿಕಾರಿಗಳು ಸಾರ್ವಜನಿಕರಿಗೆ ವಾಸ್ತವ ಮಾಹಿತಿ ನೀಡಿ, ಇಂತಹ ವದಂತಿಗಳಿಗೆ ಮರುಳಾಗದಂತೆ ಮನವಿ ಮಾಡಿದ್ದಾರೆ.

ಯೋಜನೆಯಡಿ ಅಪಘಾತದಿಂದ ಮೃತಪಟ್ಟ ಫಲಾನುಭವಿಯ ನಾಮನಿರ್ದೇಶಿತರಿಗೆ ₹1 ಲಕ್ಷ ಪರಿಹಾರ, ಶಾಶ್ವತ ಅಂಗವೈಕಲ್ಯಕ್ಕೆ ಗರಿಷ್ಠ ₹1 ಲಕ್ಷ, ನೋಂದಾಯಿತ ಫಲಾನುಭವಿಯ ಮರಣದ ಸಂದರ್ಭದಲ್ಲಿ ಅಂತ್ಯಕ್ರಿಯೆ ವೆಚ್ಚಕ್ಕೆ ₹10 ಸಾವಿರ ಹಾಗೂ ಅಪಘಾತ ಚಿಕಿತ್ಸೆಗೆ ಗರಿಷ್ಠ ₹50 ಸಾವಿರ ಆಸ್ಪತ್ರೆ ವೆಚ್ಚ ಮರುಪಾವತಿ ಸೌಲಭ್ಯ ಮಾತ್ರ ಲಭ್ಯವಿದೆ ಎಂದು ಇಲಾಖೆ ತಿಳಿಸಿದೆ.

ಕಾರ್ಮಿಕ ಇಲಾಖೆ ಅಥವಾ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಮಂಡಳಿಯ ಹೆಸರಿನಲ್ಲಿ ನಕಲಿ ಪೋಸ್ಟರ್‌ಗಳು ಅಥವಾ ಸುಳ್ಳು ಯೋಜನೆಗಳನ್ನು ಪ್ರಸಾರ ಮಾಡಿ ಸಾರ್ವಜನಿಕರನ್ನು ದಾರಿ ತಪ್ಪಿಸುವವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಇಲಾಖೆ ಎಚ್ಚರಿಕೆ ನೀಡಿದೆ.

# ಶುಚಿತ್ವದ ಕೊರತೆ: ವಾರ್ಡನ್‌ಗೆ ವಾರ್ನ್ ಮಾಡಿದ ಡಿಸಿ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ಜಿಲ್ಲೆಯ ಹುನಗುಂದ ತಾಲೂಕಿನ ಸೂಳೇಭಾವಿ ಗ್ರಾಮದ ಬಿಸಿಎಂ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯಕ್ಕೆ ಜಿಲ್ಲಾಧಿಕಾರಿ ಸಂಗಪ್ಪ ಶನಿವಾರ ಅನಿರೀಕ್ಷಿತ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ವಸತಿ ನಿಲಯದಲ್ಲಿ ಕಂಡುಬಂದ ಅವ್ಯವಸ್ಥೆ, ಸ್ವಚ್ಛತೆಯ ಕೊರತೆ ಹಾಗೂ ವಿದ್ಯಾರ್ಥಿಗಳಿಗೆ ಮೂಲಭೂತ ಸೌಲಭ್ಯಗಳ ಅಭಾವ ಕಂಡು ನಿಲಯ ಮೇಲ್ವಿಚಾರಕರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರಲ್ಲದೇ,

ಪರಿಶೀಲನೆಯ ವೇಳೆ ವಸತಿ ನಿಲಯದ ಶೌಚಾಲಯಗಳಲ್ಲಿ ಸಮರ್ಪಕ ಸ್ವಚ್ಛತೆ ಇಲ್ಲದಿರುವುದು ಕಂಡು ವಿದ್ಯಾರ್ಥಿಗಳ ಆರೋಗ್ಯದ ದೃಷ್ಟಿಯಿಂದ ಶೌಚಾಲಯಗಳನ್ನು ಪ್ರತಿದಿನ ಸ್ವಚ್ಛವಾಗಿಡುವಂತೆ ನಿಲಯ ಮೇಲ್ವಿಚಾರಕರಿಗೆ ಎಚ್ಚರಿಕೆ ನೀಡಿದರು.

ಅಡುಗೆಮನೆ ಪರಿಶೀಲಿಸಿದ ಸಂದರ್ಭದಲ್ಲಿ ಮೆನು ಪ್ರಕಾರ ಆಹಾರ ತಯಾರಿಸಲಾಗುತ್ತಿಲ್ಲ ಎಂಬುದು ಗಮನಕ್ಕೆ ಬಂದಿತು. ಅಲ್ಲದೆ ಅಡುಗೆ ಕೋಣೆಯಲ್ಲಿ ಯಾವುದೇ ರೀತಿಯ ತರಕಾರಿಗಳ ದಾಸ್ತಾನು ಇಲ್ಲದಿರುವುದನ್ನೂ ಜಿಲ್ಲಾಧಿಕಾರಿಗಳು ಪ್ರಶ್ನಿಸಿ, ವಿದ್ಯಾರ್ಥಿಗಳಿಗೆ ನಿಗದಿತ ಮೆನು ಪ್ರಕಾರವೇ ಪೌಷ್ಟಿಕ ಆಹಾರ ಒದಗಿಸಬೇಕು ಎಂದು ಸೂಚಿಸಿದರು.

ವಿದ್ಯಾರ್ಥಿಗಳ ಹಾಜರಾತಿ ಪರಿಶೀಲಿಸಿದ



ವೇಳೆ ದಾಖಲೆಗಳಲ್ಲಿ ಹಾಗೂ ವಾಸ್ತವ ಹಾಜರಾತಿಯಲ್ಲಿ ವ್ಯತ್ಯಾಸ ಕಂಡುಬಂದಿದ್ದು, ಹಾಜರಾತಿ ನಿರ್ವಹಣೆಯಲ್ಲಿನ ಲೋಪ ಕಂಡು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ಹಾಜರಾತಿ ದಾಖಲೆಯನ್ನು ನಿಯಮಾನುಸಾರ ನಿರ್ವಹಿಸುವಂತೆ ಸೂಚಿಸಿದರು. ಕಿಟಕಿಗಳಿಗೆ ಸೊಳ್ಳೆ ತಡೆ ಪರದೆ ಅಳವಡಿಸದಿರುವುದು ಹಾಗೂ ಕೊಠಡಿಗಳಲ್ಲಿನ ಸೀಲಿಂಗ್ ಫ್ಯಾನ್‌ಗಳು ಮಕ್ಕಳ ಸುರಕ್ಷತೆಗೆ ಧಕ್ಕೆ ಉಂಟುಮಾಡುವ ರೀತಿಯಲ್ಲಿ ಅಳವಡಿಸಲಾಗಿರುವುದನ್ನು ಕಂಡು ಎಲ್ಲ ಸಮಸ್ಯೆಗಳನ್ನು ತಕ್ಷಣವೇ ಸರಿಪಡಿಸಿ, ವಿದ್ಯಾರ್ಥಿಗಳಿಗೆ ಸುರಕ್ಷಿತ ಹಾಗೂ ಉತ್ತಮ ವಾತಾವರಣ ಕಲ್ಪಿಸುವಂತೆ ಜಿಲ್ಲಾಧಿಕಾರಿಗಳು ವಾರ್ಡನ ಗೋಪಾಲ ರಾಠೋಡ ಅವರಿಗೆ ನಿರ್ದೇಶನ ನೀಡಿದರು.

ವಸತಿ ನಿಲಯದಲ್ಲಿ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿರುವ ಸೌಲಭ್ಯಗಳ ಕುರಿತು ಸಮಗ್ರ ವರದಿ ಸಲ್ಲಿಸುವಂತೆ ವಾರ್ಡನಗೆ ಸೂಚಿಸಿದ ಜಿಲ್ಲಾಧಿಕಾರಿಗಳು, ವಿದ್ಯಾರ್ಥಿಗಳ ಶಿಕ್ಷಣ, ಆರೋಗ್ಯ ಹಾಗೂ ಸುರಕ್ಷತೆಗೆ ಯಾವುದೇ ರೀತಿಯ ನಿರ್ಲಕ್ಷ್ಯ ಸಹಿಸುವುದಿಲ್ಲ ಎಂದು ಎಚ್ಚರಿಕೆ ನೀಡಿದರು. ವಸತಿ ನಿಲಯದ ನಿರ್ವಹಣೆಯಲ್ಲಿ ಸುಧಾರಣೆ ತರದಿದ್ದರೆ ಸಂಬಂಧಿಸಿದವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಇದಕ್ಕೂ ಪೂರ್ವದಲ್ಲಿ ತಳ್ಳಿಕೇರಿ ಗ್ರಾಮದ ಹತ್ತಿರವಿರುವ ಸೂಳೇಭಾವಿ ಕಿತ್ತೂರರಾಣಿ ಚೆನ್ನಮ್ಮ ವಸತಿ ಶಾಲೆಗೆ ಭೇಟಿ ನೀಡಿದ ಜಿಲ್ಲಾಧಿಕಾರಿಗಳು ಪ್ರಾರ್ಥನೆ ಮಾಡುತ್ತಿರುವ ಮಕ್ಕಳ ಕಡೆ ತೆರಳಿ ವಸತಿ ನಿಲಯದಲ್ಲಿ ನೀಡಲಾಗುತ್ತಿರುವ ಮೂಲಭೂತ ಸೌಲಭ್ಯ ಹಾಗೂ ಮೇನುವಿನ ಪ್ರಕಾರ ಊಟ ನೀಡುತ್ತಿರುವ ಬಗ್ಗೆ ವಿಚಾರಿಸಿದರು. ನಂತರ ನಿಲಯ ಆವರಣದಲ್ಲಿರುವ ಕಿಚನ್ ಗಾರ್ಡನ್ ವೀಕ್ಷಿಸಿದ ಅವರು ಇದನ್ನು ಇನ್ನಷ್ಟು ವಿಸ್ತರಿಸಲು ಸಲಹೆ ನೀಡಿದರು. ವಸತಿ ನಿಲಯ ಒಳಗಡೆ ಪ್ರವೇಶಿಸಿ ಹಾಜರಾತಿ, ಅಡುಗೆ ಮನೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಆಹಾರ ಧಾನ್ಯಗಳ ದಾಸ್ತಾನು, ಕಾಯಿ ಪಲ್ಲೆಗಳನ್ನು ವೀಕ್ಷಣೆ ಮಾಡಿದರು. ಸ್ನಾನದ ಕೋಣೆಯ ನೀರು ಪೈಪ್‌ನಲ್ಲಿ ಸೋರುತ್ತಿರುವುದನ್ನು ಕಂಡು ಕೂಡಲೇ ದುರಸ್ಥಿ ಮಾಡಿಸುವಂತೆ ವಾರ್ಡನ್ ಪೂರ್ಣಿಮಾ ಕಟ್ಟಿಮನಿ ಅವರಿಗೆ ಸೂಚಿಸಿದರು.

ಭೇಟಿ ಸಮಯದಲ್ಲಿ ಜಂಟಿ ಕೃಷಿ ನಿರ್ದೇಶಕ ಟಿ.ಎಸ್.ರುದ್ರೇಶಪ್ಪ, ತೋಟಗಾರಿಕೆ ಇಲಾಖೆಯ ಜಂಟಿ ನಿರ್ದೇಶಕ ರವೀಂದ್ರ ಹಕಾಟಿ, ಅಮೀನಗಡ ಹೋಬಳಿಯ ಕಂದಾಯ ನಿರೀಕ್ಷಕ ಡಿ.ಎಸ್.ಯತ್ನಟ್ಟಿ, ತಾಲೂಕಾ ಸಮಾಜ ಕಲ್ಯಾಣಾಧಿಕಾರಿ ಎಂ.ಎಚ್. ಕಟ್ಟಿಮನಿ, ನಿಲಯ ಮೇಲ್ವಿಚಾರಕಿ ಪೂರ್ಣಿಮಾ ಕಟ್ಟಿಮನಿ ಸೇರಿದಂತೆ ಇತರರು ಇದ್ದರು.

# ಹಾನಿಗೊಳಗಾದ ಬೆಳೆಗಳ ಕ್ಷೇತ್ರ ವೀಕ್ಷಣೆ ಮಾಡಿದ ಜಿಲ್ಲಾಧಿಕಾರಿ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ಜಿಲ್ಲೆಯಲ್ಲಿ ಮಳೆಯ ಕೊರತೆಯಿಂದ ಉಂಟಾಗಿರುವ ಬರ ಪರಿಸ್ಥಿತಿಯ ಹಿನ್ನಲೆಯಲ್ಲಿ ಜಿಲ್ಲಾಧಿಕಾರಿ ಸಂಗಪ್ಪ ಅವರು ಜಿಲ್ಲೆಯ ವಿವಿಧ ಗ್ರಾಮಗಳಿಗೆ ಶನಿವಾರ ಭೇಟಿ ನೀಡಿ ಬೆಳೆ ಹಾನಿಯ ಅಧ್ಯಯನ ನಡೆಸಿದರು.

ಕೃಷಿ, ತೋಟಗಾರಿಕೆ ಹಾಗೂ ಕಂದಾಯ ಇಲಾಖೆಯ ಅಧಿಕಾರಿಗಳೊಂದಿಗೆ ಬಾಗಲಕೋಟೆ ತಾಲೂಕಿನ ಶಿರೂರ ವ್ಯಾಪ್ತಿಯಲ್ಲಿ ಬರುವ ಸಿದ್ದಪ್ಪ ಹರಣಶಿಕಾರಿ ಅವರ ಜಮೀನಿನಲ್ಲಿ ಬೆಳೆದ ಹೆಸರು, ಗುಳೇದಗುಡ್ಡ ತಾಲೂಕಾ ವ್ಯಾಪ್ತಿಯ ಬೂದಿನಗಡ ಗ್ರಾಮದಲ್ಲಿರುವ ಚಂದ್ರಶೇಖರ ಲಾಯದಗುಂದಿ ಅವರ ಜಮೀನಿನಲ್ಲಿ ಬೆಳೆಯಲಾದ ಸೂರ್ಯಕಾಂತಿ ಬೆಳೆ, ರಾಯಪ್ಪ ನಿಂಬಲಗುಂದಿ ಅವರ ಬೆಳೆದ ತೊಗರಿ ಬೆಳೆ ಹಾಗೂ ಪಾದನಕಟ್ಟಿ ಗ್ರಾಮದ ಬಸಪ್ಪ ಕಾಳಪ್ಪ ಕುಂಬಾರ ಬೆಳೆ ತೊಗರಿ ಹಾಗೂ ಶ್ರೀಕಾಂತ ಭೀಮನಗಡ ಅವರ ಸೂರ್ಯಕಾಂತಿ



ಬೆಳೆಗಳನ್ನು ವೀಕ್ಷಣೆ ಮಾಡಿದರು.

ಕ್ಷೇತ್ರಭೇಟಿ ಸಂದರ್ಭದಲ್ಲಿ ಮಳೆಯ ಅಭಾವದಿಂದ ಹಾನಿಗೊಳಗಾಗುತ್ತಿರುವ ಬೆಳೆಗಳನ್ನು ಪರಿಶೀಲಿಸಿ ಹಾನಿಯ ಪ್ರಮಾಣವನ್ನು ವೀಕ್ಷಿಸಿದರು. ಈ ವೇಳೆ ರೈತರೊಂದಿಗೆ ನೇರವಾಗಿ ಮಾತುಕತೆ ನಡೆಸಿ, ಅವರು ಎದುರುಸುತ್ತಿರುವ ಸಮಸ್ಯೆಗಳು ಹಾಗೂ ಬೆಳೆ ನಷ್ಟದ ಕುರಿತು ಮಾಹಿತಿ ಪಡೆದುಕೊಂಡರು. ಬೆಳೆ ಹಾನಿಯ ಸಮಗ್ರ ಮಾಹಿತಿ ದಾಖಲಿಸಿಕೊಂಡ ಜಿಲ್ಲಾಧಿಕಾರಿಗಳು, ವಾಸ್ತವ ಸ್ಥಿತಿಗತಿಗಳ ಕುರಿತು ಸ್ಥಳದಲ್ಲಿದ್ದ ಇನ್ಸೂರೆನ್ಸ್ ಕಂಪನಿಯ ಪ್ರತಿನಿಧಿಗಳಿಗೆ ತಿಳಿಸಿದರು. ರೈತರಿಗೆ ಸಿಗಬೇಕಾದ ನೆರವು ಹಾಗೂ ಪರಿಹಾರ ಕ್ರಮಗಳ ಕುರಿತು ಅಗತ್ಯ ಪ್ರಸ್ತಾವನೆ ಸಲ್ಲಿಸಲಾಗುವುದೆಂದು ತಿಳಿಸಿದರು.

ನಂತರ ಹುನಗುಂದ ತಾಲೂಕಿನ ರಕ್ಕಸಗಿ ಗ್ರಾಮ ವ್ಯಾಪ್ತಿಯ ಬೆಳೆಹಾನಿಗೊಳಗಾದ ಹೆಸರು, ತೊಗರಿ ಹಾಗೂ ಸೂಳೇಭಾವಿ ಗ್ರಾಮ ವ್ಯಾಪ್ತಿಯ ವಿವಿಧ ಜಮೀನುಗಳಿಗೆ ಭೇಟಿ ನೀಡಿ ಮಳೆಯ ಕೊರತೆಯಿಂದ ಹಾನಿಗೊಳಗಾದ ತೊಗರಿ ಬೆಳೆಯನ್ನು ವೀಕ್ಷಣೆ ಮಾಡಿ, ರೈತರಿಂದ ನೇರವಾಗಿ ಸಮಸ್ಯೆಗಳನ್ನು ಆಲಿಸಿದರು, ರೈತರಿಗೆ ಬೇಕಾದ ಕಂಪನಿಗಳ ಬಿತ್ತನೆ ಬೀಜಗಳು ಆರ್.ಎಸ್.ಕೆ.ಗಳಲ್ಲಿ ಸಮಯಕ್ಕೆ ಸರಿಯಾಗಿ ದೊರೆಯುತ್ತಿಲ್ಲ. ಇದರಿಂದ ಹೆಚ್ಚಿನ ಬೆಳೆಗೆ ಖಾಸಗಿ ಮಾರಾಟಗಾರರಿಂದ ಪಡೆಯಬೇಕಾಗುತ್ತದೆ ಎಂದು ತಿಳಿಸಿದಾಗ ಸಮಯಕ್ಕೆ ಸರಿಯಾಗಿ ಬೀಜಗಳ ವಿತರಣೆ ಕ್ರಮಕೈಗೊಳ್ಳಲು ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ಸೂಚಿಸಿದರು.

ಕ್ಷೇತ್ರಭೇಟಿ ಸಂದರ್ಭದಲ್ಲಿ ಜಂಟಿ ಕೃಷಿ ನಿರ್ದೇಶಕ ಟಿ.ಎಸ್.ರುದ್ರೇಶಪ್ಪ, ತೋಟಗಾರಿಕೆ ಇಲಾಖೆಯ ಜಂಟಿ ನಿರ್ದೇಶಕ ರವೀಂದ್ರ ಹಕಾಟಿ, ಕೃಷಿ ಇಲಾಖೆಯ ಬಾಗಲಕೋಟೆ ವಿಭಾಗದ ಉಪನಿರ್ದೇಶಕ ಅಗಸನಾಳ, ಗುಳೇದಗುಡ್ಡ ತಹಶೀಲ್ದಾರ ಶಿವಾನಂದ ಬೊಮ್ಮನ್ನವರ, ಎಸ್.ಬಿ.ಐ ಜನರಲ್ ಇನ್ಸೂರನ್ಸ್ ಕಂಪನಿಯ ಜಿಲ್ಲಾ ವ್ಯವಸ್ಥಾಪಕ ಜನಾರ್ಧನ ತಿವಾರಿ, ಅಮೀನಗಡ ಹೋಬಳಿ ಕಂದಾಯ ನಿರೀಕ್ಷಕ ಡಿ.ಎಸ್.ಯತ್ನಟ್ಟಿ, ಗ್ರಾಮ ಆಡಳಿತಾಧಿಕಾರಿ ಸಚೀನ ರಾಠೋಡ ಸೇರಿದಂತೆ ಕೃಷಿ, ತೋಟಗಾರಿಕೆ ಇಲಾಖೆಯ ತಾಲೂಕಾ ಮಟ್ಟದ ಅಧಿಕಾರಿಗಳು ಇದ್ದರು.

# ನಿವೃತ್ತ ಪ್ರಾಚಾರ್ಯ ಬಾಗೇವಾಡಿ ದಂಪತಿಗೆ ಸನ್ಮಾನ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ಜಿಲ್ಲೆಯ ಹುನಗುಂದ ತಾಲೂಕಿನ ಕಮತಗಿಯ ಹುಚ್ಚೇಶ್ವರ ಪದವಿ ಪೂರ್ವ ಕಾಲೇಜಿನಲ್ಲಿ 34 ವರ್ಷಗಳಿಂದ ಶಿಕ್ಷಕ ಮತ್ತು ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿದ ಎಸ್.ವ್ಹಿ.ಬಾಗೇವಾಡಿ ಜುಲೈ 30 ರಂದು ಸೇವಾ ನಿವೃತ್ತಿ ಹೊಂದಿದರು.

ಈ ಸಂಬಂಧ ಸಂಸ್ಥೆಯಲ್ಲಿ ನಡೆದ ಅಭಿನಂದನಾ ಸಮಾರಂಭದ ದಿವ್ಯ ಸಾನಿಧ್ಯ ವಹಿಸಿ ಬಾಗೇವಾಡಿ ದಂಪತಿಗಳನ್ನು ಸನ್ಮಾನಿಸಿದ ಹುಚ್ಚೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾಗಿರುವ ಪೂಜ್ಯ ಹೊಳೆ ಹುಚ್ಚೇಶ್ವರ ಮಹಾಸ್ವಾಮಿಗಳು, ಬಾಗೇವಾಡಿ ಅವರು ಸುದೀರ್ಘ ಅನುಭವದ ಮೂಲಕ ಕಾಲೇಜಿನ ಶೈಕ್ಷಣಿಕ ಪ್ರಗತಿ, ಮೂಲಸೌಕರ್ಯ ಅಭಿವೃದ್ಧಿ ಹಾಗೂ ವಿದ್ಯಾರ್ಥಿಗಳ ಗುಣಮಟ್ಟದ ಶಿಕ್ಷಣಕ್ಕಾಗಿ ಅಪಾರ ಕೊಡುಗೆ ನೀಡಿದ್ದಾರೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂಘದ



ಸಹ ಕಾರ್ಯದರ್ಶಿ ವಿದ್ಯಾಧರ ಮಳ್ಳಿ ಮಾತನಾಡಿ, ಬಾಗೇವಾಡಿ ಗುರುಗಳ ಸರಳತೆ, ಕಾರ್ಯನಿಷ್ಠೆ ಮತ್ತು ವಿದ್ಯಾರ್ಥಿಗಳ ಮೇಲಿದ್ದ ಪ್ರೀತಿ ಕಾಲೇಜಿಗೆ ದೊಡ್ಡ ಬಲವಾಗಿತ್ತು. ಅವರ ಸುದೀರ್ಘ ಸೇವೆ ಮತ್ತು ಸಂಸ್ಥೆಯ ಬೆಳವಣಿಗೆಗೆ ನೀಡಿದ ಕೊಡುಗೆ ಸ್ಮರಣೀಯವಾಗಿದೆ ಎಂದರು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಎಸ್.ವ್ಹಿ ಬಾಗೇವಾಡಿ, ತಮ್ಮ ವೃತ್ತಿ ಜೀವನದಲ್ಲಿ ಸಹೋದ್ಯೋಗಿಗಳು, ಆಡಳಿತ ಮಂಡಳಿ ಹಾಗೂ ವಿದ್ಯಾರ್ಥಿಗಳು ನೀಡಿದ ಪ್ರೀತಿ ಮತ್ತು ಸಹಕಾರಕ್ಕೆ ಧನ್ಯವಾದ ತಿಳಿಸಿ ಶಿಕ್ಷಣ ಕ್ಷೇತ್ರದಲ್ಲಿದ್ದು ಸಾವಿರಾರು ವಿದ್ಯಾರ್ಥಿಗಳ ಭವಿಷ್ಯ ರೂಪಿಸಲು ಸಿಕ್ಕ ಅವಕಾಶ ನನ್ನ ಭಾಗ್ಯ ಎಂದು ಭಾವುಕರಾಗಿ ಹೇಳಿದರು.

ಉಪನ್ಯಾಸಕರು, ಸಿಬ್ಬಂದಿವರ್ಗ ಹಾಗೂ ಕುಟುಂಬದ ಸದಸ್ಯರು, ನೂರಾರು ವಿದ್ಯಾರ್ಥಿಗಳು ಬಾಗೇವಾಡಿ ಅವರಿಗೆ ಶುಭ ಹಾರೈಸಿದರು. ಇದೇ ಸಂದರ್ಭದಲ್ಲಿ ಹುಚ್ಚೇಶ್ವರ ಸಂಯುಕ್ತ ಕಲಾ ಹಾಗೂ ವಾಣಿಜ್ಯ ಪದವಿ ಪೂರ್ವ ಕಾಲೇಜಿನ ನೂತನ ಪ್ರಾಚಾರ್ಯರಾಗಿರುವ ಬಿ.ಎಚ್.ಕಂಬಾಳಿಮಠ ಅವರಿಗೆ ಎಸ್.ವ್ಹಿ.ಬಾಗೇವಾಡಿ ಅಧಿಕಾರ ಹಸ್ತಾಂತರಿಸಿದರು.

ಗುಳೇದಗುಡ್ಡದ ನಿವೃತ್ತ ಉಪನ್ಯಾಸಕ ಎಂ.ಪಿ.ನೀಲಕಂಠಮಠ, ಸಂಸ್ಥೆಯ ಸದಸ್ಯರಾದ ಆರ್.ಎಸ್.ಬಾಪ್ರಿ, ಎಂ.ಬಿ.ಶಾಬಾದಿ, ಪ್ರಕಾಶ ಜವರ, ಆಡಳಿತಾಧಿಕಾರಿ ಎ.ಎಸ್.ಕಲ್ಯಾಣಶೆಟ್ಟಿ, ವಿನಾಯಕ ಹಾವೇರಿ, ಬಿ.ಎಚ್.ಕಂಬಾಳಿಮಠ ವೇದಿಕೆಯಲ್ಲಿ ಉಪಸ್ಥಿತರಿದ್ದರು.

# ಡಿಜಿಟಲ್ ತಂತ್ರಜ್ಞಾನ ಕ್ಷೇತ್ರದಲ್ಲಿ ಭಾರತಕ್ಕೆ ಅಗ್ರಸ್ಥಾನ: ಪ್ರೊ.ದೆಬಬ್ರತ ದಾಸ್

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ಡಿಜಿಟಲ್ ತಂತ್ರಜ್ಞಾನ ಕ್ಷೇತ್ರದಲ್ಲಿ ಭಾರತ ವಿಶ್ವಮಟ್ಟದಲ್ಲಿ ಅಗ್ರಸ್ಥಾನದಲ್ಲಿದೆ. ನಾವು ಇಂದು ತಂತ್ರಜ್ಞಾನದ ಬಳಕೆದಾರರಷ್ಟೇ ಅಲ್ಲದೆ, ವಿಶ್ವಕ್ಕೆ ಡಿಜಿಟಲ್ ತಂತ್ರಜ್ಞಾನದ ಮೂಲಸೌಕರ್ಯಗಳನ್ನು ನಿರ್ಮಿಸಿಕೊಡುವ ಸ್ಥಾನದಲ್ಲಿದ್ದೇವೆ ಎಂದು ಬೆಂಗಳೂರಿನ ಅಂತಾರಾಷ್ಟ್ರೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆ (ಐಐಐಟಿ)ಯ ನಿರ್ದೇಶಕ ಪ್ರೊ.ದೆಬಬ್ರತ ದಾಸ್ ಹೇಳಿದರು.

ನಗರದ ಬಸವೇಶ್ವರ ಇಂಜಿನಿಯರಿಂಗ್ ಕಾಲೇಜಿನ ನೂತನ ಸಭಾಭವನದಲ್ಲಿ ಶನಿವಾರ ನಡೆದ 2024–25ನೇ ಸಾಲಿನ ಪದವೀಧರರ 16ನೇ ಪದವಿ ಪ್ರದಾನ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಪದವಿ ಪ್ರದಾನ ಮಾಡಿ ಅವರು ಮಾತನಾಡಿದರು.

ಬೆಂಗಳೂರು ಐಐಐಟಿ ಸಂಸ್ಥೆಯ ಸಂಶೋಧನಾ ಉತ್ಪನ್ನಗಳಾದ ಎಂಓಎಸ್‌ಐಪಿ, ಓಪನ್‌ಜಿಟುಪಿ ಹಾಗೂ ಐಎನ್‌ಜಿಐ ಸೇರಿದಂತೆ ವಿವಿಧ ತಾಂತ್ರಿಕ ಕೊಡುಗೆಗಳು ವಿಶ್ವದ 130 ಕೋಟಿಗೂ ಅಧಿಕ ಜನರು ಉತ್ತಮ ಜೀವನ ನಡೆಸಲು ನೆರವಾಗಿವೆ. ಇಂತಹ ಸಾಧನೆಗಳು ದೇಶಕ್ಕೆ ಹೆಮ್ಮೆಯ ವಿಷಯವಾಗಿವೆ. ಮಾನವನ ಸಾಮರ್ಥ್ಯವನ್ನು ಮರುಪರಿಶೀಲಿಸುವ ಕೃತಕ ಬುದ್ಧಿಮತ್ತೆ(ಎಐ) ಯುಗದಲ್ಲಿ ನಾವಿದ್ದೇವೆ. ಎಐ ತಂತ್ರಜ್ಞಾನ ಪುನರಾವರ್ತನೆಯಾಗುವ ನಿತ್ಯ ಚಟುವಟಿಕೆಗಳನ್ನು ನಿರ್ವಹಿಸಲು ಹೆಚ್ಚು ಉಪಯುಕ್ತವಾಗಿದೆ. ಆದ್ದರಿಂದ ವೃತ್ತಿಪರರು ಎಐ ಬಗ್ಗೆ ಆತಂಕಗೊಳ್ಳದೆ, ಸೂಕ್ಷ್ಮ ಸಂವೇದನೆ, ಸಾಂದರ್ಭಿಕ ನಿರ್ಣಯ, ಸೂಪ್ತಪ್ರಜ್ಞೆ, ಮೂಲ ಸೃಜನಶೀಲತೆ ಹಾಗೂ ಸಂಸ್ಕಾರಯುತ ಮನಸ್ಸಿನ




ಭಾವನೆಗಳೊಂದಿಗೆ ಎಐ ತಂತ್ರಜ್ಞಾನವನ್ನು ಜಾಣ್ಮೆಯಿಂದ ಸದುಪಯೋಗಪಡಿಸಿಕೊಳ್ಳಬೇಕು ಎಂದು ಅವರು ಸಲಹೆ ನೀಡಿದರು.

ವೃತ್ತಿಪರತೆಯೊಂದಿಗೆ ನಿರಂತರ ಕಲಿಕೆ, ಆರೋಗ್ಯ, ಉತ್ತಮ ಮನೋಭಾವದೊಂದಿಗೆ ಸಾಗುವುದು ಮುಖ್ಯ, ಬಾಗಲಕೋಟೆ ಶಿಕ್ಷಣ ಪ್ರೇಮಿಗಳ ನೆಚ್ಚಿನ ತಾಣವಾಗಿದ್ದು, ಇಲ್ಲಿನ ಹಿರಿಯರು ಉತ್ತಮ ಗುಣಮಟ್ಟದ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವ ಮೂಲಕ ದೇಶದ ಉನ್ನತ ಶಿಕ್ಷಣ ಕ್ಷೇತ್ರಕ್ಕೆ ವಿಶಿಷ್ಟ ಕೊಡುಗೆ ನೀಡಿದ್ದಾರೆ. ಕಾಯಕ, ದಾಸೋಹ ಹಾಗೂ ಸಮಾನತೆ ಈ ನೆಲದ ಜೀವಾಳವಾಗಿವೆ ಎಂದು ಪ್ರೊ.ದೇಬಬ್ರತ್ ಅಭಿಪ್ರಾಯಪಟ್ಟರು.

ಬೆಂಗಳೂರು ಮೂಲದ ಕಲ್ಪತರು ಪ್ರಾಜೆಕ್ಟ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ ದಕ್ಷಿಣ ಭಾರತ ಕಾರ್ಯಾಚರಣೆ ವಿಭಾಗದ ವ್ಯವಹಾರ ಮುಖ್ಯಸ್ಥ ಜಿ.ಎಂ.ಶಾಂತಕುಮಾರ ಮಾತನಾಡಿ, ಪ್ರಚಲಿತ ಸಮಸ್ಯೆಗಳಿಗೆ ಪರಿಹಾರ ನೀಡಲು ಪ್ರಯತ್ನಿಸಿ, ಉದ್ಯಮಕ್ಷೇತ್ರ ವಿನೂತನವಾಗಿ, ನಿಖರವಾಗಿ ಯೋಚಿಸುವವರನ್ನು ಅಪೇಕ್ಷಿಸುತ್ತದೆ, ವೈಫಲ್ಯವೆನ್ನುವುದು ಯಶಸ್ಸಿನ ವಿರುದ್ಧವಲ್ಲ, ಅದು ಯಶಸ್ಸಿನ ಭಾಗ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಬಿವಿವಿ ಸಂಘದ ಕಾರ್ಯಾಧ್ಯಕ್ಷ ಡಾ.ವೀರಣ್ಣ ಚರಂತಿಮಠ, ಈ ಕಾರ್ಯಕ್ರಮ ಪದವಿ ಪ್ರದಾನ ಸಮಾರಂಭ ಅಷ್ಟೇ ಅಲ್ಲ, ನಿಮ್ಮ ಶಿಸ್ತು, ಪರಿಶ್ರಮ, ಜ್ಞಾನದ ಸಂಭ್ರಮಾಚರಣೆ, ಕಾಲೇಜು ಉತ್ತಮ ಶಿಕ್ಷಣದೊಂದಿಗೆ ಉತ್ತಮ ಮೌಲ್ಯಗಳನ್ನು ನೀಡುವ ಸಂಸ್ಥೆ, ಹೊಸ ಬದಲಾವಣೆಗಳಿಗೆ ಹೊಂದಿಕೊಳ್ಳುತ್ತಾ ಸಾಮರ್ಥ್ಯವನ್ನು ವೃದ್ಧಿಸಿಕೊಂಡು ಗೌರವವನ್ನು ಕಾಪಾಡಿಕೊಳ್ಳಲು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

**2024–25ನೇ ಸಾಲಿನಲ್ಲಿ ನಾಲ್ಕು ವಿಭಾಗಗಳ 17 ವಿದ್ಯಾರ್ಥಿಗಳಿಗೆ ಬಿ.ಇ.ಆನರ್ಸ್ ಪದವಿ, 11 ವಿಭಾಗಗಳ 618 ವಿದ್ಯಾರ್ಥಿಗಳಿಗೆ ಬಿ.ಇ. ಪದವಿ ಹಾಗೂ ಮೂರು ಸ್ನಾತಕೋತ್ತರ ವಿಭಾಗಗಳ 129 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಬಿ.ಇ.ವಿಭಾಗದಲ್ಲಿ ಒಟ್ಟು 36 ರ‍್ಯಾಂಕ್ ನೀಡಲಾಗಿದ್ದು, 8 ವಿದ್ಯಾರ್ಥಿಗಳು ಪ್ರಥಮ ರ‍್ಯಾಂಕ್‌ನೊಂದಿಗೆ 12 ಚಿನ್ನದ ಪದಕಗಳನ್ನು ಪಡೆದರು. ಸ್ನಾತಕೋತ್ತರ ವಿಭಾಗದಲ್ಲಿ 7 ರ‍್ಯಾಂಕ್ ನೀಡಲಾಗಿದ್ದು, 3 ವಿದ್ಯಾರ್ಥಿಗಳು ಪ್ರಥಮ ರ‍್ಯಾಂಕ್‌ನೊಂದಿಗೆ 3 ಚಿನ್ನದ ಪದಕ ಪಡೆದುಕೊಂಡರು.**

ಬಿವಿವಿ ಸಂಘದ ಗೌರವ ಕಾರ್ಯದರ್ಶಿ ಮಹೇಶ ಅಥಣಿ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಬಿವಿವಿ ಸಂಘದ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ನಿರ್ದೇಶಕ ಡಾ.ಆರ್.ಎನ್.ಹೆರಕಲ್ ಅತಿಥಿಗಳನ್ನು ಸ್ವಾಗತಿಸಿ ಪ್ರಸ್ತಾವಿಕ ಮಾತನಾಡಿ, ಕಾಲೇಜಿನ ಸಮಗ್ರ ಬೆಳವಣಿಗೆ ಕುರಿತು ಮಾಹಿತಿ ನೀಡಿದರು.

ಕಾಲೇಜಿನ ಪ್ರಾಚಾರ್ಯ ಡಾ.ಬಿ.ಆರ್.ಹಿರೇಮಠ ಪರಿಚಯಿಸಿದರು. ಪರೀಕ್ಷಾ ನಿಯಂತ್ರಣಾಧಿಕಾರಿ ಡಾ.ಕೆ.ಚಂದ್ರಶೇಖರ ವಂದಿಸಿದರು. ಕಾರ್ಯಕ್ರಮದಲ್ಲಿ ಎನ್‌ಐಟಿ ನಾಗಪುರದ ಡಾ.ಅಶ್ವಿನ್ ಕೋಠಾರಿ, ಐಐಟಿ ಮದ್ರಾಸ್‌ನ ಡಾ.ಜಿ.ಆರ್.ದೊಡ್ಡಗೌಡರ, ಪ್ರೊ.ಟಿ.ವಿ.ರವಿ, ಸೂರತಕಲ್ಲಿನ ಡಾ.ಶಶಿಧರ ಕೂಲಗುಡಿ ಸೇರಿದಂತೆ ಬಿವಿವಿ ಸಂಘದ ಸದಸ್ಯರು, ಕಾಲೇಜು ಆಡಳಿತ ಮಂಡಳಿ ಸದಸ್ಯರು, ವಿವಿಧ ಕಾಲೇಜುಗಳ ಪ್ರಾಚಾರ್ಯರು, ಪ್ರಾಧ್ಯಾಪಕರು, ವಿದ್ಯಾರ್ಥಿಗಳು ಭಾಗವಹಿಸಿದ್ದರು. ಡಾ.ಎಸ್.ಜಿ.ಕಂಬಾಳೆಮಠ ಹಾಗೂ ಡಾ.ವಿಜಯಲಕ್ಷ್ಮೀ ಜಿಗಜಿನ್ನಿ ಕಾರ್ಯಕ್ರಮ ನಿರೂಪಿಸಿದರು.

## ಶಿಕ್ಷಕರ ಬೃಹತ್ ಸಭೆ ಸಂಘಟಿತ ಹೋರಾಟಕ್ಕೆ ಕರೆ



**ಭಾಲ್ಕಿ:** ರಾಜ್ಯದಲ್ಲಿ ಜಾರಿಯಾಗುತ್ತಿರುವ ಎನ್‌ಎಸ್‌ಕ್ಯೂಎಫ್ ಹಾಗೂ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ (ಎಐ) ವಿಷಯಗಳ ಅನುಷ್ಠಾನದ ಸಂದರ್ಭದಲ್ಲಿ ಶಿಕ್ಷಕರ ಹಿತಾಸಕ್ತಿ, ಸೇವಾ ಭದ್ರತೆ ಹಾಗೂ ಶಿಕ್ಷಣದ ಗುಣಮಟ್ಟಕ್ಕೆ ಯಾವುದೇ ಧಕ್ಕೆಯಾಗದಂತೆ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಕರ್ನಾಟಕ ರಾಜ್ಯ ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಭಾಲ್ಕಿ ತಾಲೂಕು ಅಧ್ಯಕ್ಷ ದತ್ತು ಕಾಟ್ಕರ್ ಆಗ್ರಹಿಸಿದರು.

ನಗರದ ಸರ್ಕಾರಿ ಪ್ರೌಢಶಾಲೆಯಲ್ಲಿ ಆಯೋಜಿಸಲಾಗಿದ್ದ ಪ್ರೌಢಶಾಲಾ ಹಿಂದಿ ಶಿಕ್ಷಕರ ಬೃಹತ್ ಸಭೆಯಲ್ಲಿ ಮಾತನಾಡಿದ ಅವರು, ಹೊಸ ಶಿಕ್ಷಣ ನೀತಿಗಳ ಅನುಷ್ಠಾನದ ಹೆಸರಿನಲ್ಲಿ ಶಿಕ್ಷಕರ ಹುದ್ದೆಗಳು ಅಥವಾ ಸೇವಾ ಹಕ್ಕುಗಳಿಗೆ ಯಾವುದೇ ರೀತಿಯ ತೊಂದರೆ ಉಂಟಾಗಬಾರದು ಎಂದು ಒತ್ತಾಯಿಸಿದರು.

ಸಭೆಯಲ್ಲಿ ಬೀದರ ಜಿಲ್ಲೆಯ ವಿವಿಧ ತಾಲೂಕುಗಳ ಅಧ್ಯಕ್ಷರಾದ ಸಂಜೀವ ಉಪಾಸೆ,ದಿಲೀಪ ಬಿರಾದಾರ,ಅನಿಲ ಕುಮಾರ ಮಾಟೆ,ಪ್ರಮೋದ,ಕಿಶೋರ ರೂಪನೂರೆ,ನಾಗೇಂದ್ರ ಬಿರಾದಾರ,ನಂದಕುಮಾರ ಜಾಧವ,ವೆಂಕಟ ಚಿಟಾಂಪಳ್ಳೆ, ಗೀತಾಂಜಲಿ ಪವಾರ ಸೇರಿದಂತೆ ಜಿಲ್ಲೆಯ ನೂರಾರು ಹಿಂದಿ ಭಾಷಾ ಶಿಕ್ಷಕರು ಉಪಸ್ಥಿತರಿದ್ದು, ಎನ್‌ಎಸ್‌ಕ್ಯೂಎಫ್ ಹಾಗೂ ಎಐ ಅನುಷ್ಠಾನದ ಕುರಿತು ಸಮಗ್ರ ಚರ್ಚೆ ನಡೆಸಿದರು.

## ಮಾದಕ ದ್ರವ್ಯ ಬಳಕೆ ವಿರೋಧಿ ಜಾಗೃತಿ ಅಭಿಯಾನ



**ವಿಜಯನಗರ:** ವಿಶ್ವಪರಂಪರೆ ಹಂಪಿಯಲ್ಲಿ ಗುರುವಾರ ನಡೆದ ಮಾದಕ ದ್ರವ್ಯಗಳ ವಿರೋಧ ಜಾಗೃತಿ ಜಾಥಾ ಕಾರ್ಯಕ್ರಮ ಜರುಗಿದವು. ಈ ವೇಳೆ ಮಾತನಾಡಿದ ಡಿ.ವೈ.ಎಸ್.ಪಿ ಭಾರತಿ "ಸಾಕಷ್ಟು ಯುವ ಪೀಳಿಗೆ ದಿನೇ ದಿನೇ ಮಾದಕ ವ್ಯಸನಿಗಳಾಗುತ್ತಿದ್ದು ಹಾಗೂ ಇದನ್ನು ಬಳಸಿಕೊಂಡ ಮಾದಕ ವಸ್ತು ಸಾಗಣೆದಾರರು ಇಂತಹ ವಸ್ತುಗಳನ್ನು ಕಳ್ಳ ಸಾಗಣೆ ಮಾಡಿ ದೇಶದ ಯುವ ಶಕ್ತಿಗೆ ಮಾರಕವಾಗುತ್ತಿದ್ದಾರೆ. ಇದರ ಬಗ್ಗೆ ಸಾರ್ವಜನಿಕರಿಗೆ ಅದರಲ್ಲೂ ವಿಶೇಷವಾಗಿ ಯುವ ಪೀಳಿಗೆಗೆ ಅರಿವು ಮೂಡಿಸುವುದು ಅವಶ್ಯಕವಾಗಿರುತ್ತದೆ. ಮಾದಕ ದ್ರವ್ಯ ಬಳಕೆ ಸಮಸ್ಯೆಯಾಗಿದ್ದು ಇದರ ಬೇರು ಸಮೇತ ಕಿತ್ತು ಹಾಕಿ ಯುವಕರು ಇದರ ವಿರುದ್ಧ ಧ್ವನಿ ಎತ್ತಬೇಕು"ಸಂಘ ಸಂಸ್ಥೆಗಳು, ಜನರು ಒಂದಾಗಿ ಇದರ ವಿರುದ್ಧ ಸಮರ ಸಾರಬೇಕು ಹಾಗೂ. ಎನ್.ಡಿ.ಪಿ.ಎಸ್ ಕಂಡು ಬಂದಲ್ಲಿ 1985 ಕಾಯ್ದೆ ಪ್ರಕಾರ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಸಲಹೆ ನೀಡಿದರು.ವಿಶ್ವ ಪರಂಪರೆಯ ವಿರುಪಾಕ್ಷ ದೇವಾಲಯದ ಎಡಭಾಗದಲ್ಲಿರುವ ನ್ಯೂ ಲಕ್ಷ್ಮೀ ಟೂರಿಸ್ಟ್ ಹೋಂ, ಕಲ್ಯಾಣ ಗೇಸ್ಟ್ ಹೌಸ್.ಮಾನಸಿ ಹೋಂ ಸ್ಟೇ, ಶ್ರೀಮ ಕ್ಯಾಚರಗೇಸ್ಟ್ ಹೌಸ್,ಸುಧಾಹೋಂಸ್ಟೇ,ನೇತ್ರಾ ಗೇಸ್ಟ್ ಹೌಸ್,ಶಂಕರ್ ಗೇಸ್ಟ್ ಹೌಸ್,ಹಂಪಿ ಕೆಮರ್ಷಿಯಲ್ ಹಂಪಿಪ್ರದೇಶದ ಹ್ಯಾಪಿ ಹೋಂ ಸ್ಟೇ,ದಿ ವೈಟ್ ಚಿಟ್ ಕಾಟೇಜಸ್, ದಿಭೋವಿಚಾಲಿ,ಶಾಂತಿ ವಸತಿ ಗೃಹ,ಸುರೇಶ್ ಗೇಸ್ಟ್ ಹೌಸ್. ಅತಿಥಿ ಟೂರಿಸ್ಟ್ ಹೋಂಎಲ್ಲಾ ಮಾಲೀಕರನ್ನು ಕರೆದು ಎನ್.ಡಿ.ಪಿ.ಎಸ್ ಕುರಿತು ಜಾಗೃತಿ ಸಭೆಯನ್ನು ಮಾಡಲಾಯಿತು.ಈ ಸಂದರ್ಭದಲ್ಲಿ ವಿಜಯನಗರ ಜಿಲ್ಲಾ ವ್ಯಾಪ್ತಿಯ ಅಧಿಕಾರಿಗಳಾದ ನಾಜೀಯ ಬೇಗಂ ಅಬಕಾರಿ ನಿರೀಕ್ಷಕರು ಉಪ ಆಯುಕ್ತರ ಕಛೇರಿ.ಬಸವರಾಜ ಅಬಕಾರಿ ನಿರೀಕ್ಷಕರು ಕೂಡ್ಲಿಗಿ ವಲಯ ಮತ್ತು.ಸಿದ್ದೇಶ್ ನಾಯ್ಕ ಅಬಕಾರಿ ನಿರೀಕ್ಷಕರು ಹಡಗಲಿ ವಲಯ ಇವರುಗಳು ಹಾಗೂ ಅಬಕಾರಿ ಉಪ ನಿರೀಕ್ಷಕರುಗಳಾದ ಹೆಚ್.ವೀರಮ್ಮ,ದಕ್ಷಿಣಮೂರ್ತಿ.ಸಂಗಪ್ಪ,ಚಂದ್ರಶೇಖರ್,ಮಲ್ಲಿಕಾರ್ಜುನ ಎರೆಹೊಲ ಹಾಗೂ ಸಿಬ್ಬಂದಿಗಳು ಸಾರ್ವಜನಿಕರು ಉಪಸ್ಥಿತರಿದ್ದರು.

## ತುಂಗಭದ್ರಾ 46ನೇ ಕಾಲುವೆ ಕುಸಿತ: ತಕ್ಷಣದ ದುರಸ್ತಿಗೆ ಮಾಜಿ ಸಂಸದ ಕೆ. ವಿರೂಪಾಕ್ಷಪ್ಪ ಆಗ್ರಹ



**ಸಿಂಧನೂರು:** ತುಂಗಭದ್ರಾ ಬಲದಂಡೆ ಉನ್ನತ ಮಟ್ಟದ ಕಾಲುವೆಯ 46ನೇ ಮೈಲಿ ವ್ಯಾಪ್ತಿಯ ಮೈಲಾಪುರ ಗ್ರಾಮ ಹಾಗೂ ದುರ್ಗಾ ಕ್ಯಾಂಪ್ ಹತ್ತಿರ ಕಾಂಕ್ರೀಟ್ ತಡೆಗೋಡೆ ಕುಸಿದು ಬಿದ್ದು ಒಂದು ವರ್ಷ ಗತಿಸಿದರೂ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಯಾವುದೇ ಕ್ರಮ ಕೈಗೊಳ್ಳದಿರುವುದು ಖಂಡನೀಯ ಎಂದು ಕೊಪ್ಪಳದ ಮಾಜಿ ಸಂಸದ ಕೆ. ವಿರೂಪಾಕ್ಷಪ್ಪ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಸ್ಥಳೀಯ ರೈತರೊಂದಿಗೆ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಬಳಿಕ ಅವರು ಮಾತನಾಡಿದರು.ಕಾಂಕ್ರೀಟ್ ಜರಿದು ಬಿದ್ದು ತಿಂಗಳುಗಳೇ ಕಳೆದಿದ್ದರೂ ಸರ್ಕಾರ ಮತ್ತು ನೀರಾವರಿ ಇಲಾಖೆ ಕಣ್ಣುಮುಚ್ಚಿ ಕುಳಿತಿದೆ. ಉನ್ನತಾಧಿಕಾರಿಗಳನ್ನು ಸಂಪರ್ಕಿಸಿದರೂ ಸರಿಯಾದ ಸ್ಪಂದನೆ ಸಿಗುತ್ತಿಲ್ಲ. ಮಳೆಯ ಅಭಾವದಿಂದಾಗಿ ರೈತರು ಈಗಾಗಲೇ ಒಂದು ಬೆಳೆಯನ್ನು ಕಳೆದುಕೊಂಡಿದ್ದಾರೆ. ಪ್ರಸ್ತುತ ಜಲಾಶಯಕ್ಕೆ ನೀರು ಹರಿದು ಬರುತ್ತಿದ್ದು, ಬೆಳೆಗೆ ನೀರು ಹರಿಸುವ ಸಮಯ ಹತ್ತಿರವಾಗುತ್ತಿದೆ. ಆದರೆ ಕಾಲುವೆ ದುರಸ್ತಿಯಾಗದಿದ್ದರೆ ನೀರು ಹರಿಸುವುದು ಅಸಾಧ್ಯವಾಗಿದೆ.

ಟೆಂಡರ್ ಹಾಗೂ ದುರಸ್ತಿಯ ನೆಪದಲ್ಲಿ ವಿಳಂಬ ಧೋರಣೆ ಮುಂದುವರಿಸಿದರೆ, ಅನ್ನದಾತರು ತಮ್ಮ ಎರಡನೇ ಬೆಳೆಯನ್ನು ಕೂಡ ಸಂಪೂರ್ಣವಾಗಿ ಕಳೆದುಕೊಳ್ಳಬೇಕಾಗುತ್ತದೆ ಎಂದು ಅವರು ಎಚ್ಚರಿಸಿದರು. ಸ್ಥಳೀಯ ಶಾಸಕರು, ಸಂಬಂಧಪಟ್ಟ ಸಚಿವರು ಹಾಗೂ ರಾಜ್ಯ ಸರ್ಕಾರ ತಕ್ಷಣವೇ ಎಚ್ಚೆತ್ತುಕೊಂಡು, ಯುದ್ಧೋಪಾದಿಯಲ್ಲಿ ತುರ್ತು ಆಧಾರದ ಮೇಲೆ ಕಾಲುವೆ ದುರಸ್ತಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಬೇಕು. ರೈತರ ಜಮೀನುಗಳಿಗೆ ತೊಂದರೆಯಿಲ್ಲದೆ ಕಾಲಕಾಲಕ್ಕೆ ನೀರು ತಲುಪಿಸಲು ಅಗತ್ಯವಿರುವ ಎಲ್ಲ ವ್ಯವಸ್ಥೆಗಳನ್ನು ಕೂಡಲೇ ಮಾಡಬೇಕು ಎಂದು ಮಾಜಿ ಸಂಸದ ಕೆ. ವಿರೂಪಾಕ್ಷಪ್ಪ ಒತ್ತಾಯಿಸಿದರು.

# ಕೆಬಿಎನ್ ಆಸ್ಪತ್ರೆ: ಸಿಎಮ್‌ಈ ಮತ್ತು ಕಾರ್ಯಾಗಾರ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ







ನಗರದ ಸುಪ್ರಸಿದ್ಧ ಕೆಬಿಎನ ಟೀಚಿಂಗ್ ಮತ್ತು ಜೆನೆರಲ್ ಆಸ್ಪತ್ರೆಯ ಪ್ರಸೂತಿ ವಿಭಾಗ ಹಾಗೂ ಕೆ ಎಸ್ ಒ ಜಿ ಎ ಕಿಮ್ಸ್ ಕಡಲ್ಸ್ ಸಹಯೋಗದಲ್ಲಿ ರವಿವಾರ "ರೀಸೆಂಟ್ ಅಪ್ಡೇಟ್ಸ್ ಇನ್ ಒಬ್ಸಟ್ರೆಟಿಕ್ಸ್ ಮತ್ತು ಗೈನೊಕೊಲಾಜಿಕಲ್ ಸರ್ಜಾರೀಸ" ಬಗ್ಗೆ ಸಿ ಎಮ್ ಈ ಮತ್ತು ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಯಿತು.

ಈ ಕಾರ್ಯಾಗಾರದಲ್ಲಿ ಅನೇಕ ಗೋಷ್ಠಿಗಳು ಜರುಗಿದವು. ತೆಲಂಗಾಣದ ಕಿಮ್ಸ್ ಕಡಲ್ಸ್ ನ ಮುಖ್ಯ ಆಡಳಿತ ಅಧಿಕಾರಿ ಡಾ ಬಾಬು ಮಾದರಕರ, ಕಿಮ್ಸ್ ಕಡಲ್ಸ ನ ಮುಖ್ಯಸ್ಥೆ ಡಾ ತ್ರಿಪುರ ಸುಂದರಿ, ಡಾ ಮಹಾನಂದ ಅನೇಕ ವಿಷಹಾಯಗಳ ಬಗ್ಗೆ ಮಾತನಾಡಿದರು.

ಉದ್ಘಾಟನೆ ಸಮಾರಂಭದಲ್ಲಿ ಮೆಡಿಕಲ ಡೀನ್ ಗುರು ಪ್ರಸಾದ ಮಾತನಾಡುತ್ತ, ಇಂತಹ ಸಿ ಎಮ್ ಈ ಕಾರ್ಯಕ್ರಮಗಳು ಅವಶ್ಯಕ. ಇದ-ರಿಂದ ನವ ಜ್ಞಾನ ಸಿಗುತ್ತದೆ ಎಂದರು. ಈಗಿನ ದಿನ ಮಾನಗಳಲ್ಲಿ ಜ್ಞಾನದ ಜೊತೆಗೆ ಕೌಶಲ್ಯಗಳು ಅಷ್ಟೇ ಮಹತ್ವ. ಮೆಡಿಕಲ್ ಆಧೀಕ್ಷರಾದ ಡಾ ಸಿದ್ಧಲಿಂಗ ಚೆಂಗಟಿ ಮಾತನಾಡಿ ಸಿ ಎಮ್ ಈ ಗಳು ಕೇವಲ ಕಾರ್ಯಕ್ರಮವಲ್ಲ. ಜ್ಞಾನದ ಆಕರ. ಮಹಿಳಾ ಆರೋಗ್ಯ ಬಹಳ ಅವಶ್ಯದ ವಿಷಯ. ಇಂತಹ ವಿಷಯದ ಬಗ್ಗೆ ಸಿ ಎಮ್ ಈ ಹಮ್ಮಿಕೊಂಡಿ ವಿಭಾಗಕ್ಕೆ ಅಭಿನಂದನೆಗಳನ್ನು ತಿಳಿಸಿದರು. ಡಾ ತ್ರಿಪುರ ಸುಂದರಿ ಇವರ ಕೆಬಿಎನನಲ್ಲಿ ಲಭ್ಯವಿದ್ದ ಸೌಲಭ್ಯಗಳನ್ನು ಶ್ಲಾಘನೆ ಮಾಡಿದರು. ಅನುಭವಗಳನ್ನು ಗಂಚಿಕೊಂಡಗ ಹೊಸ ವಿಷಯಗಳನ್ನು ಕಲಿಯಬಹುದು ಎಂದರು.

ಐಕ್ಯೂಎಸಿ ನಿರ್ದೇಶಕ ಡಾ ಅಬ್ದುಲ್ ಬಶೀರ ಮಾತನಾಡಿ ಸಿ ಎಮ್ ಈ ಗಳ ಆಯೋಜನೆಗೆ ಕೆಬಿಎನ ಆಡಳಿತ ಯಾವಾಗಲೂ ಪ್ರೋತ್ಸಾಹ ಮಾಡುತ್ತದೆ. ಎಲ್ಲ ವಿಭಾಗಗಳು ಸಿ ಎಮ್ ಈ ಮಾಡುತ್ತಿರಬೇಕು ಎಂದು ಸಲಹೆ ನಿಡಿದರು.


ವಿದ್ಯಾರ್ಥಿಗಳಿಗೆ ಕೆಲವು ಕೌಶಲ್ಯಗಳ ಹ್ಯಾಂಡ್ಸ್ ಒಣ ಪ್ರಾಕ್ಟೀಸ ಮಾಡಿಸಲಾಯಿತು.

**ಸುಮಾರು 150 ಅಭ್ಯರ್ಥಿಗಳು**

ನೋಂದಾಯಿಸಿದರು. ಡಾ ಶಾನ ನಾಥ್ ಹೇಳಿದರು, ಡಾ ಧೃತಿ ಪ್ರಾರ್ಥಿಸಿದರು, ವಿಭಾಗದ ಮುಖ್ಯಸ್ಥ ಡಾ ಮಹವೀಶ ಅಂಜುಮ ಸ್ವಾಗತಸಿದರು. ಡಾ ಮಿಜಬಾ, ನಿರೂಪಿಸಿದರು. ಆಡಳಿತ ಅಧಿಕಾರಿ ಡಾ ರಾಧಿಕಾ, ಡಾ ಲಕ್ಷ್ಮೀ,ಡಾ ಸುಜಾತಾ ಧಡೆದ, ಡಾ ಶೈಲಜಾ, ಡಾ ನಿವೇದಿತಾ, ಡಾ ಶಾಂತಾ, ಡಾ ಫಾತಿಮಾ, ಡಾ ಜೊಹರ, ಡಾ ಮ ಫಹೇನ, ಡಾ ಫಾರ್ಹತ್, ಡಾ ಪ್ರಿಯಾಂಕಾ, ಡಾ ರೇಷಮಾ, ಡಾ ಆಯಿಷಾ, ಡಾ ಶ್ರಾವಣಿಕಾ, ಡಾ ಹುಮೆರಾ ಹಾಜರಿದ್ದರು.

# ಅಂಚೆ ಕಚೇರಿಯಲ್ಲಿ ಸಿಬ್ಬಂದಿ ಅಭಾವ; ಸಾರ್ವಜನಿಕರ ಪರದಾಟ..!

• ಮಲ್ಲಮ್ಮ ನುಡಿ ವಾರ್ತೆ ಕೆಂಭಾವಿ



**ಸಮಯಕ್ಕೆ ಸರಿಯಾಗಿ ಪ್ರಮುಖ ದಾಖಲೆಗಳು ಹಾಗೂ ಪಿಂಚಣಿ ಪತ್ರಗಳು ತಲುಪದೆ ತೊಂದರೆ-ಯಾಗುತ್ತಿದೆ. ಸರ್ಕಾರ ಹಾಗೂ ಅಂಚೆ ಇಲಾಖೆಯ ಉನ್ನತಾಧಿಕಾರಿಗಳು ಕೂಡಲೇ ಗಮನಹರಿಸಿ ಕೆಂಭಾವಿ ಅಂಚೆ ಕಚೇರಿಗೆ ಖಾಲಿ ಇರುವ ಪೋಸ್ಟ್ ಮಾಸ್ಟರ್ ಹುದ್ದೆ ಭರ್ತಿ ಮಾಡಬೇಕು ಮತ್ತು ಹೆಚ್ಚುವರಿ ಡೆಲಿವರಿ ಸಿಬ್ಬಂದಿಯನ್ನು ನೇಮಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕೆಂಬುದು ಸ್ಥಳೀಯ ಹಾಗೂ ಗ್ರಾಹಕರ ಆಗ್ರಹವಾಗಿದೆ.**

ಪಟ್ಟಣದ ಮುಖ್ಯ ಅಂಚೆ ಕಚೇರಿಯಲ್ಲಿ ತೀವ್ರ ಸಿಬ್ಬಂದಿ ಕೊರತೆ ಎದುರಾಗಿದ್ದು, ದೈನಂದಿನ ಅಂಚೆ ಸೇವೆ ಸಂಪೂರ್ಣವಾಗಿ ಹಳಿ ತಪ್ಪುತ್ತಿದೆ. ಸೂಕ್ತ ಸಿಬ್ಬಂದಿ ಇಲ್ಲದೆ ಸಾರ್ವಜನಿಕರು ಹಾಗೂ ಸುತ್ತಮುತ್ತಲಿನ ಗ್ರಾಮೀಣ ಭಾಗದ ಜನರು ತೀವ್ರ ತೊಂದರೆ ಅನುಭವಿಸುವಂತಾಗಿದೆ.

ಇಡೀ ಪಟ್ಟಣಕ್ಕೆ ಒಬ್ಬರೇ ಅಂಚೆ ವಿತರಕರು ಕಾರ್ಯನಿರ್ವಹಿಸುತ್ತಿದ್ದು, ಮನೆ ಮನೆಗೆ ಹಾಗೂ ವಾಣಿಜ್ಯ ಮಳಿಗೆಗಳಿಗೆ ಪತ್ರಗಳು, ಸ್ಪೀಡ್ ಪೋಸ್ಟ್ ಹಾಗೂ ಪ್ರಮುಖ ದಾಖಲೆಗಳನ್ನು ತಲುಪಿಸುವುದು ಕಷ್ಟಸಾಧ್ಯವಾಗಿದೆ. ಒಬ್ಬರೇ ಸಿಬ್ಬಂದಿ ಮೇಲಿದ್ದ ಕಾರ್ಯಭಾರದಿಂದಾಗಿ ನೂರಾರು ಪ್ರಮುಖ ಪತ್ರಗಳು, ಬ್ಯಾಂಕ್ ಕಾರ್ಡ್‌ಗಳು, ಸರ್ಕಾರಿ ಆದೇಶಗಳು ಹಾಗೂ ತುರ್ತು ಅಂಚೆಗಳು ದಿನಗಟ್ಟಲೆ ಕಚೇರಿಯಲ್ಲೇ ಬಾಕಿ ಉಳಿಯುತ್ತಿವೆ. ತಕ್ಷಣವೇ ಮತ್ತೊಬ್ಬ ಡೆಲಿವರಿ ಸಿಬ್ಬಂದಿಯನ್ನು ನೇಮಿಸುವುದು ತುರ್ತು ಅಗತ್ಯವಾಗಿದೆ.

**ಪೋಸ್ಟ್ ಮಾಸ್ಟರ್ ಹುದ್ದೆ ಖಾಲಿ:** ಕಚೇರಿಯ ಮುಖ್ಯಸ್ಥರಾದ ಪೋಸ್ಟ್ ಮಾಸ್ಟರ್ ಹುದ್ದೆಯು ಕಳೆದ ಕೆಲವು ವರ್ಷಗಳಿಂದ ಖಾಲಿ ಬಿದ್ದಿದೆ. ಪ್ರಸ್ತುತ ಇಲ್ಲಿರುವ ಸಹಾಯಕ ಪೋಸ್ಟಲ್ ಅಸಿಸ್ಟೆಂಟ್ ಅವರೇ ಅನಿವಾರ್ಯವಾಗಿ ಪೋಸ್ಟ್ ಮಾಸ್ಟರ್ ಹೊಣೆಗಾರಿಕೆಯನ್ನೂ ವಹಿಸಿಕೊಂಡು ಕರ್ತವ್ಯ ನಿಭಾಯಿಸುತ್ತಿದ್ದಾರೆ. ಇದರಿಂದಾಗಿ ಸಾರ್ವಜನಿಕರ ದೈನಂದಿನ ಕೌಂಟರ್ ವ್ಯವಹಾರಗಳು, ಉಳಿತಾಯ ಖಾತೆ ಸೇವೆಗಳು ಮತ್ತು ಆಡಳಿತಾತ್ಮಕ ಕೆಲಸಗಳು ವಿಳಂಬಗೊಳ್ಳುತ್ತಿದ್ದು, ಕಚೇರಿಯ ಒಟ್ಟಾರೆ ಕಾರ್ಯನಿರ್ವಹಣೆ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದಂತಾಗಿದೆ.

ಈ ಅಂಚೆ ಕಚೇರಿಯು ಕೇವಲ ಕೆಂಭಾವಿ ಪಟ್ಟಣಕ್ಕೆ ಮಾತ್ರ ಸೀಮಿತವಾಗಿರದೆ, ಸುತ್ತಮುತ್ತಲಿನ 16 ಗ್ರಾಮಗಳ ಗ್ರಾಮೀಣ ಅಂಚೆ ಸೇವೆ (ಜಿಡಿಎಸ್) ವ್ಯಾಪ್ತಿಯನ್ನು ಒಳಗೊಂಡಿದೆ. ಇಲಾಖೆಯ ಹಿರಿಯ ಅಧಿಕಾರಿಗಳು ತಕ್ಷಣ ಸ್ಪಂದಿಸಿ ಸಿಬ್ಬಂದಿ ಕೊರತೆಯನ್ನು ನೀಗಿಸುತ್ತಾರೆಯೇ ಎಂಬುದನ್ನು ಕಾಯ್ದು ನೋಡಬೇಕಿದೆ.

# ಕೆಂಭಾವಿ ಠಾಣೆಯನ್ನು ಶಹಾಪುರ ವೃತ್ತದಲ್ಲೇ ಉಳಿಸಲು ಒತ್ತಾಯ

• ಮಲ್ಲಮ್ಮ ನುಡಿ ವಾರ್ತೆ ಕೆಂಭಾವಿ



ಪಟ್ಟಣದ ಪೊಲೀಸ್ ಠಾಣೆಯನ್ನು ಶಹಾಪುರ ವೃತ್ತ ಕಚೇರಿಗೆ ಸೇರ್ಪಡೆಗೊಳಿಸಿರುವ ಸರ್ಕಾರದ ನಿರ್ಧಾರವನ್ನು ಸ್ವಾಗತಿಸಿರುವ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ (ಲಕ್ಷ್ಮೀ ನಾರಾಯಣ ನಾಗವಾರ ಸ್ಥಾಪಿತ) ಈ ಆದೇಶವನ್ನು ಹಿಂಪಡೆಯಬಾರದು ಎಂದು ಮಾನ್ಯ ಗೃಹ ಸಚಿವರು ಹಾಗೂ ಯಾದಗಿರಿ ಜಿಲ್ಲಾ ಉಸ್ತುವಾರಿ ಸಚಿವರಾದ ಪ್ರಿಯಾಂಕ್ ಖರ್ಗೆ ಅವರಿಗೆ ಕೆಂಭಾವಿ ಪಿಎಸ್‌ಐ ಮುಖಾಂತರ ಮನವಿ ಸಲ್ಲಿಸಿದೆ.

ಕೆಂಭಾವಿ ಪೊಲೀಸ್ ಠಾಣಾ ವ್ಯಾಪ್ತಿಯ ಶೇಕಡಾ 80 ರಷ್ಟು ಹಳ್ಳಿಗಳು ಶಹಾಪುರ ಮತಕ್ಷೇತ್ರಕ್ಕೆ ಒಳಪಡುತ್ತವೆ. ಈ ಹಿಂದೆ ಈ ಠಾಣೆಯು ಹುಣಸಗಿ ವೃತ್ತ ಕಚೇರಿ ವ್ಯಾಪ್ತಿಯಲ್ಲಿದ್ದರಿಂದ ಸಾರ್ವಜನಿಕರಿಗೆ ತೀವ್ರ ತೊಂದರೆಯಾಗುತ್ತಿತ್ತು. ಅಲ್ಲದೆ, ಹುಣಸಗಿ ವೃತ್ತಕ್ಕೆ ಹೆಚ್ಚಿನ ಠಾಣೆಗಳು ಸೇರ್ಪಡೆಯಾಗಿದ್ದರಿಂದ ನಿರ್ವಹಣೆ ಕೂಡ ಕಷ್ಟಕರವಾಗಿತ್ತು. ಈಗ ಕೆಂಭಾವಿ ಠಾಣೆಯನ್ನು ಶಹಾಪುರ ವೃತ್ತಕ್ಕೆ ಸೇರಿಸಿರುವುದು ಗ್ರಾಮೀಣ ಭಾಗದ ಸಾರ್ವಜನಿಕರಿಗೆ ಹಾಗೂ ಅಪರಾಧ ತಡೆಗಟ್ಟಲು ಅತ್ಯಂತ ಅನುಕೂಲಕರವಾಗಿದೆ ಎಂದು, ಕೆಂಭಾವಿ ಪ್ರತ್ಯೇಕ ಸರ್ಕಲ್ (ವೃತ್ತ) ಆಗುವವರೆಗೂ ಹಾಲಿ ಆದೇಶದಂತೆ ಶಹಾಪುರ ವೃತ್ತದಲ್ಲೇ ಮುಂದುವರಿಸಬೇಕು. ಯಾವುದೇ ಒತ್ತಡಗಳಿಗೆ ಮಣಿದು ಈ ಆದೇಶವನ್ನು ಹಿಂಪಡೆದರೆ, ಬರುವ ಆಗಸ್ಟ್ 14 ರಂದು ಕೆಂಭಾವಿ ಪಟ್ಟಣ ಬಂದ್‌ಗೆ ಕರೆ ನೀಡಿ, ವಿವಿಧ ಗ್ರಾಮಸ್ಥರು ಹಾಗೂ ಸಂಘಟನೆಗಳ ಒಕ್ಕೂಟದೊಂದಿಗೆ ಉಗ್ರ ಹೋರಾಟ ಕೈಗೆತ್ತಿಕೊಳ್ಳಲಾಗುವುದು ಎಂದು ಸಂಘಟನೆ ಎಚ್ಚರಿಸಿದೆ.

ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಸಂಘಟನಾ ಸಂಚಾಲಕ ಶಿವಶರಣ ನಾಗರೆಡ್ಡಿ, ಬಸವರಾಜ್ ಕಟ್ಟಿಮನಿ, ಮರೆಪ್ಪ ಎಸ್. ಗೌಂಡಿ, ಶರಣಪ್ಪ ಭೂತಾಳಿ, ಶಿವಪ್ಪ ಜಿ. ಕಂಬಾರ್, ಮಂಜುನಾಥ್ ಕೊಂಬಿನ್, ಹನುಮಂತ್ ಬೊಮ್ಮನಹಳ್ಳಿ, ಮಾನಪ್ಪ ಮಾವಿನ್ಮಟ್ಟಿ, ಅಂಬರೀಷ್ ಬೊಮ್ಮನಹಳ್ಳಿ, ಖಂಡಪ್ಪ ಯಾಳಗಿ, ಸಿದ್ದಾರ್ಥ್ ಮಳಾಹಳ್ಳಿಕರ್, ವಿಜಯಕುಮಾರ್ ಕಟ್ಟಿಮನಿ, ಸೂಗಪ್ಪ ನಗನೂರ್, ಸಿದ್ದಪ್ಪ ದೊಡ್ಮನಿ ಹಾಗೂ ಇತರ ಮುಖಂಡರು ಉಪಸ್ಥಿತರಿದ್ದರು.

# ಶಾಸಕ ಬಿ. ನಾಗೇಂದ್ರಗೆ ಮತ್ತೆ ಸಚಿವ ಸ್ಥಾನ..!

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ



ಕರ್ನಾಟಕ ಸಚಿವ ಸಂಪುಟ ವಿಸ್ತರಣೆಯಲ್ಲಿ ಬಳ್ಳಾರಿ ಗ್ರಾಮಾಂತರ ಕ್ಷೇತ್ರದ ಶಾಸಕ ಹಾಗೂ ಮಾಜಿ ಸಚಿವ ಬಿ. ನಾಗೇಂದ್ರ ಅವರಿಗೆ ಮತ್ತೊಮ್ಮೆ ಸಚಿವ ಸ್ಥಾನ ದೊರೆತಿರುವುದು ಬಳ್ಳಾರಿ ಜಿಲ್ಲೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು, ಅಭಿಮಾನಿಗಳು ಹಾಗೂ ಸಾರ್ವಜನಿಕರಲ್ಲಿ ಅಪಾರ ಸಂಭ್ರಮಕ್ಕೆ ಕಾರಣವಾಗಿದೆ. ಸಚಿವ ಸ್ಥಾನ ಘೋಷಣೆಯಾಗುತ್ತಿದ್ದಂತೆಯೇ ಜಿಲ್ಲೆಯ ವಿವಿಧೆಡೆ ಪಟಾಕಿ ಸಿಡಿಸಿ, ಸಿಹಿ ಹಂಚಿ, ಮೆರವಣಿಗೆ ನಡೆಸಿ ವಿಜಯೋತ್ಸವ ಆಚರಿಸಲಾಯಿತು.

ಬೆಂಗಳೂರುದಲ್ಲಿ ನಡೆದ ಅಭಿನಂದನಾ ಸಮಾರಂಭದಲ್ಲಿ ಸಚಿವ ಬಿ. ನಾಗೇಂದ್ರ ಅವರನ್ನು ಅವರ ಸಹೋದರ ವೆಂಕಟೇಶ್ ಪ್ರಸಾದ್, ಕಾಂಗ್ರೆಸ್ ಮಾಧ್ಯಮ ವಕ್ತಾರ ವೆಂಕಟೇಶ್ ಹೆಗಡೆ, ಕಾಂಗ್ರೆಸ್ ಮುಖಂಡ ಸಂಗನಕಲ್ಲು ವಿಜಯ್ ಕುಮಾರ್ ಸೇರಿದಂತೆ ಅನೇಕ ಮುಖಂಡರು ಹಾಗೂ ಕಾರ್ಯಕರ್ತರು ಸನ್ಮಾನಿಸಿ ಶುಭಾಶಯ ಕೋರಿದರು.

ಈ ವೇಳೆ ಮಾತನಾಡಿದ ವೆಂಕಟೇಶ್ ಪ್ರಸಾದ್, "ನಮ್ಮ ಸಹೋದರರಿಗೆ ಮತ್ತೊಮ್ಮೆ ಸಚಿವ ಸ್ಥಾನ ದೊರೆತಿರುವುದು ಕುಟುಂಬಕ್ಕೂ, ಕ್ಷೇತ್ರದ ಜನರಿಗೂ ಹಾಗೂ ಕಾರ್ಯಕರ್ತರಿಗೂ ಹೆಮ್ಮೆಯ ಕ್ಷಣವಾಗಿದೆ. ಪಕ್ಷದ ನಾಯಕತ್ವಕ್ಕೆ ನಾವು ಕೃತಜ್ಞರಾಗಿದ್ದೇವೆ," ಎಂದು ಹೇಳಿದರು.

ಕಾಂಗ್ರೆಸ್ ಮಾಧ್ಯಮ ವಕ್ತಾರ ವೆಂಕಟೇಶ್ ಹೆಗಡೆ ಮಾತನಾಡಿ, "ಹಲವು ತಿಂಗಳುಗಳಿಂದ ಸಚಿವ ಸ್ಥಾನಕ್ಕಾಗಿ ಕಾರ್ಯಕರ್ತರು ಹಾಗೂ ಅಭಿಮಾನಿಗಳಲ್ಲಿ ಇದ್ದ ನಿರೀಕ್ಷೆಗೆ ಇಂದು ತೆರೆ ಬಿದ್ದಿದೆ. ಈ ನಿರ್ಧಾರದಿಂದ ಕಾಂಗ್ರೆಸ್ ಕಾರ್ಯಕರ್ತರಲ್ಲಿ ಹೊಸ ಆತ್ಮವಿಶ್ವಾಸ ಮೂಡಿದ್ದು, ಜಿಲ್ಲೆಯ ಅಭಿವೃದ್ಧಿಗೆ ಹೊಸ ದಿಕ್ಕು ಸಿಗಲಿದೆ," ಎಂದು ತಿಳಿಸಿದರು.

**ಜಿಲ್ಲಾದ್ಯಂತ ವಿಜಯೋತ್ಸವ:** ಬಳ್ಳಾರಿ ನಗರ, ಗ್ರಾಮಾಂತರ ಸೇರಿದಂತೆ ಜಿಲ್ಲೆಯ ವಿವಿಧ ಭಾಗಗಳಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಕಾಂಗ್ರೆಸ್ ಧ್ವಜಗಳನ್ನು ಹಿಡಿದು ಮೆರವಣಿಗೆ ನಡೆಸಿದರು. "ಬಳ್ಳಾರಿಗೆ ನ್ಯಾಯ ಸಿಕ್ಕಿದೆ", "ಬಿ. ನಾಗೇಂದ್ರ ಅವರಿಗೆ ಸಚಿವ ಸ್ಥಾನ ನೀಡಿದ ಮುಖ್ಯಮಂತ್ರಿ ಹಾಗೂ ಪಕ್ಷದ ನಾಯಕತ್ವಕ್ಕೆ ಧನ್ಯವಾದಗಳು" ಎಂಬ ಘೋಷಣೆಗಳು ಮೊಳಗಿದವು. ಅನೇಕ ಕಡೆಗಳಲ್ಲಿ ಬಿ. ನಾಗೇಂದ್ರ ಅವರ ಭಾವಚಿತ್ರಗಳಿಗೆ ಹೂವಿನ ಹಾರ ಹಾಕಿ ಗೌರವ ಸಲ್ಲಿಸಲಾಯಿತು. ಪಟಾಕಿ ಸಿಡಿಸಿ, ಸಿಹಿ ಹಂಚುವ ಮೂಲಕ ಸಂಭ್ರಮಾಚರಣೆ ನಡೆಯಿತು.

**ಹಲವು ತಿಂಗಳ ಹೋರಾಟಕ್ಕೆ ಫಲ:** ಬಿ. ನಾಗೇಂದ್ರ ಅವರಿಗೆ ಸಚಿವ ಸ್ಥಾನ ನೀಡಬೇಕೆಂಬ ಆಗ್ರಹ ಕಳೆದ ಹಲವು ತಿಂಗಳುಗಳಿಂದ ಬಳ್ಳಾರಿ ಜಿಲ್ಲೆಯಲ್ಲಿ ತೀವ್ರವಾಗಿ ವ್ಯಕ್ತವಾಗಿತ್ತು. ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಅಭಿಮಾನಿಗಳು ಪ್ರತಿಭಟನೆ, ಧರಣಿ, ಮೆರವಣಿಗೆ ಸೇರಿದಂತೆ ಹಲವು ರೀತಿಯ ಹೋರಾಟಗಳನ್ನು ನಡೆಸಿ ಪಕ್ಷದ ಹೈಕಮಾಂಡ್ ಹಾಗೂ ರಾಜ್ಯ ಸರ್ಕಾರದ ಗಮನ ಸೆಳೆದಿದ್ದರು. ಜಿಲ್ಲೆಯ ಅಭಿವೃದ್ಧಿಗೆ ಬಿ. ನಾಗೇಂದ್ರ ನೀಡಿರುವ ಕೊಡುಗೆ, ಅವರ ಆಡಳಿತಾತ್ಮಕ ಅನುಭವ ಹಾಗೂ ಪಕ್ಷದ ಸಂಘಟನೆಯಲ್ಲಿ ವಹಿಸಿರುವ ಪ್ರಮುಖ ಪಾತ್ರವನ್ನು ಪರಿಗಣಿಸಿ ಸಚಿವ ಸಂಪುಟದಲ್ಲಿ ಸ್ಥಾನ ನೀಡಬೇಕೆಂದು ಹಲವು ಜನಪ್ರತಿನಿಧಿಗಳು ಹಾಗೂ ಸಂಘಟನೆಗಳು ಒತ್ತಾಯಿಸಿದ್ದವು.

**ಅಭಿವೃದ್ಧಿಗೆ ಹೊಸ ಚೈತನ್ಯದ ನಿರೀಕ್ಷೆ:** ಬಿ. ನಾಗೇಂದ್ರ ಅವರಿಗೆ ಸಚಿವ ಸ್ಥಾನ ದೊರೆತಿರುವುದರಿಂದ ಬಳ್ಳಾರಿ ಜಿಲ್ಲೆಗೆ ಸರ್ಕಾರದಲ್ಲಿ ಮತ್ತೊಮ್ಮೆ ಬಲಿಷ್ಠ ಪ್ರತಿನಿಧಿತ್ವ ಸಿಕ್ಕಂತಾಗಿದೆ ಎಂದು ರಾಜಕೀಯ ವಲಯದ ನಾಯಕರು ಅಭಿಪ್ರಾಯಪಟ್ಟಿದ್ದಾರೆ. ವಿಶೇಷವಾಗಿ ನೀರಾವರಿ, ರಸ್ತೆ, ಶಿಕ್ಷಣ, ಆರೋಗ್ಯ, ಕೈಗಾರಿಕಾ ಅಭಿವೃದ್ಧಿ ಸೇರಿದಂತೆ ಹಲವು ಪ್ರಮುಖ ಯೋಜನೆಗಳಿಗೆ ಹೆಚ್ಚಿನ ಆದ್ಯತೆ ದೊರೆಯುವ ನಿರೀಕ್ಷೆ ವ್ಯಕ್ತವಾಗಿದೆ.

**ಕಾರ್ಯಕರ್ತರ ಸಂತಸ:** ಈ ಸಂದರ್ಭದಲ್ಲಿ ಮಾತನಾಡಿದ ಬಿ. ನಾಗೇಂದ್ರ ಅವರ ಅಭಿಮಾನಿಗಳು ಹಾಗೂ ಕಾರ್ಯಕರ್ತರು, "ಕಳೆದ ಹಲವು ತಿಂಗಳುಗಳಿಂದ ನಮ್ಮ ನಾಯಕರಿಗೆ ಸಚಿವ ಸ್ಥಾನ ದೊರೆಯಲೆಂದು ದೇವಸ್ಥಾನಗಳಲ್ಲಿ ವಿಶೇಷ ಪೂಜೆ, ಹೋಮ-ಹವನ ಹಾಗೂ ಪ್ರಾರ್ಥನೆಗಳನ್ನು ನಡೆಸಿದ್ದೇವೆ. ಇಂದು ದೇವರ ಕೃಪೆಯಿಂದ ಹಾಗೂ ಪಕ್ಷದ ನಾಯಕತ್ವದ ವಿಶ್ವಾಸದಿಂದ ಅವರಿಗೆ ಮತ್ತೆ ಸಚಿವ ಸ್ಥಾನ ದೊರೆತಿರುವುದು ನಮಗೆ ಅಪಾರ ಸಂತಸ ತಂದಿದೆ. ಇದು ಕೇವಲ ಬಿ. ನಾಗೇಂದ್ರ ಅವರ ಗೆಲುವಲ್ಲ, ಬಳ್ಳಾರಿ ಗ್ರಾಮಾಂತರ ಕ್ಷೇತ್ರದ ಪ್ರತಿಯೊಬ್ಬ ಕಾರ್ಯಕರ್ತ ಹಾಗೂ ಜನರ ಗೆಲುವಾಗಿದೆ," ಎಂದು ಸಂತಸ ವ್ಯಕ್ತಪಡಿಸಿದರು.

**ಶುಭಾಶಯಗಳ ಮಹಾಪೂರ:** ಸಚಿವ ಸ್ಥಾನ ಲಭಿಸಿರುವ ಹಿನ್ನೆಲೆಯಲ್ಲಿ ಜಿಲ್ಲೆಯ ವಿವಿಧ ಭಾಗಗಳಿಂದ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು, ಜನಪ್ರತಿನಿಧಿಗಳು ಹಾಗೂ ಸಾರ್ವಜನಿಕರು ಬಿ. ನಾಗೇಂದ್ರ ಅವರಿಗೆ ಶುಭಾಶಯಗಳನ್ನು ಸಲ್ಲಿಸುತ್ತಿದ್ದಾರೆ. ಅವರ ನಿವಾಸಕ್ಕೆ ಭೇಟಿ ನೀಡಿ ಅಭಿನಂದನೆ ಸಲ್ಲಿಸುವವರ ಸಂಖ್ಯೆ ಹೆಚ್ಚಾಗಿದ್ದು, ಸಾಮಾಜಿಕ ಜಾಲತಾಣಗಳಲ್ಲಿಯೂ ಸಾವಿರಾರು ಶುಭಾಶಯ ಸಂದೇಶಗಳು ಹರಿದು ಬರುತ್ತಿವೆ. ಬಳ್ಳಾರಿ ಜಿಲ್ಲೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರಲ್ಲಿ ಹೊಸ ಉತ್ಸಾಹ ಮೂಡಿದ್ದು, ಮುಂದಿನ ದಿನಗಳಲ್ಲಿ ಜಿಲ್ಲೆಯ ಅಭಿವೃದ್ಧಿಗೆ ಇನ್ನಷ್ಟು ವೇಗ ಸಿಗಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000, Telephone Number:08483200222

PRGI NO. (RNINO:KARKAN/2011/48371)